ಅಚಲ

ದ್ವೈಮಾಸಿಕ, ಮಾರ್ಚ್ 8, 1993



ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಸಂಪುಟ : 9 ಸಂಚಿಕೆ : 2

"ಅಚಲ" ಪತ್ರಿಕೆಯನ್ನು ಪಡೆಯ ಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹದಿನಾರು ರೂಪಾಯಿಗಳನ್ನು ಎಂ. ಓ/ಡ್ರಾಫ್ಟ್ ಮೂಲಕ ಕಳುಹಿಸಿ, ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೆ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

ಲೇಖನ, ಹಣ ಕಳುಹಿಸಬೇಕಾದ ವಿಳಾಸ :—

ಎನ್. ಗಾಯತ್ರಿ
ಬಿ–30, ರಿಸರ್ವ್ ಬ್ಯಾಂಕ್ ಸ್ಟಾಫ್ ಕ್ವಾರ್ಟರ್ಸ್,
9ನೇ ಕ್ರಾಸ್, ಒಂದನೇ ಮೇನ್
ವಿಜಯನಗರ 2ನೇ ಹಂತ
ಬೆಂಗಳೂರು : 560 040

ಸ್ತ್ರೀವಾದಿ ವಿಶೇಷಾಂಕ :

ಪ್ರತಿ ವರ್ಷದಂತೆ ಮಾರ್ಚ್ ತಿಂಗಳ ಅಚಲ ವಿಶೇಷ ಸಂಚಿಕೆಯಾಗಿ ಹೊರಬರುತ್ತಿದೆ. ಸ್ತ್ರೀವಾದಿ ಚಿಂತನೆಗೆ ಮೀಸಲಾಗಿರುವ ಈ ಸಂಚಿಕೆಯ ಬಗ್ಗೆ ಓದುಗರ ಮುಕ್ತ ಮನಸ್ಸಿನ ಅಭಿಪ್ರಾಯಗಳನ್ನು ನಿರೀಕ್ಷಿಸುತ್ತೇವೆ.

—ಸಂಪಾದಕರು

ಚಂದಾ ವಿವರ :

ವಾರ್ಷಿಕ ಚಂದಾ	:	ರೂ. 15.00
ಆಜೀವ ಚಂದಾ	:	ರೂ. 150.00
ಸಂಸ್ಥೆಗಳಿಗೆ	:	ರೂ. 200.00
ಬಿಡಿ ಪ್ರತಿ	:	ರೂ. 2.00
ವಿಶೇಷ ಪ್ರತಿ	:	ರೂ. 3.50

**Printed at Lipi Mudrana,
No. 1, Bugle Rock Road, Bangalore-4.
Published by, Dr. G. Ramakrishna on behalf of Jagruthi Mahila Adhyayana Kendra, Bangalore.**

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಸ್ತ್ರೀವಾದಿ ಹೋರಾಟ : ಒಂದು ಮರು ಚಿಂತನೆ

ಮಾರ್ಚ್ 8 ಮತ್ತೆ ಮರಳಿದೆ. ಈ ದಿನಾಂಕ ಹೊತ್ತು ತರುವ ಮಹಿಳಾ ಹೋರಾಟದ ನೆನಪಿನ ಸಂದರ್ಭದಲ್ಲಿ ಕರ್ನಾಟಕದ ಸ್ತ್ರೀವಾದಿ ಚಳುವಳಿ ಎತ್ತ ಸಾಗಿದೆ ? ಎಂಬುದನ್ನು ಮತ್ತೆ ವಿವೇಚಿಸುವುದು ಅವಶ್ಯಕವಾಗಿದೆ

ಎಪ್ಪತ್ತರ ದಶಕದ ಕೊನೆಯಲ್ಲಿ ದೇಶದ ರಾಜಕೀಯಾರ್ಥಿಕ ವಿದ್ಯಮಾನಗಳ ಒತ್ತಡದೊಂದಿಗೆ ಈ ನೆಲದಲ್ಲೂ ಸ್ತ್ರೀವಾದಿ ಸಂಘಟನೆಗಳು ಹುಟ್ಟಿದವು. ಮೈಸೂರಿನ ಸಮತಾವೇದಿಕೆ, ಬೆಂಗಳೂರಿನ ವಿಮೋಚನಾ, ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಜನವಾದಿಗಳ ಸಂಘಟನೆ, ಮಾನಿನಿ ಮುಂತಾದ ಮಹಿಳಾ ಸಂಘಟನೆಗಳು ಪುರುಷ ಪ್ರಧಾನ ವ್ಯವಸ್ಥೆಯ ಮೌಲ್ಯಗಳ ವಿರುದ್ಧ ಹೋರಾಟ ಆರಂಭಿಸಿದವು. ಸ್ತ್ರೀಯರ ಮೇಲಿನ ದಬ್ಬಾಳಿಕೆ, ಅತ್ಯಾಚಾರ, ವರದಕ್ಷಿಣೆ, ಬಹುಪತ್ನಿತ್ವ, ವಿವಾಹ ವಿಚ್ಛೇದನೆ, ವಧೂದಹನ, ಬೀಡಿ ಕಾರ್ಮಿಕ ಸ್ತ್ರೀಯರ ಸಮಸ್ಯೆ, ದುಡಿಯುವ ಮಹಿಳೆಯರ ಸಮಸ್ಯೆ ಮೊದಲಾದವುಗಳ ವಿರುದ್ಧವಾಗಿ ಬಿಡಿ ಬಿಡಿಯಾಗಿ, ಹಲವು ಸಲ ಬೇರೆ ಸಂಘಟನೆಗಳೊಂದಿಗೆ ಜೊತೆಗೂಡಿ ಹೋರಾಟ ನಡೆಸತೊಡಗಿದವು.

ರಾಜಕೀಯಾರ್ಥಿಕ ಸಮಾನತೆ, ಸ್ವಾತಂತ್ರ್ಯ, ಹಕ್ಕು, ಸವಲತ್ತುಗಳಿಗಾಗಿ ಹೋರಾಟದ ದಾರಿಯನ್ನು ರೂಪಿಸಿಕೊಳ್ಳುತ್ತಿರುವಾಗಲೇ ಈ ಸ್ತ್ರೀವಾದಿ ಸಂಘಟನೆಗಳು ಮಹಿಳಾ ಪತ್ರಿಕೆಗಳನ್ನು, ಸ್ತ್ರೀವಾದಿ ವೈಚಾರಿಕ ಬರಹಗಳನ್ನು ಪ್ರಕಟಿಸತೊಡಗಿದವು. ಸ್ತ್ರೀವಾದಿ ಚಿಂತನೆಯ ಸ್ವತಂತ್ರ ಗ್ರಂಥಗಳ ರಚನೆ, ಸಭೆ, ಚರ್ಚೆ, ವಿಚಾರ ಸಂಕಿರಣಗಳ ಮೂಲಕ ಸಾಹಿತ್ಯ ಮತ್ತು ಕಲೆಯಂಥ ಸಾಂಸ್ಕೃತಿಕ ನೆಲೆಯತ್ತ ತಮ್ಮ ಹೋರಾಟದ ವಲಯವನ್ನು ವಿಸ್ತರಿಸಲು ಯತ್ನಿಸಿದವು. ಈ ಬಗೆಯ ಚಿಂತನೆ—ಮಂಥನಗಳ ಮೂಲಕ ಸ್ತ್ರೀವಾದದ ಸೈದ್ಧಾಂತಿಕ ನೆಲೆಯನ್ನು ತಮಗೇ ಸ್ಪಷ್ಟಪಡಿಸಿಕೊಳ್ಳಲು, ಇಂದಿಗೂ ಈ ಸಂಘಟನೆಗಳು ತಮ್ಮದೇ ಆದ ರೀತಿಗಳಲ್ಲಿ ದುಡಿಯುತ್ತಿವೆ.

ಸಾಂಸ್ಕೃತಿಕ ವಲಯದಲ್ಲಿ :—

ಅಂತರಾಷ್ಟ್ರೀಯ ಮಹಿಳಾ ವರ್ಷ/ದಶಕಗಳ ಜಾಗತಿಕ ಆಚರಣೆಯ ಸಂಬಂಧದಲ್ಲಿ ಮೂರನೇ ಜಗತ್ತಿನ ದೇಶಗಳ ಮಹಿಳೆಯರ ಸಮಸ್ಯೆಗಳು ಮುಖ್ಯವಾಗಿ ಗಮನ ಸೆಳೆದವು. ದೇಶದ ಅಧಿಕಾರಶಾಹಿ ಕಲ್ಪಿಸಿದ ಮೊಸಲಾತಿ ಸ್ತ್ರೀ ಅಭಿವೃದ್ಧಿ ಧೋರಣೆ, ಯೋಜನೆಗಳಿಂದ ಅನುಕೂಲಕರ ಪರಿಸರ ಹುಟ್ಟಿದಾಗ ಶಾಶ್ವತಿ ಮಹಿಳಾ ಅಧ್ಯಯನ ಕೇಂದ್ರ, ಕರ್ನಾಟಕ ಲೇಖಕಿಯರ ಸಂಘಗಳಂಥ ಮಹಿಳಾ ಸಂಘಟನೆಗಳು ಸ್ತ್ರೀಪರ ಚಿಂತನೆ, ನಿರ್ಲಕ್ಷಿತ ಮಹಿಳಾ ಬರಹಗಳ ಉತ್ಪನನ ಮತ್ತು ಪ್ರಕಾಶನ, ಮಹಿಳಾ ಅಧ್ಯಯನಗಳಿಗೆ ಪ್ರೋತ್ಸಾಹ, ಬೆಂಬಲ ನೀಡತೊಡಗಿದವು. ಮೂರು ವಿಶ್ವವಿದ್ಯಾನಿಲಯಗಳಲ್ಲೂ ಮಹಿಳಾ ಅಧ್ಯಯನ ಪೀಠಗಳೂ ಸ್ಥಾಪಿತವಾದವು. ಇನ್ನೊಂದೆಡೆ ವಿಮೋಚನಾ, ಮಾನಿನಿ ಸಂಘಟನೆಗಳು ಕವಲೊಡೆದವು. ಸಮುಖ್ಯಾ, ಎಂ. ಎಸ್. ಎಸ್.ನಂಥ ಸಂಘಟಿತ ಮಹಿಳಾ ಶಾಖೆಗಳೂ ಎಲ್ಲಸ್ತರಗಳ ಮಹಿಳೆಯರ ಸಮಸ್ಯೆಗಳ ನಿವಾರಣೆಗೆ ಕಾರ್ಯನಿರತವಾಗಿವೆ. ದಲಿತ—ಬಂಡಾಯ ಸಾಹಿತ್ಯ ಚಳವಳಿಯಿಂದ ಪ್ರೇರಿತವಾದ ಸಮಕಾಲೀನ ಸಾಹಿತ್ಯ ವಾತಾವರಣದಲ್ಲಿ ಪ್ರಧಾನ ಪರಂಪರೆಯ ಬುದ್ಧಿಜೀವಿ ವರ್ಗ "ಸ್ತ್ರೀವಾದಿ ವಿಮರ್ಶೆ"ಯನ್ನು ಚರ್ಚೆಯ ಆಸಕ್ತಿಯ ವಿಷಯವನ್ನಾಗಿಸಿಕೊಳ್ಳತೊಡಗಿದೆ. ಎಡಪಕ್ಷಗಳು

ತುಂಬ ಕ್ರಿಯಾಶೀಲವಾಗಿ ಪಾಲುಗೊಳ್ಳುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಹೋರಾಟ ಮತ್ತು ಸಾಕ್ಷರತಾ ಆಂದೋಲನ, ಕೋಮು ಸೌಹಾರ್ದತಾ ಆಂದೋಲನಗಳೊಂದಿಗೆ ಜಾಗೃತಿ, ಸಮತಾ, ಜನವಾದಿ ಮಹಿಳಾ ಸಂಘಟನೆಯಂಥ, ಸಂಘಟನೆಗಳೂ ಸೇರಿವೆ.

ಇಷ್ಟೆಲ್ಲ ಧನಾತ್ಮಕ ಅಂಶಗಳನ್ನು ಕರ್ನಾಟಕದಲ್ಲಿನ ಹದಿನೈದು ವರ್ಷಗಳ ಮಹಿಳಾ ಆಂದೋಲನದಲ್ಲಿ ಕಾಣಬಹುದು. ಹಾಗಿದ್ದೂ ನಾಡಿನ ಎಲ್ಲ ಜನಸ್ತೋಮವನ್ನು ಅಲುಗಾಡಿಸಬಲ್ಲಂಥ ಪ್ರಬಲ ಆಂದೋಲನವಾಗಿ ಇದು ಬೆಳೆಯುತ್ತಿಲ್ಲ. ಇದಕ್ಕೆ ಕಾರಣವೇನೆಂಬ ಬಗ್ಗೆ ಸ್ತ್ರೀವಾದಿ ಹೋರಾಟದಲ್ಲಿ ನಂಬಿಕೆಯಿರುವವರೆಲ್ಲರೂ ಸ್ವವಿಮರ್ಶಾತ್ಮಕವಾಗಿ ಚಿಂತಿಸಬೇಕಾಗಿದೆ. ಸಿನಿಕತನದ ಬುದ್ಧಿಜೀವಿಗಳ ಟೀಕೆ, ಗುಮಾನಿಗಳನ್ನು ಬದಿಗಿರಿಸಿ, ಒಳಹೊಕ್ಕು ಪರಿಶೀಲಿಸುವವರಿಗೆ ಮೊದಲಿಗೆ ಗೋಚರಿಸುವುದು ಏಕರೂಪದ್ದೆನ್ನಬಹುದಾದ ಸೈದ್ಧಾಂತಿಕ ಚೌಕಟ್ಟು ಮತ್ತು ಹೋರಾಟ ವಿಧಾನಗಳ ಕೊರತೆ. ಪುರುಷರ ನಿಯಂತ್ರಣದಿಂದ ಹೊರಗೆ ಉಳಿದು—ಅಧಿಕಾರದ ನೆಲೆಯನ್ನು ಸ್ತ್ರೀಯರೇ ನಿರ್ವಹಿಸುವ ಬಗೆಯ ಸ್ವಾಯತ್ತತೆಯನ್ನು ಎತ್ತಿ ಹಿಡಿವ ಸಂಘಟನೆಗಳು ತಳೆವ ನಿಲುವುಗಳು ಬೇರೆ. ಮಾರ್ಕ್ಸ್‌ವಾದಿ ಚಿಂತನೆಯ ಹಿನ್ನೆಲೆಯಲ್ಲಿರುವ ಸಂಘಟನೆಗಳು ಸ್ತ್ರೀ—ಪುರುಷರಿಬ್ಬರನ್ನೂ ಶೋಷಿತರೆಂದು ಪರಿಗಣಿಸಿ ವಿಮೋಚನೆಗಾಗಿ ಇಬ್ಬರೂ ಹೋರಾಡಬೇಕಾಗಿದೆಯೆಂಬ ನೆಲೆಯಿಂದ ತಳೆವ ನಿಲುವುಗಳೇ ಬೇರೆಯಾಗಿವೆ. ಹೋರಾಟದ ಸ್ವರೂಪದ ಮೇಲೆ ಪ್ರಭಾವ ಬೀರುತ್ತಿರುವ ಭಿನ್ನತೆ ಇದು.

ಈ ತಾತ್ವಿಕ ಭೇದವನ್ನು ಒತ್ತಟ್ಟಿಗಿಟ್ಟು "ಸ್ವಾಯತ್ತತೆ"ಯ ಪರಿಕಲ್ಪನೆಯ ವಾಸ್ತವ ಸಾಧ್ಯತೆಗಳನ್ನು ಪರಿಶೀಲಿಸಬೇಕಿದೆ. ಸ್ತ್ರೀವಾದದ ಸೈದ್ಧಾಂತಿಕ ತತ್ವದಿಂದ ಆರಂಭಿಸಿ, ಸ್ತ್ರೀವಾದಿಗಳು ಬೆಳೆಸಿ, ಬಳಸುತ್ತಿರುವ ಹೋರಾಟ ತಂತ್ರಗಳವರೆಗೆ ಪ್ರತಿ ಹಂತದಲ್ಲೂ ಪುರುಷ ನಿರ್ಮಿತ ಹಾದಿಗೇ ಋಣಿಯಾಗಿರುವ ವಾಸ್ತವವನ್ನು ಅಲ್ಲಗಳೆಯುವಂತಿಲ್ಲ. ವೈಚಾರಿಕ ಅಥವಾ ಬೇರೆ ಯಾವುದೇ ನೆಲೆಯಲ್ಲಿ ಪುರುಷ ಸಂಸ್ಕೃತಿಯಿಂದ ಪೃಥಕ್ಕರಿಸಿ ಕೇವಲ ಸ್ತ್ರೀಯರದೇ ಸ್ವಾಯತ್ತವೆನ್ನಬಹುದಾದ್ದು ಪ್ರಚಲಿತ ಸಾಂಸ್ಕೃತಿಕ ವ್ಯವಸ್ಥೆಯೊಳಗಿದೆಯೇ ?

ಈ ವ್ಯವಸ್ಥೆಯಲ್ಲಿದ್ದುಕೊಂಡೇ ಬದಲಾವಣೆಗಾಗಿ ಸ್ತ್ರೀವಾದಿ ಹೋರಾಟ ನಡೆಯಬೇಕಾದ್ದು ಅನಿವಾರ್ಯ. ಕುಟುಂಬ, ಸಮಾಜಗಳಲ್ಲಿ ನಮ್ಮೊಂದಿಗಿರುವ ಪುರುಷರೊಳಗೆ ಸ್ತ್ರೀವಾದಿ ಸಂವೇದನೆಗಳನ್ನು ಜಾಗೃತಗೊಳಿಸುವುದು, ಅವರನ್ನು ಶಿಕ್ಷಿತರನ್ನಾಗಿ ಮಾಡುವುದು ಹೇಗೆ ಅನಿವಾರ್ಯವೋ ಅದೇ ರೀತಿಯಲ್ಲಿ ಮಾನವೀಯತಾವಾದಿ ಪಕ್ಷಗಳೊಳಗೂ ಇರಬಹುದಾದ ಪಿತೃಪ್ರಧಾನ ಅಧಿಕಾರ, ಮೌಲ್ಯಪಾಲನೆಗಳನ್ನೂ ಜೊತೆಗಿದ್ದುಕೊಂಡೇ ಪ್ರಶ್ನಿಸುವುದು, ತಿದ್ದುವುದು ಅನಿವಾರ್ಯ. ಈಗಿನ ನಮ್ಮ ಚಿಕ್ಕಪುಟ್ಟ ಹೋರಾಟಗಳಿಗೂ ಸಹಾನುಭೂತಿಯುಳ್ಳ ಪುರುಷರ, ಸಂಘಟನೆಗಳ ನೆರವು ಬೆಂಬಲ, ಪ್ರೋತ್ಸಾಹಗಳನ್ನು ಪಡೆಯುವುದು ಅನಿವಾರ್ಯವಾಗುವಂತೆಯೇ ಇದೂ. ಅಲ್ಲದೆ "ಅಧಿಕಾರ' ಶಕ್ತಿ ರಾಜಕೀಯಗಳ ಪರಿಕಲ್ಪನೆಗೆ 'ಸ್ವಾಯತ್ತ" ಹೋರಾಟದ ಪರಿಕಲ್ಪನೆ ಪರ್ಯಾಯವಾಗಬಲ್ಲದೆ ಅಥವಾ ಕೇವಲ ಮುಂದುವರಿದ ಅತಿರೇಕವೆ ಎಂಬುದನ್ನೂ ಚಿಂತಿಸಬೇಕಾಗಿದೆ. ಈ ದಿಕ್ಕಿನಲ್ಲಿ ಸ್ತ್ರೀವಾದಿ ಸಂಘಟನೆಗಳು ತಮ್ಮ ಭಿನ್ನತೆಯ ಬಿಗಿತಗಳನ್ನು ಬಿಟ್ಟು ಮುಕ್ತ ಚರ್ಚೆಗೆ ತೊಡಗಬೇಕಾದದ್ದು ಇಂದಿನ ಅಗತ್ಯವಾಗಿದೆ. ಈ ಚಿಂತನೆಯು ಕೇವಲ ಅಮೂರ್ತ ಯುತೋಪಿಗಳನ್ನು ಸಾರುವುದರ ಆಚೆಗೆ ನಿಜವಾದ ಕ್ರಿಯಾರೂಪದ ಚಳವಳಿಯತ್ತ ಮುನ್ನಡೆ ಸಾಧಿಸಬೇಕಾಗಿದೆ.

ಸ್ತ್ರೀವಾದಿ ಹೋರಾಟ ತೀವ್ರವಾಗಿ ಬೆಳೆಯದಂತೆ ಅಡ್ಡಿಯಾಗಿರುವ ಮತ್ತೊಂದು ಮುಖ್ಯ ಸಂಗತಿ ಈ ಎಲ್ಲ ಚರ್ಚೆ ಆಂದೋಲನಗಳು ಗ್ರಾಮೀಣ—ನಿರಕ್ಷರಸ್ತ ಸ್ತ್ರೀ ಸಮುದಾಯದಿಂದ ದೂರವುಳಿದಿರುವುದೇ ಆಗಿದೆ. ಬಹುಸಂಖ್ಯಾತ ಸ್ತ್ರೀಯರು ಈ ವಲಯಗಳಲ್ಲಿದ್ದು, ಅವರೆಲ್ಲ ಸಾಂಸ್ಕೃತಿಕ. ಆರ್ಥಿಕ ನೆಲೆಗಳಲ್ಲಿ ತಮ್ಮ ತಮ್ಮ ಪುರುಷ ಸಮೂಹಕ್ಕೆ ಹೆಚ್ಚಿನ ಬದ್ಧತೆಯನ್ನು ಹೊಂದಿದ್ದಾರೆ. ಅವರ ಪುರುಷಾಧಿಷ್ಠಿತ ಪ್ರಪಂಚದಲ್ಲಿ ಸ್ತ್ರೀಯರು ಪರಸ್ಪರರಿಗೆ ಕೇವಲ ಸ್ಪರ್ಧಿಗಳಾಗಿ ಮಾತ್ರ ಕೋರುತ್ತಾರೆ. ಈ ಸ್ತ್ರೀಯರ ದೈನಂದಿನ ಬದುಕಿನ ಸಮಸ್ಯೆಗಳಿಗೆ ಸಂವಾದಿಯಾಗಲಾರದ ಯಾವ ಸಮಾನತೆಯ ಕಲ್ಪನೆಗಳೂ ಅವರ ಮನಸ್ಸುಗಳನ್ನು ಸೋಂಕಲಾರವು. (ಒಳ ರಕ್ಷಾಪುಟದಲ್ಲಿ ನೋಡಿ)

ನಮ್ಮ ಹುಡುಗಿಯರು

ಪ್ರಜ್ಞಾ ಮತ್ತೀಹಳ್ಳಿ
ಶಿರಸಿ

ಮೊನ್ನೆ ಮೆದುಳ ರಸ ಆವಿಯಾಗಿ
ಪದೆಯ ಬಯಲಲಿ ಭಾಷನದಿ
ಬತ್ತುವ ರಣಬಿಸಿಲಲಿ ಗೇಟುದಾಟಿ
ಒತ್ತಿದ ಕರೆಗಂಟೆಗೆ ತೆರೆದ ಬಾಗಿಲಲಿ
ನಿಂತವಳ ಕಾಲುಂಪುರದ ಉಗುರಿಂದ
ಚಿಂತೆ ನೆರೆದ ನಿಗುರತನಕ ನೋಡಿದೆ !

ಗುಳಿ ಕಣ್ಣಲ್ಲಿ ಹರ್ಷ ಮಿಂಚಿಸಿ
ಬಾಡಿದ ತುಟಿಗಳಲಿ ನಗು ತೇಲಿಸಿ
ಒರಟುಗಟ್ಟಿದ ಬೆರಳಲ್ಲಿ ಒಳಗೆಳೆದವಳಲ್ಲಿ
ಕಾಲೇಜು ದಿನಗಳಲ್ಲಿ ಚಿನಕುರುಳಿಯಂತೆ
ಹರಟುತ್ತಿದ್ದ ಜೀವಂತಿಕೆಯರಸಿದೆ !

ಕಾದ ಬಾಣಲೆಯಲ್ಲಿ ಸುರಿದ ರವೆಯು
ಕಣಗಳ ನಡುವೆ ಸೌಟು ಕೆದರುವಳ
ಕೆಂಪು ಮುಖದ ಬೆವರ ಹನಿಗಳಲ್ಲಿ
ಮನದ ಮೃದು ಭಾವಗಳ ನವಿರಾಗಿ
ಚಿತ್ರಿಸುತ್ತಿದ್ದ ಕವಿಯ ಹುಡುಕಿದೆ !

ಹರಿತ ಚಾಕುವನಲ್ಲಿ ಪದರ ಕಳಚಿದ
ಈರುಳ್ಳಿಗಳು ಚರಚರ ತುಂಡಾಗುತ್ತ
ರೆಪ್ಪಲ್ಲನೆ ಚಿಮ್ಮಿದ ಕಣ್ಣೀರಲ್ಲಿ
ಸ್ತ್ರೀ ಶೋಷಣೆ ಖಂಡಿಸಿ ಪ್ರಶಸ್ತಿ ಗೆದ್ದ
ಚರ್ಚಾ ಪಟುವ ತಡಕಾಡಿದೆ !

ತಡವಾಗಿ ಬಂದು ಸೋಪು ಕದಿವ
ಕೆಲಸದವಳು, ದರ ಏರಿಸಿಯೂ ನೀರು
ಬೆರೆಸುವ ಹಾಲಿನವನ ದೂರಿನಲ್ಲಿ
ಅರ್ಥವ್ಯವಸ್ಥೆಯ ಮಹಾ ಪ್ರಬಂಧದೊಡನೆ
ಎಂ. ಎ. ಮಾಡಿದ ಸ್ವರ್ಣ ಪದಕವ ಕೆದಕಿದೆ !

ಕುಡಿವ ಚಹಕ್ಕಿಂತ ಹೆಚ್ಚಾಗಿ ಕೆದಕಿದ
ಹಳೆಯ ನೆನಪುಗಳು ಬಿಸಿ ಕೊಟ್ಟಾಗ
ಮೇಲೆದ್ದು, ನಡುಗುವ ಬೆರಳ ನಡುವೆ
ಆರಿಶಿಣದ ಕರೆಯೋಲೆ ಕೈಗಿತ್ತೆ
ಬರಲೇಬೇಕೆಂಬ ಒತ್ತಾಯದೊಂದಿಗೆ !

ಹೀಗೆ ಅಲ್ಲವೇ ನಮ್ಮ ಹುಡುಗಿಯರು
ಉಮಾ, ರಾಜಿ, ಇಂದಿರಾಗಳು
ಅಪ್ಪ ಕೊಂಡ ಗಂಡಿಗೆ, ಮಾಲೆ ಹಾಕಿ
ತಮ್ಮ ಕನಸುಗಳ ಸೇರಕ್ಕಿಯೊದ್ದು
ಅವನ ಧೋರಣೆಯ ಮನೆಯ ಹೊಕ್ಕವರು !

ಲಟಗುಡುವ ಮಂಚದ ಕೀಲುಗಳಡಿ
ತಮ್ಮ ನೋವಿನ ಚೀತ್ಕಾರಗಳಡಗಿಸಿ
ಹೊಳೆವ ಸ್ಟೀಲ ಪಾತ್ರೆಗಳಲ್ಲಿ ಧನ್ಯತೆಯ
ಬೆಳಕ ಕಾಣುತ್ತ, ಹೊಸಿಲ ರಂಗವಲ್ಲಿಗೆ
ಬದುಕಿನಾದರ್ಶಗಳ ಬಣ್ಣ ತುಂಬುತ್ತ,
ಗಣೇಶ ಚೌತಿ, ಮಾವನ ತಿಥಿಗಳ ಲೆಕ್ಕದಲ್ಲಿ
ಉರುಳಿದ ಬಾಳವಸಂತದ ಅರಿವಿಲ್ಲದವರು.
ಇವರು ನಮ್ಮ ಹುಡುಗಿಯರು ! ! !

ಸಮಾನತೆಯ ಸಂದೇಶ ಸಾರಲು ಜಾಥಾ

ಒಂದು ವರದಿ

ದೇವಿ

ಇದೇ ಮಾರ್ಚ್ 15 ರಿಂದ 31 ರವರೆಗೆ **ಸಮತಾ ಕಲಾ ಜಾಥಾವೊಂದು** ರಾಜ್ಯದ ನಾನಾ ಭಾಗಗಳಲ್ಲಿ ಸಂಚರಿಸಿ ಸಾಕ್ಷರತೆಯ ಸಂದೇಶವನ್ನು ಸಮಾಜದ ಎಲ್ಲ ವರ್ಗಗಳಲ್ಲಿ ಬಿತ್ತಲಿದೆ. ಯಾವುದು ಈ ಜಾಥಾ? ರಾಷ್ಟ್ರವ್ಯಾಪಿ ಕಾರ್ಯಕ್ರಮವಾದ ಕಲಾ ಜಾಥಾದ ಉದ್ದೇಶವೇನು ? ಸಮತಾದ ಧ್ಯೇಯೋದ್ದೇಶಗಳೇನು ? ಈ ಪ್ರಶ್ನೆಗಳಿಗೆ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಮತಾ ರಾಜ್ಯಮಟ್ಟದ ಸಮ್ಮೇಳನದ ನಡವಳಿಕೆಯೇ ಉತ್ತರವಾಗಬಲ್ಲುದು.

ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವ ಶ್ರೀ ಧರ್ಮಸಿಂಗ್‌ರವರು ಉದ್ಘಾಟಿಸಿದ ಈ ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀಮತಿ ಹೇಮಲತಾ ಮಹಿಷಿ, ಶ್ರೀಮತಿ ಸಾರಾ ಅಬೂಬಕರ್, ಶ್ರೀಮತಿ ಸುಧಾ ರಾಮನ್ ಹಾಗೂ ಅಧ್ಯಕ್ಷೆ ಶ್ರೀಮತಿ ಲಕ್ಷ್ಮೀ ನಿಜಾಮುದ್ದೀನ್ ಅವರುಗಳ ವಿಚಾರಪೂರ್ಣ ಚಿಂತನೆಯಷ್ಟೇ ಅಲ್ಲದೆ, ಪ್ರತಿನಿಧಿಗಳ ವಿಚಾರಪೂರ್ಣ ಚರ್ಚೆಯೂ ಅರ್ಥಪೂರ್ಣವಾಗಿದ್ದವು.

ಮಹಿಳಾ ಸಾಕ್ಷರತೆಗಾಗಿ ರಾಜ್ಯ ಸಮಾವೇಶದಲ್ಲಿ ವಿವಿಧ ಜಿಲ್ಲೆಗಳಿಂದ ಪ್ರತಿನಿಧಿಗಳು ಬಂದಿದ್ದರು. ಇವರಲ್ಲಿ ಬಹುತೇಕ ಮಂದಿ ಮಹಿಳೆಯರು. ಅನೇಕ ಜನರು ಮಹಿಳಾ ಸಮಾಜ, ವಿವಿಧ ಮಹಿಳಾ ಸಂಘಟನೆಗಳಲ್ಲಿ ಸಕ್ರಿಯರಾಗಿದ್ದವರು. ಪುರಸಭೆ ಉಪಾಧ್ಯಕ್ಷೆಯಾಗಿದ್ದವರೂ ಇದ್ದರು. ಹೀಗಾಗಿ ಸಂಘಟನೆಯ ಸ್ವರೂಪ ಅರಿತಿದ್ದ ಇವರಿಗೆ ಸಾಕ್ಷರತಾ ಆಂದೋಲನ ಕಾರ್ಯಕ್ರಮದ ರೂಪುರೇಷೆಯಷ್ಟೇ ಅಗತ್ಯವಾಗಿತ್ತು. ಸಮಾವೇಶ ಮಾಡಿದ್ದೂ ಅದನ್ನೇ ಎಲ್ಲ ರೀತಿಯ ಶೋಷಣೆ ವಿರುದ್ಧ ಹೋರಾಡಲು ಮಹಿಳೆಯರು ಸಂಘಟಿತರಾಗಬೇಕಲ್ಲದೆ ಅದಕ್ಕೆ ಶಿಕ್ಷಣ ಅಗತ್ಯವೆಂಬ ಸಂದೇಶ ಸಾರಲಾಯಿತು.

ಇಂದು ದೇಶದ ಅನಕ್ಷರಸ್ಥರಲ್ಲಿ ಮಹಿಳೆಯರೇ ಹೆಚ್ಚು. ಮಹಿಳಾ ಸಾಕ್ಷರಸ್ಥರ ಪ್ರಮಾಣ ಕೇವಲ 39.4 ದುಡಿಮೆಗೆ ಕೈ ಹಚ್ಚಲು ಮಧ್ಯದಲ್ಲಿಯೇ ಶಾಲೆ ಬಿಡುವವರಲ್ಲಿ ಕೂಡ ವಿದ್ಯಾರ್ಥಿನಿಯರೇ ಹೆಚ್ಚು. ಮನೆಯಲ್ಲಿ ತಮ್ಮ, ತಂಗಿಯರನ್ನು ನೋಡಿಕೊಳ್ಳಲು ಅಥವಾ ಹೊಲದಲ್ಲಿ ದುಡಿಯಲು ಈ ಬಾಲೆಯರು ಶಿಕ್ಷಣ ಮರೆತು, ಮನೆಯ ಆರ್ಥಿಕ ಸ್ಥಿತಿ ಸುಧಾರಣೆಗೆ ಹೆಗಲು ನೀಡುವುದು ಇಂದಿಗೂ ವಾಸ್ತವಿಕ ಸತ್ಯ. ತಮಗಾಗುತ್ತಿರುವ ಅನ್ಯಾಯದ ಅರಿವೇ ಇಲ್ಲದೆ, ತಮಗೆ ವಂಚನೆಯಾಗುತ್ತಿರುವ ಮೂಲಭೂತ ಹಕ್ಕುಗಳ ಪರಿವೇ ಇಲ್ಲದೆ ದುಡಿವ ಯಂತ್ರಗಳಾಗುತ್ತಿರುವ ಈ ಬಾಲಕಿಯರ, ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಾನಮಾನದ ಸುಧಾರಣೆಗೆ ಸಾಕ್ಷರತಾ ಆಂದೋಲನ ಭದ್ರ ಬುನಾದಿಯಾಗಬಲ್ಲದೆಂಬುದು ನಿರ್ವಿವಾದ. ಶಿಕ್ಷಣದ ಮೂಲಕ ಸಮಾನತೆ ಪಡೆದುಕೊಳ್ಳುವ ಪ್ರಯತ್ನವಿದು. ಸಂಪೂರ್ಣ ಸಾಕ್ಷರತಾ ಆಂದೋಲನದಿಂದ ರೂಪುಗೊಂಡಿರುವ ಮಹಿಳಾ ಶಕ್ತಿಯನ್ನು ಸಮಾನತೆಯ ಹೋರಾಟಕ್ಕಾಗಿ ಸಿದ್ಧಪಡಿಸಲು ಸಮತಾ ಮಹಿಳಾ ಕಲಾ ಜಾಥಾ ಹಮ್ಮಿಕೊಳ್ಳಲಾಗಿದೆ.

ಹಾಡು, ಕುಣಿತ, ನಾಟಕ ಮುಂತಾದ ಕಲಾ ಮಾಧ್ಯಮಗಳ ಮೂಲಕ ಮಹಿಳೆಯರಲ್ಲಿ ಸಾಕ್ಷರತೆ ಮತ್ತು ಸಮಾನತೆಯ ಸಂದೇಶ ಸಾರುವುದು 'ಸಮತಾ'ದ ಉದ್ದೇಶ. ಈ ಗುರಿ ಸಾಧನೆ ಪ್ರಯತ್ನವಾಗಿ ಮಹಿಳೆಯರೇ ಪ್ರಧಾನವಾಗಿರುವ ಕಲಾ ತಂಡಗಳಿಂದ ರಾಷ್ಟ್ರಾದ್ಯಂತ ಸಮತಾ ಕಲಾ ಜಾಥಾ ರೂಪಿಸಲಾಗಿದೆ.

ಮಹಿಳೆಯರಿಗೆ ಅಕ್ಷರ ಕಲಿಸುವುದು ಮಾತ್ರ 'ಸಮತಾ'ದ ಉದ್ದೇಶವಲ್ಲ. ಮಹಿಳೆಯರ ಜಾಗೃತಿ ಮತ್ತು ಹಕ್ಕುಗಳಿಗಾಗಿ ವಿವಿಧ ಕ್ಷೇತ್ರಗಳಲ್ಲಿ ಈಗಾಗಲೇ ಹೋರಾಟ ನಡೆಸುತ್ತಿರುವ ಅಸಂಖ್ಯಾತ ಮಹಿಳೆಯರು ಮತ್ತು ಮಹಿಳಾ ಸಂಘಟನೆಗಳನ್ನು ಸಾಕ್ಷರತಾ ಆಂದೋಲನದ, ಶಕ್ತಿಯೊಂದಿಗೆ ಕೂಡಿಸುವುದು 'ಸಮತಾ'ದ ಗುರಿ. ಇಂಥ ಸಂಘಟಿತ ಹೋರಾಟದಿಂದ ಐತಿಹಾಸಿಕ ಬದಲಾವಣೆ ಸಾಧ್ಯ ಎಂಬುದು ಅದರ ಬಲವಾದ ನಂಬಿಕೆ.

ಫೆಬ್ರವರಿ 13 ಮತ್ತು 14ರಂದು ಬೆಂಗಳೂರಿನಲ್ಲಿ ರಾಜ್ಯಮಟ್ಟದ ಸಮತಾ ಸಮಾವೇಶವೊಂದು ನಡೆಯಿತು. ಮಾರ್ಚ್ 8ರಿಂದ ಏಪ್ರಿಲ್ 8ರವರೆಗೆ ರಾಷ್ಟ್ರಾದ್ಯಂತ ನಡೆಯಲಿರುವ ಸಮತಾ ಮಹಿಳಾ ಕಲಾ ಜಾಥಾದ ಪೂರ್ವ ಸಿದ್ಧತೆಗಾಗಿ ನಡೆಸಿದ ರಾಜ್ಯ ಸಮಾವೇಶವಿದು. ಅದರ ವರದಿ ಇಲ್ಲಿದೆ :

ಶಿಕ್ಷಣವೆಂದರೆ ಅಕ್ಷರ ಕಲಿಕೆ ಮಾತ್ರ ಅಲ್ಲ ಎಂದು 'ಸಮತಾ' ಹೇಳಿದೆ. ಶಿಕ್ಷಣದ ಮೂಲಕ ಮಹಿಳೆಯ ಆತ್ಮ ವಿಶ್ವಾಸ ಹೆಚ್ಚಿಸುವುದು ; ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಆಕೆ ನೀಡುತ್ತಿರುವ ಕೊಡುಗೆಯನ್ನೂ ಗುರುತಿಸುವಂತೆ ಮಾಡುವುದು ; ಸಂಘಟಿತ ಹೋರಾಟಕ್ಕೆ ವೇದಿಕೆ ಒದಗಿಸುವುದು ; ಎಲ್ಲ ಹಂತಗಳಲ್ಲಿ ನಿರ್ಣಾಯಕ ಪಾತ್ರ ವಹಿಸುವಂತೆ ರೂಪಿಸುವುದು ಇವೇ ಮುಂತಾದವು ಶಿಕ್ಷಣದ ನೈಜ ಉದ್ದೇಶ ಎನ್ನುತ್ತದೆ, 'ಸಮತಾ'.

ಹೋರಾಟಕ್ಕೆ ಭೂಮಿಕೆ ಸಿದ್ಧಪಡಿಸುವುದು ಕಲಾ ಜಾಥಾದ ಉದ್ದೇಶ. ಅಂತೆಯೇ 'ಸಮತಾ' ಸಂಘಟನೆಯು ಒಟ್ಟಾರೆ ಹೋರಾಟದ ಗುರಿಯನ್ನು ಗುರುತಿಸಿಕೊಂಡಿದೆ. ಮಹಿಳೆಯರ ಶಿಕ್ಷಣಕ್ಕಾಗಿ ಆರಂಭವಾಗಿರುವ ಈ ಹೋರಾಟ ಮಹಿಳಾ ಸಮಾನತೆಗಾಗಿ ನಡೆಯಬೇಕಾದ ಮಹತ್ತರ ಹೋರಾಟದ ಒಂದು ಭಾಗ ಎನ್ನುತ್ತಾರೆ 'ಸಮತಾ'ದಲ್ಲಿ ಪಾಲ್ಗೊಂಡಿರುವವರು. ಅವರ ಪ್ರಕಾರ ಮಹಿಳಾ ಸಾಕ್ಷರತಾ ಆಂದೋಲನ ಎನ್ನುವುದು ಬಡತನದ ವಿರುದ್ಧ, ಪುರುಷ ಪ್ರಧಾನ ಸಮಾಜದ ವಿರುದ್ಧ, ಹೆಣ್ಣನ್ನು ಕೀಳಾಗಿ ಚಿತ್ರಿಸುವ ಮಾಧ್ಯಮಗಳ ವಿರುದ್ಧ, ಕೋಮುವಾದದ ವಿರುದ್ಧ, ಮಹಿಳೆಯರ ಸಂಘಟನೆಗೆ ತೊಡಕಾಗಿರುವ ಎಲ್ಲ ಶಕ್ತಿಗಳ ವಿರುದ್ಧದ ಹೋರಾಟವಾಗಿದೆ.

ಈ ಎಲ್ಲ ಕನಸು, ಆಶಯ, ಉದ್ದೇಶಗಳ ಎಲ್ಲೆಡೆ ಸಾರಲು ಕೈಗೊಂಡಿರುವ ಯಾತ್ರೆಯೇ ಸಾಂಸ್ಕೃತಿಕ ಜಾಥಾ ಈ ಕಲಾ ಜಾಥಾವು ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು ಎಂಟು ಪ್ರಾದೇಶಿಕ ತಂಡಗಳು ದೇಶದ ನಾನಾಕಡೆ ಸಂಚರಿಸಲಿವೆ. ಸುಮಾರು ಮೂರೂವರೆ ಸಾವಿರ ಕಲಾವಿದರು ದೇಶದ 700 ಕೇಂದ್ರಗಳಲ್ಲಿ ಪ್ರದರ್ಶನ ನೀಡಲಿದ್ದಾರೆ. ಅಂತರ ರಾಷ್ಟ್ರೀಯ ಮಹಿಳಾ ದಿನವಾದ ಮಾರ್ಚ್ 8ರಂದು ಎಂಟು ವಿಭಿನ್ನ ಕೇಂದ್ರಗಳಲ್ಲಿ ಆರಂಭವಾಗಲಿರುವ ಕಲಾ ಜಾಥಾಗಳು 30 ದಿನಗಳ ಅವಧಿಯಲ್ಲಿ 20ಕ್ಕೂ ಹೆಚ್ಚು ರಾಜ್ಯಗಳಲ್ಲಿ ಸಂಚರಿಸಲಿವೆ. ಎಲ್ಲಾ ತಂಡಗಳು ಉತ್ತರ ಪ್ರದೇಶದ ಝಾನ್ಸಿಯಲ್ಲಿ ಏಪ್ರಿಲ್ 8 ಮತ್ತು 9ರಂದು ರಾಷ್ಟ್ರೀಯ ಸಮತಾ ಸಮಾವೇಶದಲ್ಲಿ ಅಂತ್ಯಗೊಳ್ಳುತ್ತವೆ.

ಕರ್ನಾಟಕಕ್ಕೆ ಜಾಥಾದ ಪ್ರವೇಶ ಮಾರ್ಚ್ 15ರಂದು ರಾಜ್ಯದ 13 ಜಿಲ್ಲೆಗಳಲ್ಲಿ 18 ದಿನಗಳ ಕಾಲ ಅದು ಸಂಚರಿಸಲಿದೆ.

ಈ ತಂಡವು ಕೇರಳದ ತಿರುವನಂತಪುರದಲ್ಲಿ ಮಾರ್ಚ್ 8ರಂದು ಪ್ರಾರಂಭವಾಗಿ ಕೇರಳ, ಕರ್ನಾಟಕಗಳನ್ನು ಹಾದು ಮಧ್ಯ ಪ್ರದೇಶಕ್ಕೆ ಹೋಗುತ್ತದೆ. ಕರ್ನಾಟಕದ ಕಲಾವಿದರೂ ಇರುವ ಈ ಕಲಾತಂಡವು ಮಲೆಯಾಳಂ ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕೊಡುತ್ತದೆ.

ಯಾವ ಮಹಿಳೆಯೂ ದ್ವೀಪದಂತಲ್ಲ

— ಶಶಿ ದೇಶಪಾಂಡೆ

ಸ್ತ್ರೀವಾದವನ್ನು ಏಕೆ ಅಮೆರಿಕದ ಶೇಕಡ 63ರಷ್ಟು ಮಹಿಳೆಯರು ತಿರಸ್ಕರಿಸುತ್ತಾರೆಂಬುದನ್ನು ವಿಶ್ಲೇಷಿಸಿದ ಸೂಸನ್ ಫಲುಡಿ ಅವರ ಕೃತಿಯೊಂದನ್ನು ಕುರಿತು ಇತ್ತೀಚಿನ ಟೈಮ್ಸ್ ಪತ್ರಿಕೆಯ ಸಂಚಿಕೆಯೊಂದರಲ್ಲಿ ಚರ್ಚಿಸಲಾಗಿದೆ. ಫಲುಡಿಯ ಪ್ರಕಾರ 'ತುಂಬಾ ಪರಿಣಾಮಕಾರಿಯಾಗಿ ಸ್ತ್ರೀವಾದದ ಉದ್ದೇಶಗಳಿಗೆ ಮತ್ತೆ ಮತ್ತೆ ಕಳಂಕತರುವ, ಅದರ ಸಂದೇಶಗಳನ್ನು ವಿರೂಪಗೊಳಿಸುವ, ಸ್ತ್ರೀವಾದದ ವಿರುದ್ಧದ ದಮನದಲ್ಲಿ ಇದಕ್ಕೆ ಉತ್ತರ ಅಡಗಿದೆ, ಇದನ್ನು ಓದಿದಾಗ ನನ್ನ ಸಂದೇಹಯುತ ಪ್ರತಿಕ್ರಿಯೆಯು, ಈ ಸಂಗತಿಯನ್ನು ವಿವರಿಸಲು ಫಲುಡಿಯು ಮುಂದೊಡ್ಡುವ ತಾತ್ವಿಕತೆಗಿಂತ ಅಮೆರಿಕದ ಶೇಕಡ 63ರಷ್ಟು ಮಹಿಳೆಯರು ಎಂಬ ಸಂಖ್ಯೆಯು ವಿರುದ್ಧವಿತ್ತು. ಈ ಸಂಗತಿಯು ತೋರಿಕೆಗೆ ಮಾತ್ರ ಒಪ್ಪಬಹುದಾದದ್ದೆಂದು ನನಗೆ ತೋರುತ್ತದೆ. ಏಕೆಂದರೆ ಇತ್ತೀಚಿನ ವರ್ಷಗಳಲ್ಲಿ ಗಣನೀಯ ಪ್ರಮಾಣದಲ್ಲಿ, ಮಹಿಳೆಯರು 'ಸದ್ಯ, ದೇವರ ದಯೆ, ನಾನು ಸ್ತ್ರೀ ವಾದಿಯಲ್ಲ' ಎಂದು ಟೀಕಿಸುತ್ತಿರುವುದನ್ನು—ಅದು ಪ್ರಸ್ತುತವೇ ಅಲ್ಲವೇ ಆ ವಿಷಯ ಬೇರೆ— ನಾನು ಕೋಪ ಹಾಗೂ ಜಿಗುಪ್ಸೆಯಿಂದ ಗಮನಿಸುತ್ತಿದ್ದೇನೆ. ದುರದೃಷ್ಟದ ಸಂಗತಿಯೆಂದರೆ ಸಮಾಜದಲ್ಲಿ ಮಾನ್ಯರೆನ್ನಿಸಿಕೊಂಡ ಮಹಿಳೆಯರು ಇಂತಹ ಟೀಕೆಗಳನ್ನು ಮಾಡಿ, ಆ ಹೇಳಿಕೆಗಳು ವರದಿಗೊಳ್ಳುವುದರಿಂದ ಇಂತಹ ಹೇಳಿಕೆಗಳನ್ನು ಮಹತ್ವದ್ದಲ್ಲವೆಂದು ತಳ್ಳಿಹಾಕುವಂತಿಲ್ಲದಿರುವುದು. ಉದಾಹರಣೆಗಾಗಿ ಓರ್ವ ಕಾರ್ಯಕರ್ತೆಯು ತನ್ನನ್ನು ತಾನು ಓರ್ವ ಸ್ತ್ರೀವಾದಿಯೆಂದು ಗುರುತಿಸಿಕೊಳ್ಳಲು ನಿರಾಕರಿಸುವುದಕ್ಕೆ ಕಾರಣಗಳನ್ನು ನೀಡಿರುವ ಒಂದು ದೀರ್ಘ ಲೇಖನದ ವಿವರಣೆಯಲ್ಲಿ ಕೊಟ್ಟಿರುವ ಒಂದು ಕಾರಣವೆಂದರೆ ಸ್ತ್ರೀವಾದವೆನ್ನುವುದು ಒಂದು ಪಾಶ್ಚಾತ್ಯ ಪರಿಕಲ್ಪನೆ ಎಂಬುದು. ತನ್ನ ಕುಟುಂಬವನ್ನು ಕಾದುಪಾಲು ಮಾಡಲು ಮತ್ತು ಸ್ತ್ರೀಯರ ಹಕ್ಕುಬಾಧ್ಯತೆಗಳಿಗಾಗಿ ಹಾದಿ ಬೀದಿಗಳಲ್ಲಿ ಚೀರಾಡುತ್ತಾ ಹಾರಾಡಲು ತನಗೆ ಇಚ್ಛೆಯಿಲ್ಲದ್ದರಿಂದ ತಾನೊಬ್ಬ ಸ್ತ್ರೀವಾದಿಯಲ್ಲವೆಂದು ಒಬ್ಬ ಸಿನಿಮಾ ತಾರೆಯು ಅಭಿಪ್ರಾಯ ಪಟ್ಟಿದ್ದಾಳೆ. ತಾನು ಪುರುಷ ವಿರೋಧಿಯಲ್ಲ ಮತ್ತು ಪುರುಷರನ್ನು ದ್ವೇಷಿಸುವುದಿಲ್ಲವಾದ್ದರಿಂದ ತನ್ನನ್ನು ತಾನು ಸ್ತ್ರೀವಾದಿ ಎಂದು ಕರೆದುಕೊಳ್ಳುವುದನ್ನು ನಿಲ್ಲಿಸಿದ್ದೇನೆಂಬುದು ಓರ್ವ ಕಾಲಮಿಸ್ಟಳ ಅನಿಸಿಕೆ. ವಿಷಯ ಗೊತ್ತಿಲ್ಲದ ಮತ್ತು ಮೇಲ್ಕಂಡ ಟೀಕೆಗಳಿಂದ ಪ್ರಭಾವಿತರಾಗಬಹುದಾದ ವಾಚಕರ ಪಾಲಿಗೆ ಸ್ತ್ರೀವಾದವೆಂದರೆ—ಒಂದು ಪಾಶ್ಚಾತ್ಯ ಪರಿಕಲ್ಪನೆ, ಕುಟುಂಬವನ್ನು ಧಿಕ್ಕರಿಸುವುದು ಮತ್ತು ಅವರ ವಿರುದ್ಧ ಸಮರ ಸಾರುವುದು. ಈ ದೇಶದಲ್ಲಿ ಸ್ತ್ರೀವಾದವನ್ನು ಕುರಿತು ಮೂರು ದಶಕಗಳ ಕಾಲ ಬರೆದು, ಚರ್ಚಿಸಿ, ಆಚರಣೆಗೆ ತಂದ ಮೇಲೂ ನಮ್ಮ ಬುದ್ಧಿ ಜೀವಿ ಮಹಿಳೆಯರು ಸ್ತ್ರೀವಾದವನ್ನು ಕುರಿತು ಅರಿತುಕೊಂಡಿರುವುದು ಇದೇ ಏನು ?

ನನ್ನೊಂದಿಗೆ ನಾನೇ ನಾನು ಸ್ತ್ರೀವಾದಿ ಎಂದು ಹೇಳಿಕೊಳ್ಳುವುದಕ್ಕೂ ನನಗೆ ಕೆಲವರ್ಷಗಳೇ ಹಿಡಿದವು. ಈ ಯಾನವು ನನ್ನಲ್ಲೇ ಆರಂಭವಾಗಿ ಪ್ರಪಂಚದಲ್ಲಿ ಹೆಣ್ಣಿನ ಸ್ಥಾನವೆಂಬ ಸಾಗರಕ್ಕೆ ಪಯಣ ಮಾಡುವುದರಲ್ಲಿ ಅದು ಉನ್ನತ ಶಿಖರವನ್ನೇರಿತು. ಇಂದು, ನಾನು ನನ್ನನ್ನು ಸ್ತ್ರೀವಾದಿ ಎಂದು ಕರೆದುಕೊಳ್ಳುವಾಗ ಮಾನವ ಜಾತಿಯಲ್ಲಿ ಹುಟ್ಟಿ ಬದುಕುಳಿಯಲು, ಬದುಕನ್ನು ತಾನು ತನ್ನ ಅಗತ್ಯಗಳಿಗೆ, ತನ್ನಲ್ಲಿರುವ ಸಾಮರ್ಥ್ಯಗಳಿಗನುಸಾರವಾಗಿ ರೂಪಿಸಿಕೊಳ್ಳಲು ಗಂಡಿಗಿರುವಷ್ಟೇ ಹಕ್ಕು ಹೆಣ್ಣಿಗಿರಬೇಕೆಂದು ನಂಬಿದ್ದೇನೆ. ಹೆಣ್ಣು ಕೀಳಾಗಲಿ, ಇನ್ನೊಬ್ಬರ ಅಧೀನಳಾಗಲಿ ಅಲ್ಲ. ಅದಕ್ಕೆ

ಬದಲು ಮಾನವ ಸಂತತಿಯಲ್ಲಿ ಆಕೆ ಅರ್ಧದಷ್ಟು ಪಾಲು ಎಂಬುದು ನನ್ನ ನಂಬಿಕೆ. ತಮ್ಮ ವ್ಯಕ್ತಿತ್ವವನ್ನು ಡೊಂಕಾಗಿಸುವ ಹೊರ ಕವಚಗಳಿಗೆ ಹೆಣ್ಣು (ಗಂಡೂ ಕೂಡ) ಈಡಾಗುವುದಕ್ಕೆ ಬದಲು ತಮಗಿರುವ ಐಚ್ಛಿಕಗಳನ್ನು ಅವರು ಆಯ್ಕೆ ಮಾಡಿಕೊಳ್ಳಬೇಕು ಎಂಬುದು ನನ್ನ ನಂಬಿಕೆ. ಸಂತಾನ ಸಾಮರ್ಥ್ಯವೊಂದರ ಉದ್ದೇಶವನ್ನು ಹೊರತುಪಡಿಸಿದರೆ, ಪ್ರಕೃತಿಯು ಮಾನವನಿಗೆ ವರ ನೀಡುವಾಗ ಗಂಡು ಹೆಣ್ಣೆಂಬ ಭೇದವನ್ನು ಮಾಡಿಲ್ಲವೆಂದೂ ನಾನು ನಂಬಿದ್ದೇನೆ. ತಾಯ್ತನ ಹೆಂಗಸರು ಪಡೆದುಕೊಂಡಿರುವ ಒಂದು ವಿಶೇಷ ಭಾಗ್ಯ, ಅದೊಂದು ಬಳುವಳಿಯೇ ಹೊರತು ಅದು ಅವರನ್ನು ಉಳಿದೆಲ್ಲವುಗಳಿಂದ ದೂರವಿರಿಸಿಲ್ಲವೆಂದೇ ನನ್ನ ನಂಬಿಕೆ. ಸ್ತ್ರೀವಾದಿ ವಿರೋಧಿಗಳು ಇವನ್ನೆಲ್ಲ ಅಲ್ಲಗಳೆಯುವುದಿಲ್ಲ ತಾನೇ ?

ನನ್ನನ್ನು ನೋವಿಗೀಡುಮಾಡಿರುವ ಸಂಗತಿ ಎಂದರೆ, ಎಲ್ಲ ಪ್ರತಿಕೂಲಪರಿಸ್ಥಿತಿಗಳ ನಡುವೆಯೂ ಏನನ್ನಾದರೂ ಸಾಧಿಸಿ ಮೇಲಿನ ಅಂಶಗಳಿಗೆ ಜ್ವಲಂತ ನಿದರ್ಶನಗಳಾಗಿರುವ ಸ್ತ್ರೀಯರೇ ಇಂತಹ ಹೇಳಿಕೆಗಳನ್ನು ನೀಡುವುದು. ತಮ್ಮನ್ನು ಕುರಿತು ಜನ ಏನೇ ಆಡಿಕೊಳ್ಳುವುದೂ ನನ್ನ ಕಳಕಳಿಯ ವಿಷಯವಲ್ಲ ; ಆದರೆ ಸ್ತ್ರೀವಾದವನ್ನು ಅವರು ವಿರೂಪಗೊಳಿಸಿದಾಗ, ತಮಗಾದ ಅನ್ಯಾಯಗಳ ವಿರುದ್ಧ ಅನೇಕ ವರ್ಷಗಳ ಕಾಲ ಹೋರಾಡಿದ, ಧ್ವನಿ ಎತ್ತಿದ ಎಲ್ಲ ಪುರುಷರು ಹಾಗೂ ಮಹಿಳೆಯರನ್ನು ದಿಕ್ಕು ತಪ್ಪಿಸುವ ತೀವ್ರ ತಪ್ಪನ್ನು ಈ ಹೆಂಗಸರು ಎಸಗುತ್ತಾರೆ. ಅಸಂಖ್ಯಾತ ಮಹಿಳೆಯರು ನಿರಾಳವಾಗಿ ಉಸಿರು ಬಿಡುತ್ತಿರುವುದಕ್ಕೆ ಸಾಧ್ಯವಾಗಿರುವುದು ಮಹಿಳಾ ಆಂದೋಲನದಿಂದಾಗಿ ಎಂಬುದರಲ್ಲಿ ನನಗೆ ಸಂದೇಹವೇ ಇಲ್ಲ. 'ಕೇವಲ ಮಹಿಳಾ ಸಾಮಗ್ರಿ' ಎಂದು ತಿರಸ್ಕರಿಸಲ್ಪಡದಂತೆ ಸಮಾಜದ ಎಲ್ಲರಿಗೂ ಸಂಬಂಧಿಸಿರುವ ಸಮಸ್ಯೆಗಳನ್ನು ಕುರಿತು, ನಾನು ಬರೆದ ವಿಷಯಗಳನ್ನು ಗಂಭೀರವಾಗಿ ಪರಿಗಣಿಸುವಂತೆ ಹಾಗೂ ನನ್ನ ಧ್ವನಿಯನ್ನು ಕೇಳುವಂತೆ ಸಾಧ್ಯ ಮಾಡಿರುವ ಮಹಿಳಾ ಆಂದೋಲನದ ಕಾಲದಲ್ಲಿ ಬದುಕುತ್ತಿರುವುದು ನನ್ನ ಸೌಭಾಗ್ಯವೆಂಬುದು ಲೇಖಕಿಯಾಗಿ ನನಗೆ ತಿಳಿದಿದೆ.

ಸ್ತ್ರೀವಾದಿಯಾಗಿರಲು ಪುರುಷನಂತಾಗಬೇಕೇನು ? ನಾನು ಹಾಗೇನೂ ಭಾವಿಸಿಲ್ಲ. ಅದಕ್ಕೆ ಬದಲು ನನ್ನ ಹೆಣ್ತನವು ಒಂದು ಕೊರತೆಗಿಂತ ಒಂದು ಗುಣಾಂಶ ಎಂದೇ ನಾನು ಭಾವಿಸಿದ್ದೇನೆ.

ಶ್ರೀಮತಿ ಶಶಿದೇಶಪಾಂಡೆ ಇಂಗ್ಲಿಷ್‌ನಲ್ಲಿ ಕಥಾ ಸಾಹಿತ್ಯ ಬರೆಯುವ ಭಾರತೀಯ ಸಾಹಿತಿಗಳಲ್ಲಿ ಬಲು ದೊಡ್ಡ ಹೆಸರು. ಅವರು ಟೈಮ್ಸ್ ದಿನ ಪತ್ರಿಕೆಯಲ್ಲಿ ಬರೆದಿರುವ 'ಯಾವ ಮಹಿಳೆಯೂ ದ್ವೀಪದಂತಲ್ಲ' ಎಂಬ ಲೇಖನದ ಅನುವಾದವಿದು. ಈ ಲೇಖನವನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟಿರುವವರು ಶ್ರೀ ಕೆ. ಎಸ್. ಮಧುಸೂದನ್.

ಇದು ಒಂದು ವಿಶಿಷ್ಟಾಂಶವೇ ಹೊರತು ವೈಕಲ್ಯವೆಂದು ನಾನು ಭಾವಿಸುವುದಿಲ್ಲ. ಸ್ತ್ರೀವಾದವೆಂಬುದು ಪುರುಷ ವಿರೋಧಿಯಾಗುವುದು ಹೇಗೆ ತಾನೆ ಸಾಧ್ಯ ? ಅದೂ ಸ್ತ್ರೀ ಪುರುಷರ ಸಹಭಾಗಿತ್ವದೆಡೆಗೆ, ಸಮಾನತೆಯೆಡೆಗೆ ದುಡಿಯುವ ತತ್ವವಿದಾಗಿರುವಾಗ ಇದನ್ನು ಶೋಷಿತರ ಮತ್ತು ಶೋಷಕರ ಸಂಬಂಧದಂತೆ ಊಹಿಸಲು ಸಾಧ್ಯವೇ ? ಮಹಿಳೆಯರು ತಮ್ಮ ಅಗತ್ಯಗಳನ್ನು ತಾವೇ ಈಡೇರಿಸಿಕೊಳ್ಳಲು ಸಮರ್ಥರಾದಾಗ, ತುಳಿತಕ್ಕೊಳಗಾಗದಿದ್ದಾಗ ಮತ್ತು ತ್ಯಾಗ ಮಾಡಬೇಕಾಗಿಲ್ಲದಿದ್ದಾಗ, ಅವರಿಗೆ ಮನೆಯಲ್ಲಿ ಅಧಿಕಾರದ ಪೈಪೋಟಿಯಿಲ್ಲದಾಗ, ತಮ್ಮ ಆಸೆ ಆಕಾಂಕ್ಷೆಗಳನ್ನು ಗಂಡ ಮತ್ತು ಮಕ್ಕಳ ಮೇಲೆ ಹೇರುವುದಿಲ್ಲ, 'ಅಹಂ'ನ್ನು ಪಂಜರದಲ್ಲಿಟ್ಟು ದೀರ್ಘಕಾಲ ಬಂಧಿಸಿದರೆ ಆಗ ಅದು ಭಯಂಕರವಾಗಿ ಘರ್ಜಿಸುವ ಪ್ರಾಣಿಯಾಗುತ್ತದೆ. ತ್ಯಾಗ ಮಾಡುತ್ತಾ ಬನ್ನಿ ಎಂದರೆ ಆಗ ನೀವು ಸ್ವಾರ್ಥದ ಪೆಡಂಭೂತವನ್ನೇ ಸೃಷ್ಟಿಸುತ್ತೀರಿ. ಅಸಹಾಯಕ ಶಿಶುವನ್ನು ಹೊರತು ಪಡಿಸಿ ಹೆಣ್ಣಿನ ತ್ಯಾಗಕ್ಕೇ ಪ್ರಕೃತಿಯ ಯೋಜನೆಯಲ್ಲಿ ಪಾತ್ರವೇ ಇಲ್ಲ. (ಹಿಂದಿ ಚಲನ ಚಿತ್ರಗಳಲ್ಲಿನ ತ್ಯಾಗಮಯಿ 'ಅಮ್ಮ'ನು ಪುರುಷರ ಭ್ರಮಾಧೀನ ಕಲ್ಪನೆ ಎಂಬುದು ನನ್ನ ಮನವರಿಕೆ). ಕುಟುಂಬವು ಎಲ್ಲ ಸಮಾಜದ ಅನುಕೂಲಕ್ಕಾಗಿ ಕಟ್ಟಲ್ಪಟ್ಟ ಒಂದು ವ್ಯವಸ್ಥೆಯೇ ಹೊರತು ಅದೊಂದು

(ಒಳ ರಕ್ಷಾ ಪುಟಕ್ಕೆ)

ದಿವ್ಯ ಪವಿತ್ರ ಸಂಸ್ಥೆಯೇನಲ್ಲ, ಎಂಬುದಾಗಿ ನಾನು ನಂಬಿದ್ದೇನೆ. ಆದ್ದರಿಂದ ಕೆಲವರ ತ್ಯಾಗಕ್ಕಿಂತ ಕುಟುಂಬದ ವ್ಯವಸ್ಥೆಯನ್ನು ಕಟ್ಟಬೇಕು. 'ನಾನು ಇದ್ದೇನೆ' ಎಂಬ ಗೆಲುವಿನ ಅಸ್ತಿತ್ವದ 'ದೃಢೀಕರಣವೇ ಇಂದಿನ ಹೊಸ ಹಸುಳೆಯ ಗಟ್ಟಿಯಾದ ಉದ್ಘೋಷ. ಹೆಣ್ಣು ಮಗು ಇದಕ್ಕಿಂತ ಕಮ್ಮಿ ಧ್ವನಿಯಲ್ಲಿ ಚೀರುತ್ತದೆಯೇನು ?

ಕೆಲವು ಸ್ತ್ರೀವಾದಿಗಳು ಇತರ ಸ್ತ್ರೀಯರನ್ನು ವಿಶೇಷವಾಗಿ ಗೃಹಿಣಿಯರನ್ನು ಅತೃಪ್ತರೆಂದು ಪ್ರಚೋದಿಸಿ ಕೆಲಸಕ್ಕೆ ಹೋಗುವಂತೆ ಮಾಡುವುದು ಮತ್ತು ಕ್ಷುಲ್ಲಕ ಕಾರಣಕ್ಕಾಗಿ ಗಂಡನಿಂದ ದೂರವಿರುವಂತೆ, ವಿಚ್ಛೇದನ ಕೊಡುವಂತೆ ಪ್ರಚೋದಿಸಿ ಒತ್ತಾಯಿಸುವುದನ್ನು ನಾನು ಅಸಂಗತವೆಂದು ಬಗೆಯುತ್ತೇನೆ.ಅಷ್ಟೇ ಅಲ್ಲ, ವರದಕ್ಷಿಣೆ, ಅತ್ಯಾಚಾರ, ಕ್ರೌರ್ಯ, ಅಪನಿಂದನೆಗೆ ಗುರಿಯಾದ ಹೆಣ್ಣು ಮಕ್ಕಳಿಗಾಗಿ ಹೋರಾಡುತ್ತಿರುವ ಹಲವಾರು ಕ್ರಿಯಾಶೀಲ ಸ್ತ್ರೀವಾದಿ ಕಾರ್ಯಕರ್ತರ ಬಗ್ಗೆ ತಪ್ಪು ಅಭಿಪ್ರಾಯ ಬರುವಂತೆ ದೊಡ್ಡ ಅನ್ಯಾಯವೆಸಗಿದಂತಾಗುತ್ತದೆ. ಕೆಲವು ಸ್ತ್ರೀಯರು ತಮ್ಮನ್ನು ಕುರಿತು ತಾವು "ಕೇವಲ ಗೃಹಿಣಿ" ಎಂದು ಹೇಳಿಕೊಂಡಾಗಲೆಲ್ಲಾ ನಾನು ಸಿಟ್ಟಾಗಿದ್ದೇನೆ. ಪ್ರತಿ ದಿನ ವರ್ಷದ ಹನ್ನೆರಡು ತಿಂಗಳು ಕೆಲಸ ಮಾಡಿಯೂ 'ಕೇವಲ ಗೃಹಿಣಿ' ಎಂದುಕೊಳ್ಳುವುದು ಸರಿಯೇ ? ಗೃಹಕೃತ್ಯದ ಸಂಭ್ರಮದಲ್ಲೇ ಬಹು ಮಹಿಳೆಯರು ಧನ್ಯತಾಭಾವ ಹೊಂದುತ್ತಾರೆ. ಹಾಗೆ ಹೊಂದಲು ಅವರಿಗೆ ಹಕ್ಕೂ ಉಂಟು. ಆದರೆ ಅಗತ್ಯ ಬಂದಾಗ ನಿಮಗೆ ನೀವು ಬೆಂಬಲ ನೀಡಿಕೊಳ್ಳಲು ಸಮರ್ಥರಲ್ಲದಂತಹ ಅಡಚಣೆ ಬರುತ್ತದೆ. ಹೆಂಡತಿ ಮತ್ತು ತಾಯಂದಿರ ಪಾತ್ರವನ್ನು ವೈಭವೀಕರಿಸುವುದು ಎಷ್ಟೋ ಸಲ ಕಟುವಾಸ್ತವಗಳನ್ನು ಹುದುಗಿಸಿ ಬಿಡುತ್ತದೆ. ಪರಾವಲಂಬಿಯಾಗುವುದೆಂದರೆ ಮತ್ತೊಬ್ಬರಿಗೆ ಭಾರವಾಗುವುದು ಮತ್ತು ಬೇರೆ ದಾರಿಯೇ ಇಲ್ಲದ್ದರಿಂದ ಕ್ರೌರ್ಯವನ್ನು ಸಹಿಸಿಕೊಳ್ಳಲೇ ಬೇಕಾಗುವುದು. ಒಬ್ಬ ಅಂಕಣಕಾರ್ತಿ ಹೇಳುತ್ತಾಳೆ: 'ಹಾದಿ ಬೀದಿಯಲ್ಲಿ ಹಿಂಸೆ ಪಡುವುದಕ್ಕಿಂತ ಮನೆಯಲ್ಲಿ ಕ್ರೌರ್ಯಕ್ಕೀಡಾಗುವುದೇ ಲೇಸು.' ಇದೊಂದು ಅಸಹ್ಯ ಆಕ್ಷೇಪಣೀಯ ಹೇಳಿಕೆ. ಇದರ ಅಂತರಾರ್ಥವೆಂದರೆ ಹೆಣ್ಣು ತನ್ನನ್ನು ತಾನು ಕ್ರೌರ್ಯಕ್ಕೆ ಸಮರ್ಪಿಸಿಕೊಂಡು ಬಿಡಬೇಕು ಎಂಬುದು ಇದರಿಂದ ಹಲವಾರು ವರ್ಷಗಳ ಕಾಲ ಮಹಿಳೆಯರು ವ್ಯವಸ್ಥಿತವಾದ ಭೌತಿಕ ಹಿಂಸೆಯನ್ನು ತಾಳಿಕೊಂಡಿರು ಎಂಬುದರ ಅರಿವು ಆಕೆಗೆ ಇಲ್ಲ ಎಂಬುದು ಸ್ವತಃ ಸಿದ್ಧ. ಆಕೆಗೆ ಹೇಳುತ್ತಾಳೆ: "ಸರಿಯಾದ ಆಯ್ಕೆ ಮಾಡಿಕೊಳ್ಳಲು ಇಲ್ಲಿ ಹೆಣ್ಣು ಮಾನಸಿಕವಾಗಿ ಸಜ್ಜಾಗಿಲ್ಲ." ಆದರೆ ಇದಕ್ಕೆ ಪರಿಹಾರ ಆಯ್ಕೆಯ ಅವಕಾಶಗಳನ್ನು ತಪ್ಪಿಸುವುದರಲ್ಲಿದೆಯೆ ಅಥವಾ ಆಯ್ಕೆ ಮಾಡಿಕೊಳ್ಳುವುದನ್ನು ಕಲಿತುಕೊಳ್ಳುವ ಅವಕಾಶಗಳನ್ನು ಒದಗಿಸಿಕೊಡುವುದರಲ್ಲಿದೆಯೇ ? ಸರಿಯಾದ ಆಯ್ಕೆಗಳನ್ನೇ ನಾವು ಮಾಡಿಕೊಂಡಿದ್ದೇವೆಂಬುದನ್ನು ನಾವು ಖಚಿತವಾಗಿ ಹೇಳಬಲ್ಲೆವೆ ?

ಸ್ತ್ರೀವಾದವು, ಪ್ರಸ್ತುತ ಸಾಮಾಜಿಕ ಅಗತ್ಯದ ಆಧಾರದ ಮೇಲೆ ರೂಪುಗೊಂಡ ಆಂದೋಲನ ಎಂದು ನಾನು ಎಲ್ಲಿಯೋ ಓದಿದ ನೆನಪು. ನಮ್ಮ ಸ್ಥಳೀಯ ನಿರ್ದಿಷ್ಟ ಸಮಸ್ಯೆಗಳನ್ನು ಕುರಿತು ನೇರವಾಗಿ ನಿರ್ದೇಶಿಸಿರುವ ಸ್ತ್ರೀವಾದವು ಭಾರತದಲ್ಲಿ ನಮ್ಮ ಸಮಾಜ ಮೂಲದಿಂದ ಬೆಳೆದಿರುವುದು ಎಷ್ಟು ನಿಜ ಎಂಬುದನ್ನು ನಾನು ಕಂಡಿದ್ದೇನೆ. ಸತ್ಯಸಂಗತಿ ಎಂದರೆ ನಾವು ಹಿಂದಕ್ಕೆ ಹೋಗುವಂತಿಲ್ಲ. ಈಗೀಗ ಹೆಚ್ಚು ಜನ ಒಟ್ಟು ಕುಟುಂಬಗಳಲ್ಲಿ ವಾಸಿಸುತ್ತಾರೆ, ಹೆಚ್ಚು ಮಹಿಳೆಯರು ಮನೆ ಹೊರಗೆ ದುಡಿಯುತ್ತಾರೆ, ಮತ್ತು ಇದರ ಒತ್ತಡಗಳು ಸಂಬಂಧಗಳನ್ನು ಸುಲಭವಾಗಿ ಭೇದಿಸಲು ಸಾಧ್ಯವಾಗಿವೆ ಎಂಬುದು ಸತ್ಯ. ಈ ಹಿನ್ನೆಲೆಯಲ್ಲಿ ಗಂಡು ಹೆಣ್ಣಿನ ಸಂಬಂಧದಲ್ಲಿ ಬದಲಾವಣೆಯ ಅಗತ್ಯ ಇದೆ. ಆದ್ದರಿಂದ ಹೆಣ್ಣುಮಗುವಿನ ಭ್ರೂಣ ಹತ್ಯೆ, ವರದಕ್ಷಿಣೆ ಹಾಗೂ ಅತ್ಯಾಚಾರಗಳನ್ನೊಳಗೊಂಡಂತೆ ಎಲ್ಲ ಸಮಸ್ಯೆಗಳಲ್ಲಿ ಗಂಡು–ಹೆಣ್ಣುಗಳ ಸಮಪಾಲನ್ನು ಗುರುತಿಸಬೇಕಿದೆ.

ಸ್ತ್ರೀಯರು ಸ್ವಾತಂತ್ರ್ಯವನ್ನು ಸ್ವೇಚ್ಛೆಯಾಗಿ ಪರಿವರ್ತಿಸಿಕೊಳ್ಳಬಹುದೆಂದು ಅಂಜಿಕೊಳ್ಳುವವರು, ಮಾನವ ಸ್ವಾತಂತ್ರ್ಯದ ಮೇಲೆ ದಿನನಿತ್ಯದ ಅಗತ್ಯಗಳೇ ಅನಿವಾರ್ಯವಾಗಿ ನಿರ್ಬಂಧಗಳನ್ನು ಹೇರಿವೆ ಎಂಬ ಕಟ್ಟುಕತೆಗಳನ್ನು ಸೃಷ್ಟಿಸುತ್ತಾರೆ. ಆದರೆ ಮಾನವ ಎಸಗುವ ಕ್ರೌರ್ಯದ ಮೇಲೆ ಯಾವ ಕಾಲದಲ್ಲೂ ನಿರ್ಬಂಧಗಳೇ ಇಲ್ಲ. ಇದನ್ನು ವಿರೋಧಿಸಬೇಕು ಮೌನವಾಗಿದ್ದರೆ ಒಪ್ಪಿಕೊಂಡಂತಾಗುತ್ತದೆ.

ಮಲಯಾಳಿ ಮಹಿಳಾ ಕಥಾಸಾಹಿತ್ಯದ ಸ್ತ್ರೀವಾದಿ ನೆಲೆಗಳು

ಅನು : ಸುಮಿತ್ರಾ

ಕೊಟ್ಟಾಯಂನ ಸ್ಕೂಲ್ ಆಫ್ ಲಿಟರೇಚರ್ ಸಂಸ್ಥೆಯ ಇಂಗ್ಲಿಷ್ ವಿಭಾಗದಲ್ಲಿ ರೀಡರ್ ಆಗಿರುವ ಡಾ. ಪಿ. ವಿ. ರವೀಂದ್ರನ್ ಅವರು ಸ್ತ್ರೀವಾದಿ ಅಧ್ಯಯನದ ವಿಶೇಷಜ್ಞರೂ ಹೌದು. 'The Book Review' ಆಂಗ್ಲ ಪತ್ರಿಕೆಯಲ್ಲಿ ಪ್ರಕಟವಾದ ರವೀಂದ್ರನ್ ಅವರ ಲೇಖನದ ಸಂಗ್ರಹಾನುವಾದ ಇಲ್ಲಿದೆ. —ಸಂ.

ಲಿಂಗಜಾತಿಯನ್ನು ಅನುಭವದ ಸಂಘಟನೆಯ ಮೂಲಭೂತ ಅಂಶವಾಗಿ ಬಳಸುವ ಸ್ತ್ರೀವಾದಿ ವಿಮರ್ಶೆ ಮಲೆಯಾಳಿ ಸಾಹಿತ್ಯದಲ್ಲಿ ಈಚಿನದು. ಹಾಗಿದ್ದರೂ ಅದರ ಅಸ್ತಿತ್ವದ ಅಲ್ಪಾವಧಿಯಲ್ಲೇ ಅದು ಸ್ತ್ರೀವಾದಿ ಚಿಂತನೆಗೆ ರೂಪಕೊಟ್ಟಿದೆ. ಕೇರಳದ ಸಾಂಸ್ಕೃತಿಕ ಇತಿಹಾಸದಿಂದ ಮಹಿಳೆಯರ ಅನುಭವವನ್ನು ಅಂಚಿಗೆ ಒತ್ತರಿಸುವಲ್ಲಿ, ಕೈಬಿಡುವಲ್ಲಿ ಪ್ರಧಾನ ಸಾಹಿತ್ಯ ಪರಂಪರೆ ಅನುಸರಿಸುವ ದಾರಿಗಳನ್ನು ತೆರೆದು ತೋರಿಸುವಲ್ಲಿ ಈ ಸ್ತ್ರೀವಾದಿ ಚಿಂತನೆ ಯಶಸ್ವಿಯಾಗಿದೆ.

ಈ ಚಿಂತನೆಯ ಬೆಳವಣಿಗೆಗೆ ಮೂಲದ ಸೈದ್ಧಾಂತಿಕ ಪ್ರೇರಣೆ ಪಶ್ಚಿಮದ ಸ್ತ್ರೀವಾದಿ ಚಿಂತಕರಿಂದಲೇ ಬಂದಿದ್ದರೂ ಸಾಮಾಜಿಕ ಚಿಂತಕರು ಈ ನೆಲದ ವಿಶಿಷ್ಟ ಸಮುದಾಯದೊಳಗೆ ಆ ಸಿದ್ಧಾಂತಗಳ ಹೊಸ ಅನ್ವಯ ವಿಧಾನಗಳನ್ನು ಕಂಡುಕೊಂಡಿದ್ದಾರೆ. ಈ ಬೆಳವಣಿಗೆಯ ಫಲವಾದ ಒಂದು ಮುಖ್ಯ 'ಸಾಹಿತ್ಯಕ' ಪರಿಣಾಮ ಎಂದರೆ ಹೊಸ ಬಗೆಯ ಸ್ತ್ರೀವಾದಿ ಕಥಾ ಸಾಹಿತ್ಯದ ವಿಪುಲ ಬೆಳವಣಿಗೆ. ಈ ಸಾಹಿತ್ಯ ಮತ್ತೆ ಸಾಮಾಜಿಕ ಚಿಂತಕರಿಗೆ ಲಿಂಗಾಧಾರಿತ ಮೌಲ್ಯಗಳ ಸಂರಚನೆ ಮತ್ತು ಅದಕ್ಕೆ ಪ್ರತ್ಯುತ್ತರದ ಬಗ್ಗೆ ಮತ್ತಷ್ಟು ಶೋಧನೆ ನಡೆಸಲು ನೆರವಾಗಿವೆ. ಇವೆಲ್ಲದರ ಒಟ್ಟು ಫಲವಾಗಿ ಮಲಯಾಳಿ ಸಾಹಿತ್ಯ ಕ್ಷೇತ್ರದಲ್ಲಿ ಮಹಿಳಾ ಸಾಹಿತ್ಯವು ಸ್ಪಷ್ಟವಾದ ವೈಲಕ್ಷಣ್ಯಗಳುಳ್ಳ ಸೃಜನಶೀಲ ಘಟಕವೆಂಬ ನಂಬಿಕೆಯು ಬಲಗೊಳ್ಳುತ್ತಿದೆ. ಮಹಿಳಾ ಸಾಹಿತ್ಯದ ಒಂದು ಪರಂಪರೆಯನ್ನು ಕಟ್ಟಿಕೊಡುವ ಪ್ರಯತ್ನವೂ ನಡೆದಿದೆ. ರಾಜೀವಕುಮಾರ್ ಅವರು ಸಂಪಾದಿಸಿರುವ "ಅಂತರ್ಜನಂ ಮುತಾಲ್ ಅಶಿತವರೈ" (1984) ಗ್ರಂಥ ಇಂಥ ಯತ್ನದ ಒಂದು ನಿದರ್ಶನವಾಗಿದೆ. ಹಳೆಯ ಬರಹಗಾರ್ತಿಯರಾದ ಲಲಿತಾಂಬಾ ಅಂತರ್ಜನಂ, ಕೆ. ಸರಸ್ವತಿ ಅಮ್ಮ, ರಾಜಲಕ್ಷ್ಮಿ ಮೊದಲಾದವರ ರಚನೆಗಳ ಮರು ಮೌಲ್ಯಮಾಪನದ ಯತ್ನವೂ ಇದೇ ಧೋರಣೆಗೆ ಸೇರಿಸಬಹುದಾದ್ದು. ಈ ಹಿನ್ನೆಲೆಯಲ್ಲಿ ಇತ್ತೀಚಿನ ದಿನಗಳಲ್ಲಿನ ಮಹಿಳೆಯರ ಕಥಾಸಾಹಿತ್ಯ ರಚನೆಗಳ ಹೆಚ್ಚಳವನ್ನು ಮಲಯಾಳಿ ಲೇಖಕಿಯರಲ್ಲಿ ಹೆಚ್ಚುತ್ತಿರುವ ಸ್ವತ್ವದ ಅರಿವಿನ ಆವಿಷ್ಕಾರದ ಕುರುಹೆಂದು ಭಾವಿಸಬಹುದು.

ನಲವತ್ತು—ಐವತ್ತರ ದಶಕದಲ್ಲಿ ಬರೆಯುತ್ತಿದ್ದ ಸರಸ್ವತಿ ಅಮ್ಮ ಅವರ ರಚನೆಗಳಲ್ಲೇ ಈ ಸ್ವತ್ವ—ಪ್ರಜ್ಞೆಯ ಬೇರುಗಳನ್ನು ಕಾಣಬಹುದಾದರೂ ಅರವತ್ತರ ದಶಕದಲ್ಲಿ ಬಂದ ಮಾಧವಿಕುಟ್ಟಿಯವರ ರಚನೆಗಳಲ್ಲಿ ಈ ಸ್ವತ್ವ—ಪ್ರಜ್ಞೆಗೆ ಕಲಾತ್ಮಕ ಗುರುತು ದೊರೆಯಿತು. ಹೊರಗಿನವರಿಗೆ ಕಮಲಾದಾಸ್ ಎಂದೇ ಪರಿಚಿತರಾದ ಮಾಧವಿಕುಟ್ಟಿ ಮಲಯಾಳಿ ಸಣ್ಣ ಕಥೆ ಪ್ರಕಾರದಲ್ಲಿ ವಿಶೇಷ ಸ್ಥಾನ ಪಡೆದಿದ್ದಾರೆ. ಅರವತ್ತರ ದಶಕದಲ್ಲಿ ಅವರು ಬರೆದ ಅನೇಕ ಮಹತ್ವದ ಕಥೆಗಳು ಪುರುಷ ಮೌಲ್ಯಗಳ ಬಗ್ಗೆ ತೀವ್ರವಾದ ಅನಾದರವನ್ನು

ಪ್ರಕಟಿಸಿದವು. ಆ ಕಾಲಕ್ಕೆ ಆ ಧೋರಣೆಯನ್ನು ಲೇಖಕಿಯ ನೈತಿಕ ಅನಾದರವೆಂದೇ ಅರ್ಥೈಸಲಾಗಿತ್ತು. ಆಕೆಯ ಬಹುಮುಖ್ಯ ಸಣ್ಣಕಥೆಗಳು 60–70ರ ದಶಕಗಳಿಗೆ ಸೇರಿದ್ದರೂ ಅವುಗಳಲ್ಲಿ ಹುದುಗಿದ್ದ ತೀವ್ರಗಾಮಿ ಸತ್ವವನ್ನು ಗುರುತಿಸಲು ಬಹಳಷ್ಟು ವಿಮರ್ಶಕರು ಸಿದ್ಧರಿರಲಿಲ್ಲ. ಇಂದು ವಿಮರ್ಶೆಯ ಸಂದರ್ಭ ಬದಲಾಗಿದೆ. ಅವರ ಸಣ್ಣಕಥೆಗಳಿಗೆ ನ್ಯಾಯಯುತ ಸ್ಥಾನವನ್ನು ದೊರಕಿಸುವತ್ತ ಮರುಮೌಲ್ಯಮಾಪನ ಮಾಡುವಂಥ ಯತ್ನಗಳು ನಡೆಯುತ್ತಿವೆ. "ನೈಯ್ ಪಾಯಸಮ್" (1991) ನಂಥ ಆಯ್ದ ಕಥೆಗಳ ಸಂಕಲನದಲ್ಲಿ ಮಾಧವಿಕುಟ್ಟಿಯವರ ಸಣ್ಣಕಥೆಗಳು ಮತ್ತೆ ಮತ್ತೆ ಸೇರ್ಪಡೆಯಾಗುತ್ತಿರುವುದಕ್ಕೆ ಈ ಬದಲಾದ ವಿಮರ್ಶಾ ಧೋರಣೆಯೇ ಕಾರಣವಾಗಿದ್ದೀತು.

'ಪಲಾಯನಮ್' ಎಂಬುದು ಅವರ ಈಚಿನ ಕಥೆಗಳ ಸಂಕಲನವಾಗಿದೆ. ಈ ಕಥೆಗಳೆಲ್ಲ ಸಾಮಾನ್ಯವಾಗಿ ಪ್ರೇಮ, ವಿವಾಹದ ವಸ್ತುಗಳನ್ನೇ ಹೊಂದಿವೆ. ಆದರೂ 'ಮದುವೆಯ ಸಂಜೆ'ಯಂಥ ಕಥೆಗಳಲ್ಲಿ ಈ ವಸ್ತುಗಳಿಗೆ ಹೊಸ ತಿರುವು ದೊರೆತಿದೆ. ಪಿತೃಪ್ರಧಾನ ಸಮಾಜದ ಕ್ರಮಕ್ಕೆ ಪಕ್ಕದಲೇ ಸ್ತ್ರೀವಾದಿ ವಿಶಿಷ್ಟತೆಯಾದ ವ್ಯತಿರಿಕ್ತ ಕ್ರಮವೊಂದನ್ನು ಈ ಕಥೆಯು ಕಲ್ಪಿಸುತ್ತದೆ. ಇಲ್ಲಿ ತಾಯಿಯ ಭ್ರಮಿಷ್ಠ ಮಾನಸಿಕ ಸ್ಥಿತಿಯು ಪುರುಷ ಸಮಾಜದ ಕಾರ್ಯವಿಧಾನದ ಬಗೆಗಿನ ವಿರೋಧಿ ಅಭಿಪ್ರಾಯಗಳನ್ನು ಅಸಾಧಾರಣ ತರ್ಕಬದ್ಧತೆಯಿಂದ ಹೊರಹಾಕಲು ನೆಪವಾಗಿ ಒದಗುತ್ತದೆ. ಮಾಧವಿಕುಟ್ಟಿಯವರ ಮೊದಲ ಸಂಕಲನಗಳು ಪ್ರೀತಿ, ಮದುವೆ, ಬಾಲ್ಯದ ಕನಸುಗಾರಿಕೆ, ಸಾವು, ಹಳಹಳಿಕೆ ಮುಂತಾದ ವಸ್ತುಗಳನ್ನು ಅಡ್ಡಾದಿಡ್ಡಿಯಾಗಿ ಪೇರಿಸಿದ ರಾಶಿಯಂತೆ ತೋರಿದರೆ ಅವರ ಹೊಸ ಸಂಕಲನಗಳ ಕಥೆಗಳು ಸ್ತ್ರೀವಾದಿ ಕಾಳಜಿಯ ಸೂತ್ರವೊಂದರಿಂದ ಒಗ್ಗೂಡಿಸಲ್ಪಟ್ಟಿವೆ. ಅಂದರೆ ಮಹಿಳೆಯ ಪ್ರಶ್ನೆಯ ಬಗ್ಗೆ ಲೇಖಕಿಯು ಸ್ಪಷ್ಟವಾದ ನಿಲುವನ್ನು ತಳೆದಿದ್ದಾರೆಂದು ಅರ್ಥವಲ್ಲ. ಅಂಥ ಪ್ರಶ್ನೆಯನ್ನು ಕಥನದ ಚಿಂತನಾ ಕೇಂದ್ರವಾಗಿ ಮಾಡಿಕೊಂಡಿದ್ದಾರೆ ಎನ್ನಬಹುದು. ಉದಾ : ಸಂಕಲನದ ಶೀರ್ಷಿಕೆಯ ಕಥೆ 'ಪಲಾಯನಂ' ನಲ್ಲಿ ಕಲಾವಿದೆ ಪತ್ನಿ ತನ್ನ ಗಂಡ ತನಗೆ ದ್ರೋಹ ಬಗೆದಿರುವುದನ್ನು ಕಂಡುಕೊಂಡದ್ದು ಮದುವೆಯ ಸೆರೆಯಿಂದ ಬಿಡುಗಡೆ ಹೊಂದಲು ಒಂದು ಅವಕಾಶವನ್ನು ಒದಗಿರುತ್ತದೆ.

ಲಿಂಗಜಾತೀಯ ಪ್ರಶ್ನೆ ಕೇಂದ್ರವಾಗಿರದ ಕಥೆಗಳಲ್ಲೂ ಸ್ತ್ರೀ—ಪುರುಷ ಜಗತ್ತುಗಳ ನಡುವಿನ ಬಿರುಕು ಅದರ ಎಲ್ಲ ಧ್ವನಿತಾರ್ಥಗಳನ್ನೂ ಒಳಗೊಂಡಂತೆ ನಿಸ್ಸಂದೇಹವಾಗಿ ಪ್ರಕಟವಾಗುತ್ತದೆ 'ನಿಲಕ್ಕಡಲ' (ನೆಲಗಡಲೆ) ಕಥೆ ಪಂಜಾಬಿನ ಇತ್ತೀಚಿನ ಘಟನೆಗಳನ್ನು ಹಿನ್ನೆಲೆಯಾಗಿ ಹೊಂದಿದೆ. ಹುಚ್ಚೆದ್ದ ಜನರ ಗುಂಪೊಂದು ತನ್ನ ಗಂಡನನ್ನು ಕೊಂದು ಹಾಕುವ ಕೆಲವೇ ಕ್ಷಣಗಳಿಗೆ ಮುನ್ನ ಈ ಕಥೆಯ ನಾಯಕಿ "ನಾನು ರಾಜಕೀಯದ ಬಗ್ಗೆ ತಲೆ ಕೆಡಿಸಿಕೊಳ್ಳುವವಳಲ್ಲ. ನಾನು ನನ್ನ ಮಗುವನ್ನು ಬೆಳೆಸುವವಳು, ನನ್ನ ಗಂಡನನ್ನು ನೋಡಿಕೊಳ್ಳುವವಳು, ಬೇಕಾದರೆ ಈ ದೇಶವನ್ನು ಪ್ರಧಾನಮಂತ್ರಿಗೇ ಬಿಟ್ಟುಕೊಡುತ್ತೇನೆ" ಎಂದು ಉದ್ಗರಿಸುತ್ತಾಳೆ. ಸಮಕಾಲೀನ ಸಮಾಜದಲ್ಲಿ ಮಹಿಳೆಯರ ಪರಿಸ್ಥಿತಿ ಕುರಿತ ವಾಚ್ಯವಾದ ಯಾವುದೇ ಹೇಳಿಕೆಯನ್ನು ಇಲ್ಲಿ ತೋರದಿದ್ದರೂ ಮಾಧವಿಕುಟ್ಟಿ ನಮ್ಮ ಸಂಸ್ಕೃತಿಯಲ್ಲಿ ಕ್ರಿಯಾಶೀಲವಾಗಿರುವ ಲಿಂಗ— ರಾಜಕೀಯದ ಗಮನಾರ್ಹ ಒಳನೋಟಗಳನ್ನು ಒದಗಿಸುತ್ತಾರೆ.

ಮಾಧವಿಕುಟ್ಟಿಯಿಂದ ಸಾರಾಜೋಸೆಫ್ ಕಥೆಗಳಿಗೆ ಬಂದಾಗ ಫೋಕಸ್ ನಸುಗತ್ತಲ ಗವಿಯಿಂದ ಪ್ರಕಾಶಿತ ಕೋಣೆಯೊಳಗೆ ಬಂದಂತೆ ಆಗುತ್ತದೆ. ಈ ರೂಪಕ ಇಬ್ಬರು ಲೇಖಕಿಯರ ಕಥಾಲೋಕಗಳ ಸಂಯೋಜನೆಯ ಸಂಕೇತವಲ್ಲ. ವೈಯಕ್ತಿಕವಾಗಿ ಮಾಧವಿಕುಟ್ಟಿ ಎಲ್ಲ ವಿಧವಾದ ಸ್ತ್ರೀವಾದಿ ಕಾರ್ಯಾಚರಣೆಗಳಿಂದ ಪ್ರಜ್ಞಾಪೂರ್ವಕವಾಗಿ ದೂರವುಳಿಯಲು ಯತ್ನಿಸುವವರು. ಸಾರಾಜೋಸೆಫ್ ತಮ್ಮ ದೃಢವಾದ ಸ್ತ್ರೀವಾದಿ ಸಂಬಂಧಗಳ ಬಗ್ಗೆ ಯಾವ ಅಳುಕನ್ನೂ ತೋರುವುದಿಲ್ಲ. ಮಾಧವಿಕುಟ್ಟಿಯವರ ಕಥೆಗಳ ಸ್ತ್ರೀವಾದಿ ಓದನ್ನು ನಡೆಸುವವರು ಆ ಸಿದ್ಧಾಂತದ ತಿಳಿವಿರುವವರೇ ಆಗಬೇಕು. ಆದರೆ ಸಾರಾಜೋಸೆಫ್‌ರ ಕಥೆಗಳು ಒಂದರ್ಥದಲ್ಲಿ ವಿಮರ್ಶಕರ ಮರು ಓದಿಗಾಗಿ ಕಾದಿರುವ ಸ್ತ್ರೀವಾದಿ ಓದುಗಳಂತಿವೆ. ತಮ್ಮ ಅನುಭವಗಳ ಮೇಲೆ ಈ ಲೇಖಕಿ ಬೀರುವ ದೃಢವಾದ ಸ್ತ್ರೀವಾದಿ ನೋಟದಿಂದಾಗಿ ಈಕೆಯ ಕಥೆಗಳು ಪುರುಷ ಪ್ರಧಾನ ಜಗತ್ತಿನಲ್ಲಿ ಮಹಿಳೆಯರ ಪಾತ್ರವನ್ನು ಕುರಿತ ದಿಟ್ಟತನದ ನಿರ್ವಚನಗಳಾಗಿವೆ. ಈ ಕಥೆಗಳು ಇಂಥ ಜಗತ್ತಿನ ವಿರುದ್ಧವಾದ ಹೋರಾಟದಲ್ಲಿ ಲೇಖಕಿಯ ಜೊತೆಗೂಡುವಂತೆ ಓದುಗರನ್ನು ಒತ್ತಾಯಿಸುವಂತೆ ತೋರು

ತ್ತವೆ. 'ಪಾಪಧರಾ' (ಪಾಪದಭೂಮಿ) ಎಂಬ ಸಂಕಲನದ ಮುನ್ನುಡಿಯಲ್ಲಿ ಸಾರಾಜೋಸೆಫ್ ಬರೆದಿದ್ದಾರೆ: 'ಪುರುಷ ದಬ್ಬಾಳಿಕೆಯ ಅಡಿಯಲ್ಲಿ ತನ್ನ ಶರೀರದ ಮೇಲೂ ಅಧಿಕಾರ ಕಳೆದುಕೊಂಡಿರುವ ಮಹಿಳೆಯ ಜಗತ್ತಿನ ಬಗ್ಗೆ ನಿರ್ಭೀತವಾಗಿ ಬರೆಯಬೇಕಾದ್ದು ನನ್ನ ಕರ್ತವ್ಯವೆಂದು ನಾನು ತಿಳಿಯುತ್ತೇನೆ' ಈ ಕರ್ತವ್ಯವನ್ನು ಸಾರಾ ನಿರಾಯಾಸವಾಗಿಯೇ ನೆರವೇರಿಸುವಂತೆ ಈ ಸಂಕಲನದ ಕಥೆಗಳು ಸೂಚನೆ ನೀಡುತ್ತವೆ.

ಸಂಕಲನದ ತುಂಬ ಆವರಿಸಿರುವ ಸ್ತ್ರೀವಾದಿ ಪ್ರತಿಭಟನೆಯ ವಾತಾವರಣಕ್ಕೆ ಶೀರ್ಷಿಕೆ ಕಥೆಯೇ ಒಂದು ದಿಕ್ಸೂಚಿಯಾಗಿದೆ. ಅದರ ಹೆಸರು ಸೂಚಿಸುವ ಪಾಪದಭೂಮಿ, ಪುರುಷಪ್ರಪಂಚ ಮತ್ತು ಅದರ ವಿಚಾರಧಾರೆಯೇ ಆಗಿದ್ದು ಕೋಚುನಾರಾಯಣನ (ಗಂಡ), ಅವನ ತಾಯಿ ಮತ್ತು ಮಿಡ್‌ವೈಫ್ ಮತ್ತು ವೇದತಿ—ಈ ಮೂವರು ಅದರ ಪ್ರತಿನಿಧಿಗಳಾಗಿದ್ದಾರೆ. ಕೋಚುನಾರಾಯಣನ ಹೆಂಡತಿ ಲಕ್ಷ್ಮಿಕುಟ್ಟಿಗೆ ಸಾಲಾಗಿ ನಾಲ್ಕು ಹೆಣ್ಣು ಮಕ್ಕಳಿಗೆ ಜನ್ಮ ನೀಡಿದ ಅವರನ್ನು ಬೆಳೆಸುವ ಅವಕಾಶ ಮುಂದೆ ದೊರೆಯದು ಎಂಬುದನ್ನು ಸಾಧಿಸುವವರು ಈ ಮೂರುಜನ. ನಾಲ್ಕನೆಯ ಹೆರಿಗೆಯ ಬೇನೆ ತಿನ್ನುವ ಹೊತ್ತಿನಲ್ಲಿ ಲಕ್ಷ್ಮಿಕುಟ್ಟಿ ತನ್ನ ಹೊಸ ಹೆಣ್ಣು ಶಿಶು ದೂರದೊಂದು ಮಹಿಳಾ ಜಗತ್ತಿನಲ್ಲಿ ಅರಳುತ್ತ ಬೆಳೆಯುವಂತೆ ಕನಸು ಕಾಣುತ್ತಾಳೆ. ಆ ಕನಸಿನೊಂದಿಗೆ ಕಥೆ ಕೊನೆಯಾಗುತ್ತದೆ. ಸಾರಾಜೋಸೆಫ್ ಅವರ ಅನೇಕ ಕಥೆಗಳು ಇಂಥ ಕನಸಿನ ಲೋಕದ ಸೂಚನೆ ನೀಡುತ್ತವೆ. 'ಪ್ರತಿಯೊಬ್ಬ ಬರಹಗಾರ್ತಿಯ ಒಳಗೆ' ಎಂಬ ಕಥೆಯಲ್ಲಿನ ಆಂಟ್ ಮೇಬಲ್‌ಳ ನೆಲೆ ಕೂಡ ಇಂಥ ಕನಸಿನ ಲೋಕವೆ. ಹಲವು ರೀತಿಯಲ್ಲಿ ಅರ್ಥೈಸಲು ಬರುವ ಈ ಕಥೆ ಪಿತೃಪ್ರಧಾನ ಸಮಾಜದಲ್ಲಿ ಹೆಣ್ಣಿನ ಮಾನಸಿಕ ತುಯ್ದಾಟಗಳಿಗೆ ಅಂತಿಮ ಪರಿಹಾರದ ಕೇಂದ್ರ ಬಿಂದು ಸಾಹಿತ್ಯ ಕೃತಿಯೇ ಆಗಿಬಿಡುವುದನ್ನು ಚಿತ್ರಿಸುತ್ತದೆ. ಒಂದರ್ಥದಲ್ಲಿ ಈ ಕಥೆ ಸಮಕಾಲೀನ ಲೇಖಕಿಯರು ಹೊರಬೇಕಾಗಿರುವ ಹೊಸಬಗೆಯ ಜವಾಬ್ದಾರಿಗಳನ್ನು ಚರ್ಚೆಗೆ ಗುರಿಪಡಿಸುತ್ತದೆ. ಈ ಜವಾಬ್ದಾರಿಗಳು ಹಳೆಯ ತಲೆಮಾರಿನ ಲೇಖಕಿಯರು ಒಪ್ಪಲು ಸಿದ್ಧವಿದ್ದುದಕ್ಕಿಂತ ಹೆಚ್ಚಿನ ಸ್ತರದ್ದಾಗಿವೆ. ಸಾರಾ ಅವರ ಕಥೆಗಳಿಂದ ಹೊರಹೊಮ್ಮುವ ಮಹಿಳೆ ಪ್ರೀತಿಯ್ರ ಮಡದಿ, ವಿಧೇಯ ಮಗಳು ಪ್ರತೀಕಗಳಿಂದ ತುಂಬ ಭಿನ್ನವಾಗಿದ್ದಾಳೆ, ಸಂಪ್ರದಾಯದ ಈ ರೂಢಿಗತ ಪ್ರತೀಕಗಳಿಂದ ಭಿನ್ನವಾಗುಳಿದ ಬಗೆಗೆ 'ಮುದಿತೇಯುಂ ಉರಯುನ್ನು' (ಮುದಿತೇಯುಂ ಕೋಪಗೊಂಡಾಗ) ಎಂಬ ಕಥೆಯ ಲಲಿತ ಕೂದಲು ಬಿಚ್ಚಿ ಬಿರಿಹೊಯ್ದು ಗಂಡನ ವಿರುದ್ಧ ಪ್ರತಿಭಟಿಸಿ ಹೋಗುವುದು ಒಂದು ಸಮರ್ಥ ನುಡಿರೂಪ ಪ್ರತೀಕವಾಗಿದೆ. 'ಪಾಪಧರಾ' ಸಂಕಲನದ ಮುನ್ನುಡಿಕಾರ ಸಚ್ಚಿದಾನಂದನ್ ಅವರು ತಮ್ಮ ಮುನ್ನುಡಿಗೆ ಈ ಕಥೆಯ ನುಡಿಗಟ್ಟನ್ನೇ ಬಳಸಿಕೊಂಡು 'ಮುದಿತ್ತೇಯ್ಯುಂ' ಎಂಬ ಹೆಸರಿಡುವ ಮೂಲಕ ಸ್ತ್ರೀವಾದಿ ಸಾಹಿತ್ಯದ ಒಂದು ಮುಖ್ಯ ಅಂಶದತ್ತ ಸೂಚನೆ ನೀಡಿದ್ದಾರೆ.

ಮನೋಧರ್ಮದಿಂದ ಮಾಧವಿಕುಟ್ಟಿಗಿಂತ ಸಾರಾ ಜೋಸೆಫ್‌ರಿಗೆ ಹತ್ತಿರವೆನ್ನಬಹುದಾದ ಮಾನಸಿ ಅವರ ಕಥೆಗಳು ಲೇಖಕಿಯ ಸ್ತ್ರೀವಾದಿ ದೃಷ್ಟಿಯ ಬಗ್ಗೆ ಸಹಾನುಭೂತಿಯಿರದ ಓದುಗರಿಗೂ ಹಿತವೆನಿಸುವಂತಿವೆ, ಇಲ್ಲಿ ಅವರು ಸಾರಾಜೋಸೆಫ್‌ಗಿಂತ ಭಿನ್ನವಾಗಿದ್ದಾರೆ. ಇದೇ ಕಾರಣಕ್ಕಾಗಿ ಪುರುಷ ವಿಮರ್ಶಕರು ಸಾರಾ ಜೋಸೆಫ್ ಅವರ ದೋಷಾರೋಪಣೆ ಧ್ವನಿಯುಳ್ಳ ಚಿಂತನಾಶೀಲತೆಗಿಂತ ಮಾನಸಿಯವರ ಸಮತೂಕದ ರಚನೆಗಳನ್ನು ಮುಖ್ಯವೆಂದು ಭಾವಿಸಬಹುದು. ಹೀಗೆಂದಾಗ ಮಾನಸಿಯವರ ಕಥೆಗಳ ಒಳಗೆ ನೇಯ್ದುಕೊಳ್ಳುವ ಸ್ತ್ರೀವಾದಿ ದೃಷ್ಟಿ ಮಸುಕಾಗಿದೆಯೆಂದು ಅರ್ಥವಲ್ಲ.

ವಾಸ್ತವದಲ್ಲಿ ಕೆಲವು ಕಥೆಗಳಲ್ಲಿ ಈ ಸ್ತ್ರೀವಾದಿ ದೃಷ್ಟಿಕೋನ ಪುರುಷ ಓದುಗರನ್ನು ದಿಗ್ಭ್ರಮೆಗೊಳಿಸುವಷ್ಟು ಪ್ರಧಾನವಾಗುತ್ತವೆ. 'ಮಂಜಿಲೇ ಪಕ್ಷಿ' (ಮಂಜಿನಲ್ಲಿ ಹಕ್ಕಿ) ಸಂಕಲನದ ಕಥೆಗಳು, ಇದಕ್ಕೆ ಉದಾಹರಣೆ. ಇದರಲ್ಲಿನ 'ಶೀಲವತಿ' ಕಥೆ ಪಿತೃ ಪ್ರಧಾನ ವ್ಯವಸ್ಥೆಯ ವಕ್ರತೆ, ವಿಲಕ್ಷಣತೆಯ ಕಾರ್ಯವೈಖರಿಯ ದೊಡ್ಡ ಪಟ್ಟಿಯನ್ನು ನೀಡುತ್ತದೆ, ಈ ಕಾರ್ಯ ವಿಧಾನಕ್ಕೆ ಹೆಣ್ಣು ಯಾವುದೇ ವರ್ಗಕ್ಕೆ ಸೇರಿದವಳಾಗಿರಲಿ, ಅವಳ ಭಾವನೆಗಳು ಯಾವ ಲೆಕ್ಕಕ್ಕೂ ಬರುವುದಿಲ್ಲ ಎಂಬುದನ್ನು ಈ ಕಥೆ ಚಿತ್ರಿಸುತ್ತದೆ. ಭಾರತೀಯ 'ಸಾಧ್ವಿ' ತನಕ್ಕೆ ಸಮಾನಾರ್ಥದಲ್ಲಿ ಬಳಸುವ 'ಶೀಲವತಿ' ಹೆಸರು ಮಹಿಳೆ

ಯರೆಲ್ಲರಿಗೂ ಅನ್ವಿತವಾಗುವಂತೆ ಇಲ್ಲಿ ವಿಸ್ತಾರವಾಗಿ ಬಳಕೆಯಾಗುತ್ತದೆ. 'ದೇವೀ ಮಹಾತ್ಮ್ಯಂ' ಎಂಬ ಕಥೆ ಕೂಡ ಇದೇ ವಿಚಾರವನ್ನ ಹೆಚ್ಚಿನ ವ್ಯಂಗ್ಯದೊಂದಿಗೆ ವಿಸ್ತರಿಸಲೆತ್ನಿಸುತ್ತದೆ. ಭಾರತೀಯ ನೀತಿಕಲ್ಪನೆಯಲ್ಲಿನ ಸ್ತ್ರೀ–ವಿರೋಧಿ ತತ್ವಜ್ಞಾನದ ಮಹಿತಿಯನ್ನು ಅತೀತ ಕಥಾತ್ಮಕ ಒಕ್ಕಣೆಯಾಗಿ ಇಲ್ಲಿನೀಡಲಾ ಗಿದೆ.

ಆದರ್ಶದ ನೆಲೆಯಲ್ಲಿ ಹೆಣ್ಣನ್ನು ದೇವಿಯೆಂದು ಪೂಜಿಸುವ, ವಾಸ್ತವ ಬದುಕಿನಲ್ಲಿ ಮನುಷ್ಯರಿಗಿಂತ ಆಕೆಯನ್ನು ಕೀಳಾಗಿ ನಡೆಸಿಕೊಳ್ಳುವಂಥ ವೈರುದ್ಧ್ಯದ ದರ್ಶನ ಮಾಡಿಸುವ ಮಾನಸಿ ಈ ದರ್ಶನವನ್ನು ಮಾನವರ ಸಂಬಂಧಿತ ಕ್ರಿಯೆಗಳ ಇತರ ಎಲ್ಲ ನೆಲೆಗಳಿಗೂ ವಿಸ್ತರಿಸುವ ಸಾಮರ್ಥ್ಯ ಹೊಂದಿದ್ದಾರೆ. ಆದ್ದರಿಂದಲೇ ಅವರ ಕಥೆಗಳನ್ನು ಸಂಕುಚಿತ ರೀತಿಯಲ್ಲಿ ಅರ್ಥೈಸುವ ಯತ್ನಗಳಿಂದ ನಮ್ಮನ್ನು ದೂರವಿರಿಸುತ್ತಾರೆ. ಇದಕ್ಕೆ ನಿದರ್ಶನವಾಗಿದೆ, 'ವೇರು' (ಬೇರು) ಕಥೆ, ಮೇಲ್ನೋಟಕ್ಕೆ ಇದೊಂದು ಸಾಮಾನ್ಯ ಸ್ತ್ರೀವಾದಿ ಕಥೆಯಂತಿದೆ. ಆದರ ಕೇಂದ್ರಪ್ರಜ್ಞೆ ಗಂಡನ ದಬ್ಬಾಳಿಕೆಯಡಿ ನಲುಗಿ ಹೋದ ಅಜ್ಜಿಯ ಬಗ್ಗೆ ಸಹಾನುಭೂತಿ ಹೊಂದಿದೆ. ಆದರೆ ಈ ಕೇಂದ್ರ ಅಜ್ಜನತ್ತ ಹೊರಳಿದಾಗ ಕಥೆಗೆ ಬೇರೆಯದೇ ತಿರುವು ಬರುತ್ತದೆ. (ದಬ್ಬಾಳಿಕೆಯ ಪ್ರತೀಕವಾಗಿದ್ದ) ಅಜ್ಜ ಈಗ ಹೆಂಡತಿಯನ್ನು ಕಳೆದುಕೊಂಡಿದ್ದಾನೆ. ತಾನು ಮಲಗಿದ ಹಾಸಿಗೆ ಒದ್ದೆ ಮಾಡಿಕೊಂಡರೆ ಮೇಲೇಳಲೂ ಇತರರ ಸಹಾಯ ಬೇಡಬೇಕಾದ ಅಸಹಾಯಕನಾಗಿದ್ದಾನೆ. ಇಂಥ ತಿರುವಿನಿಂದಾಗಿ ಓದುಗರು ಕಥೆಯ ಜೊತೆಗೇ ಮೊದಲು ತಳೆದಿರಬಹುದಾದ ಯಾವುದೇ ಪುರುಷ ವಿರೋಧಿ ಭಾವನೆಯನ್ನು ಬಿಡಬೇಕಾದ ಒತ್ತಡವುಂಟಾಗುತ್ತದೆ. ಈ ಹೊಸ ಸ್ಥಿತಿಯಲ್ಲಿ ಎಲ್ಲದಕ್ಕೂ ಬೇರೆಯದೆ ನೋಟ ಒದಗುತ್ತದೆ. ಹೀಗೆ (ವಿರುದ್ಧವಾದವುಗಳನ್ನೂ) ಒಳಗೊಳ್ಳಬಲ್ಲ ರೀತಿಯ ಸಂವೇದನೆ ಮಾನಸಿಯವರ ಈ ಸಂಕಲನದ, ತೀರ ಕಾಲ್ಪನಿಕವೆನ್ನಬಹುದಾದ ಶೀರ್ಷಿಕೆಯ ಕಥೆಯೂ ಒಳಗೊಂಡಂತೆ, ಎಲ್ಲ ಕಥೆಗಳ ಲಕ್ಷಣವಾಗಿದೆ.

ಮಲೆಯಾಳಿ ಸಣ್ಣ ಕಥೆಯ ಪ್ರಕಾರದಲ್ಲಿ ಮತ್ತೊಂದು ಅಧಿಕಾರಯುತ ಧ್ವನಿ ಗ್ರೇಸಿಯವರದು. ಅವರ ಸಂಕಲನಗಳ ಹೆಸರುಗಳೂ ಭಾವನೆಗಳನ್ನು ಎಬ್ಬಿಸುವಂತಿದೆ. (ಉದಾ : ಪದಿಯಿರಂಗಿಪ್ಪೋಯ ಪಾರ್ವತಿ) (ನಡೆದು ಹೋದ ಪಾರ್ವತಿ), ಮಾಧವಿಕುಟ್ಟಿ, ಸಾರಾ ಜೋಸೆಫ್ ಮತ್ತು ಮಾನಸಿಯವರ ಸೃಜನಶೀಲ ವಾತಾವರಣವನ್ನು ಕಲಾತ್ಮಕವಾದ ನವ್ಯದ ಅವಧಿಯೆಂದು ಗುರುತಿಸಬಹುದು, ಗ್ರೇಸಿಯವರ ಕಥೆಗಳು ಸ್ಪಷ್ಟವಾಗಿ ನವ್ಯೋತ್ತರ ನೆಲೆಗಳನ್ನು ಒಳಗೊಂಡಿವೆ. ಹೀಗಾಗಿ ಇವರ ಕಥೆಗಳೊಳಗಿನ ಸ್ತ್ರೀವಾದಿ ದನಿ ಸಮಸ್ಯೀಕೃತವಾಗುತ್ತದೆ. ಈ ಸಮಸ್ಯೀಕರಣದ ಅಂಶವೇ ಗ್ರೇಸಿಯವರ ಕಥೆಗಳನ್ನು ಮನಸ್ಸಿಗೆ ಹಿಡಿಯುವಂತೆ ಮಾಡುತ್ತದೆ. ಹಲವಾರು ಕಥೆಗಳು ದೃಷ್ಟಾಂತ ಕಥೆಗಳ, ನೀತಿ ಕಥಗಳ, ಗಾದೆ ನಾಣ್ಣುಡಿಗಳ ಶೈಲಿಯಲ್ಲಿ ರಚಿತವಾಗಿದ್ದು ಬೈಬಲ್ ಹಾಗೂ ಪುರಾಣ ಸಂಬಂಧಿ ಪ್ರಭಾವಳಿಗಳನ್ನು ಇವು ಒಳಗೊಳ್ಳುತ್ತವೆ. ಅವುಗಳನ್ನು ವಿವರಿಸುವಲ್ಲಿ ತಲೆದೋರುವ ಸಿನಿಕತನ, ಅಗೌರವದ ಧ್ವನಿ. ಈ ಕಥೆಗಳಲ್ಲಿನ ವ್ಯಂಗ್ಯದ ಜೊತೆಗೂಡುತ್ತದೆ. ಗ್ರೇಸಿಯವರ ಕಥನ ಧ್ವನಿಯ ಮುಖ್ಯ ಅಂಶ ಇದು. ನಿಷ್ಠುರ ಅರ್ಥದಲ್ಲಿ ಗ್ರೇಸಿಯವರ ಕಥೆಗಳು ಸ್ತ್ರೀವಾದಿ ಕಥೆಗಳಲ್ಲ. ಆದರೆ ಪ್ರಜ್ಞಾವಂತ ಓದುಗರು ನಿರುಪದ್ರವಿಯಂತಿರುವ ಹೊರಮೈಯಿನ ಹಿಂದೆ ಇಣುಕುತ್ತಿರುವ ಭೇದಿತ ಪ್ರಜ್ಞೆಯನು ಗುರುತಿಸಬಹುದು. 'ಒರಿಡವರ್' ಕಥೆ ಒಂದು ಗೋಳುಗುಟ್ಟಿಸುವ ಜಗತ್ತನ್ನು ನಿರ್ಮಿಸುತ್ತದೆ. ಈ ಜಗತ್ತು ಮತ್ತು ಸಾಹಿತ್ಯಕೃತಿಯ ವ್ಯತ್ಯಾಸಗಳು (ಕಡಿಮೆಯಾಗಿ) ಪೂರೆಯಾಗಿ ಆ ಇಡೀ ಜಗತ್ತೇ ಒಂದು ಕೃತಿಯಾಗಿ ಬಿಡುತ್ತದೆ. ಕಥಕವ್ಯಕ್ತಿಯ ಸ್ವ–ಕೇಂದ್ರಿತ ಧ್ವನಿಯ ಮೂಲಕ ಇಲ್ಲಿನಸ್ತ್ರೀವಾದಿ ಪ್ರಶ್ನೆ ಸೂಚಿತವಾಗುತ್ತದೆ. ಹೊರ ಜಗತ್ತಿನೊಂದಿಗೆ ಆಕೆ ಪಡೆಯಲು ಸಾಧ್ಯವಾಗಿಸಿಕೊಂಡ ಕೆಲವೇ ಕೆಲವು ಸಮಸ್ಯಾತ್ಮಕ ಸಂಬಂಧಗಳ ಮೂಲಕ ಈ ಪ್ರಶ್ನೆಯನ್ನು ಎತ್ತಿದ್ದಾರೆ ಲೇಖಕಿ. ಗ್ರೇಸಿಯವರ ಕಥೆಗಳಲ್ಲಿನ ಥಟ್ಟನೆ ದಿಕ್ಕು ಬದಲಿಸುವ ಈ ಚಲನೆಯು ಅವರ ಕಥೆಗಳನ್ನು ಇತ್ತಿಚಿನ ಮಲೆಯಾಳಿ ಕಥೆಗಾರ್ತಿಯರೆಲ್ಲರ ಕಥೆಗಳಿಗಿಂತ ಭಿನ್ನವಾಗಿಸುತ್ತದೆ.

ಮಲಯಾಳಿ ಸಾಹಿತ್ಯದಲ್ಲಿ ಮಹಿಳೆಯರು, ವಿಶೇಷವಾಗಿ ಸ್ತ್ರೀವಾದಿ ನೆಲೆಯಿಂದ ಬರೆಯುವವರು ಸಣ್ಣಕಥೆ

ಯನ್ನೇ ಪ್ರಧಾನ ಅಭಿವ್ಯಕ್ತಿ ಮಾಧ್ಯಮವಾಗಿ ಸ್ವೀಕರಿಸುತ್ತಿದ್ದಾರೆ. ಈ ಮೊದಲು ಗಮನಿಸಿದವರ ಕಥೆಗಳು, ಅಶಿತ, (ಈಕೆಯ 'ವಿಸ್ಮಯ ಚಿನ್ನಂಗಳ್' ಕಥಾಸಂಕಲನ ಸ್ವಲ್ಪ ಹಿಂದಿನ ಅವಧಿಗೆ ಸೇರಿದ್ದು) ಮತ್ತು ಕೆ. ಎಂ. ರಾಧಾ ('ಉಷಸ್ಸಿಂತೇ ಜ್ವಾಲಾ' ಸಂಕಲನ ಹಲವು ಕುತೂಹಲಕಾರಿ ಕಥೆಗಳುಳ್ಳದ್ದು) ಮೊದಲಾದವರ ರಚನೆಗಳೊಂದಿಗೆ ಹೋಲಿಸಿದಾಗ ಮಹಿಳೆಯರು ಕಾದಂಬರಿಯ ಪ್ರಕಾರದಲ್ಲಿನ ಪ್ರಯತ್ನಗಳು ನೀರಸ, ನಿರುತ್ಸಾಹದಾಯಕವಾಗಿ ತೋರುತ್ತವೆ. ಆದರೂ ಉಳಿದ ಕೃತಿಗಳಿಗಿಂತ ವಿಭಿನ್ನವಾದ ಎರಡು ಕಾದಂಬರಿಗಳು ಪಿ. ವತ್ಸಲಾ ಅವರ 'ಚಾವೇರ್' (ಕಮ್ಯಾಂಡೋಗಳು) ಮತ್ತು ನಳಿನಿ ಬೇಕೆಲ್ ಅವರ 'ಅಮ್ಮ ದೈವಂಗಳ್' (ಮಾತೃ ದೇವತೆಗಳು).

ಪಿ. ವತ್ಸಲ ತುಂಬ ಬೆಳೆಯುವ ಸಾಮರ್ಥ್ಯವಿರುವ ಲೇಖಕಿಯಾಗಿದ್ದು ಸಾಮಾಜಿಕ ಸಮಸ್ಯೆಗಳನ್ನು ಸ್ಪಷ್ಟವಾದ ನೈತಿಕ ಬದ್ಧತೆಯೊಂದಿಗೆ ಚಿತ್ರಿಸಲೆತ್ನಿಸುತ್ತಾರೆ. 'ಚಾವೇರ್' ಅನೇಕ ಬಗೆಯಲ್ಲಿ ಆಕೆಯ ಸಾಮರ್ಥ್ಯದ ಪ್ರತೀಕವಾಗಿದೆ. ಈ ಕಾದಂಬರಿಯಲ್ಲಿ ಹಳೆಯ ಸಾಮಾಜಿಕ ಸಂಬಂಧಗಳನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತಾ ಸ್ವಾತಂತ್ರ್ಯಪೂರ್ವದ ಕೇರಳವನ್ನು ಮತ್ತೆ ಕಟ್ಟಿಕೊಡಲು ಯತ್ನಿಸಿದ್ದಾರೆ.

ಸ್ವಾತಂತ್ರ್ಯ ಚಳವಳಿ, ಕೃಷಿ ಸಂಬಂಧಗಳು, ರೈತಾಪಿ ಜನರ ಅಶಾಂತಿ ಮುಂತಾದ ಪ್ರತಿಯೊಂದು ಅಂಶವೂ ಈ ಕಲಾವಿದೆಯ ಗಮನ ಪಡೆದುಕೊಳ್ಳುತ್ತದೆ. ಸ್ತ್ರೀತ್ವದ ಸ್ವಂತಿಕೆಯ ಅನ್ವೇಷಣೆಯ ವಿಶಿಷ್ಟ ಸೂಚನೆ ಇಲ್ಲಿ ಇಲ್ಲದಿದ್ದರೂ ಪಿತೃಪ್ರಧಾನ ವ್ಯವಸ್ಥೆಯ ಸಾಮಾಜಿಕ ಪಕ್ಷಪಾತಗಳಿಗೆ ಬಲಿಯಾದ ದೈವಯಾನಿಯ ಪಾತ್ರದ ಮೂಲಕ ಲಿಂಗ—ಅಸಮಾನತೆಯ ಪ್ರಶ್ನೆ ಚರ್ಚಿತವಾಗುತ್ತದೆ. ಸಣ್ಣ ಕಥೆಗಳ ಬರಹಗಾರ್ತಿಯರಂತೆ ವತ್ಸಲಾ ಲಿಂಗಜಾತಿಯ ವೈರುಧ್ಯವೇ ಪ್ರಾಥಮಿಕ ಮಹತ್ವದ್ದೆಂದು ಪರಿಗಣಿಸುವುದಿಲ್ಲ. ರೈತ—ಜಮೀನುದಾರರ ಸಂಬಂಧಗಳೇ ಅವರ ಮುಖ್ಯ ಚಿಂತನೆಗೆ ಕೇಂದ್ರವಾಗಿದ್ದು ಆ ಸಂಬಂಧಗಳಲ್ಲಿ ಅಂತಸ್ಥವಾಗಿರುವ, ಲಿಂಗ ಜಾತಿಯ ವೈರುಧ್ಯಗಳ ಕಥಾತ್ಮಕ ಅನ್ವೇಷಣೆಗೆ ಅವರು ಯತ್ನಿಸ್ತುತ್ತಾರೆ.

ನಳಿನಿ ಬೇಕೆಲ್ ಅವರ ಕೃತಿ 'ಅಮ್ಮ ದೈವಂಗಳ್' ಬಗ್ಗೆ ಕೂಡ ಇದೇ ಮಾತುಗಳನ್ನು ಹೇಳಬಹುದು. ಇದರ ಹರಹು ಚಿಕ್ಕದು, ಅನಾಥ ಮಕ್ಕಳನ್ನು ಕುರಿತು ಸಂಶೋಧನೆ ನಡೆಸುವ ಆಸಕ್ತಿಯಿಂದ ಸುಶಿಕ್ಷಿತ ಯುವತಿ ವಿನೀತ ಅನಾಥಾಲಯವೊಂದರ ಮೇಲ್ವಿಚಾರಕೆಯ ಉದ್ಯೋಗ ಆರಿಸಿಕೊಳ್ಳುತ್ತಾಳೆ. ಅನಾಥಾಲಯಕ್ಕೆ ಬಂದ ಮೇಲೆ ಆಕೆಗೆ ಆ ಸಾಮಾಜಿಕ ಸಮಸ್ಯೆ ಬಗ್ಗೆ ತನಗಿರುವ ಪಾಂಡಿತ್ಯ ವಾಸ್ತವ ಬದುಕಿನ ಸನ್ನಿವೇಶಗಳ ಸಂಕೀರ್ಣತೆ ಮತ್ತು ಗಂಭೀರತೆಗಳಿಗೆ ಒಗ್ಗುವಲ್ಲಿ ನಿಷ್ಪ್ರಯೋಜಕವಾಗಿ ತೋರುತ್ತದೆ. ಕಲ್ಪನೆ— ವಾಸ್ತವಗಳ ನಡುವಿನ ಅಂತರವನ್ನು ಅಳೆಯುವ ಯತ್ನವಾಗಿ ಈ ಕಾದಂಬರಿಯು ಸಮಕಾಲೀನ ಮಹಿಳಾ ಸಾಹಿತ್ಯದ ಪ್ರಮುಖ ಕಾಳಜಿಯೊಂದನ್ನು ಸೂಚಿಸುತ್ತವೆ.

ಮಲಯಾಳಿ ಸಾಹಿತ್ಯದಲ್ಲಿನ ಇತ್ತೀಚಿನ ಮಹಿಳಾ ಸಾಹಿತ್ಯದ ಪ್ರಮುಖ ಮಾದರಿಗಳನ್ನು ಪರಿಶೀಲಿಸುವಾಗ ಎಚ್ಚರವುಳ್ಳ ಓದುಗರು ಸ್ತ್ರೀವಾದಿ ನೋಟವುಳ್ಳ ಲೇಖಕಿಯರು ಏಕೆ ಕಾದಂಬರಿಗಿಂತ ಸಣ್ಣಕಥೆಯನ್ನು ಅಭಿವ್ಯಕ್ತಿಗಾಗಿ ಆರಿಸಿಕೊಳ್ಳಲು ಬಯಸುತ್ತಾರೆ ಎಂದು ಆಶ್ಚರ್ಯ ಪಡಬಹುದು. ಸ್ತ್ರೀವಾದಿ ಪ್ರಜ್ಞೆಯು ಮೂಲಭೂತವಾಗಿ ನಮ್ಮ ಅನುಭವದ ಭಾವನಾತ್ಮಕ ಪ್ರತಿಕ್ರಿಯೆಯುಳ್ಳ ತುಂಬ ಕಿರಿಯ ವಲಯವನ್ನು ಮಾತ್ರ ಸ್ಪರ್ಶಿಸುತ್ತಿದ್ದು, ನಮ್ಮ ಸಾಮಾಜಿಕ ಅಸ್ತಿತ್ವದ ವಿಶಾಲ ವಲಯಗಳು ಇದರಿಂದ ವಿಚಲಿತವಾಗದೇ ಉಳಿದುಬಿಡುತ್ತವೆ ಎಂಬುದು ಇದಕ್ಕೆ ಕಾರಣವಿರಬಹುದೇ? ಅಥವಾ ಸ್ತ್ರೀವಾದಿ ಸಾಹಿತ್ಯ ಪ್ರಜ್ಞೆಯ ವಿಕಾಸದಲ್ಲಿ ಇದು ಒಂದು ಹಂತವನ್ನು ಸೂಚಿಸುತ್ತಿದೆಯೆ? ಈ ಪ್ರಶ್ನೆಗೆ ಕಾಲವೇ ಉತ್ತರ ನೀಡಬಲ್ಲದು.

"ಮನೆಗೆಲಸ ಮಹಿಳೆಯ ಎಲ್ಲ ಸೃಜನಶೀಲತೆಯನ್ನು ಕತ್ತರಿಸಿ ಹಾಕುವಂತೆಯೇ ಅವಳ ಲೈಂಗಿಕ, ಮಾನಸಿಕ, ಭಾವನಾತ್ಮಕ ಸ್ವಾತಂತ್ರ್ಯಗಳ ಅಭಿವ್ಯಕ್ತಿಯನ್ನು ತುಂಡರಿಸುತ್ತದೆ."

—ಮೊರಿಯಾ ಡೆಲ್ಲ ಕಾಸ್ಟ

ಸೆರಗಿನಂಚಿನ ನೆನಪುಗಳು

ನೇಮಿಚಂದ್ರ

ಅಮ್ಮ ಬೊಂಬಾಯಿಗೆ ಬಂದದ್ದೇ ಇಲ್ಲ. ಏಳು ಹೆತ್ತ ಆ ಮಹಾಮಾತೆಯ ಹೊಟ್ಟೆಯಲ್ಲಿ ಹುಟ್ಟಿದ ನಾನೊಬ್ಬಳೇ ಬೆಂಗಳೂರು ಬಿಟ್ಟು ಇಷ್ಟು ದೂರ ಬಂದು ನೆಲೆಸಿದ್ದು. ಕಳೆದ ಇಪ್ಪತ್ತು ವರ್ಷದಿಂದ ಚಾಮರಾಜಪೇಟೆಯ ಗಲ್ಲಿಗಳಲ್ಲಿ, ಬಾಡಿಗೆ ಹಿಡಿದ ಮನೆಗಳಲ್ಲಿ ಬಂದು ಹೋಗುವ ನೆಂಟರ ಉಪಚಾರದಲ್ಲಿ, ಐದು ಹೆಣ್ಣು ಮಕ್ಕಳ ಬಸಿರು, ಬಾಣಂತನದಲ್ಲಿ, ತೇಯ್ದು ಹೋದ ಅಮ್ಮ—ಹೆಚ್ಚೆಂದರೆ ಗಾಂಧಿಬಜಾರ್ ಕಂಡವರು. ಇಂಥಾ ಅಮ್ಮನನ್ನು ಈ ಇಳಿ ವಯಸ್ಸಿನಲ್ಲಿ ಬೊಂಬಾಯಿ ತೋರಿಸಲೆಂದು ಎಳೆತಂದಿದ್ದೆ. ಮೂರು ತಿಂಗಳು ಉಳಿಸಿಕೊಂಡಿದ್ದೆ. ಒಂದು ನಿಮಿಷ ಪುರಸೊತ್ತಾಗಿ ಕುಳಿತಿರದ ಅಮ್ಮನಿಗೆ ಡೊಂಬಿವಲಿಯ ಫ್ಲಾಟ್‌ನಲ್ಲಿ ಎಲ್ಲಿಲ್ಲದ ಇರುಸುಮುರುಸು. ಅರವತ್ತೈದಾದರೂ ಅಮ್ಮನಿಗೆ ಮನೆಗೆಲಸದಿಂದ ನಿವೃತ್ತಿ ಇರಲಿಲ್ಲ. ರುಬ್ಬಿದ ಮಸಾಲೆ, ತಿರುವಿದ ದೋಸೆ, ಸೋಸಿದ ಕಾಫಿಯ ರುಚಿ ಹತ್ತಿದ ಅಪ್ಪನಿಗೆ ಈಗಲೂ ಅಚ್ಚುಕಟ್ಟಾಗಿ ಮಾಡಿ ಹಾಕುವರು. ಅಪ್ಪ ಬೆಳಗ್ಗೆ ತಿಂಡಿ ತಿಂದದ್ದೇ ಮನೆಯಾಚೆ ಮೆಟ್ಟು ತೊಟ್ಟು ನಡೆದರೆಂದರೆ ರಸ್ತೆ ಅಂಚಿನ ಪಾರ್ಕಿನ ಕಟ್ಟೆಯ ಮೇಲೆ ತಮ್ಮಂಥಾ ಇನ್ನೊಂದಿಬ್ಬರು ಮುದುಕರ ಹಿಡಿದು ತಮ್ಮ ಪಾಂಡಿತ್ಯವನ್ನೋ, ಆಧ್ಯಾತ್ಮದ ಉತ್ತುಂಗ ಶಿಖರವನ್ನೋ ಚರ್ಚಿಸುತ್ತಾ ಕುಳಿತಾಗ, ಅಪ್ಪನಿಗೆ ಒಳನಲ್ಲಿಯಲ್ಲಿ ನೀರು ಬಾರದೆ ಕಾಂಪೌಂಡಿನಂಚಿನಿಂದ ಅಮ್ಮ ಒಂದೊಂದೇ ಕೊಡ ನೀರು ಹೊಯ್ಯುವುದು ಕಾಣುತ್ತಲೇ ಇರಲಿಲ್ಲ.

ಈ ಬಾರಿ ಬೆಂಗಳೂರಿಗೆ ಹೋದಾಗ, ಅಮ್ಮಂಗೆ ಹೇಳಿದ್ದೆ—'ಈ ಸಾರಿ ನಂಜೊತೆಗೇ ಕರಕೊಂಡು ಹೋಗ್ತೀನಮ್ಮ. ಒಂದೆರಡು ತಿಂಗಳಿದ್ದು, ಬಾಂಬೆ ನೋಡೋವಂತಿ'. ಸೌದೆ ನೂಕುತ್ತಾ, ಒಲೆ ಊದುತ್ತಿದ್ದ ಅಮ್ಮ, 'ನಂಗೆಂಥದ್ದೇ ಬೊಂಬಾಯಿ. ನೋಡಿದ್ರಾಯ್ತು ಬಿಡು.' ಯಾವೊಂದೂ ಆಸೆಯೂ ಇಲ್ಲದೆ, ತನ್ನದಾದ ವೈಯಕ್ತಿಕ ಬೇಡಿಕೆಗಳೇ ಇಲ್ಲ ಎಂಬಂಥ ಅಮ್ಮನ ಮುಖದ ನಿರ್ಲಿಪ್ತತೆಯು ಬೆರಗಿನಿಂದ ನಿಟ್ಟಿಸಿದೆ. ಒಲೆಯ ಬಿಸಿಗಿಟ್ಟ ನನ್ನಮ್ಮನ ಮುಖದ ಸುಕ್ಕುಗಳಲ್ಲಿ 65ರ ನೆನಪುಗಳಿದ್ದವು. ಪ್ರಪಂಚ ಬದಲಾಗಿತ್ತು. ಆದರೆ ಅಮ್ಮ, ಅದೇ ಸೌದೆ ಒಲೆಗೆ ಸರ್ವೇಮರದ ತುಂಡುಗಳನ್ನು, ಕಾಂಪೌಂಡಿನ ತರಗೆಲೆಗಳನ್ನು ಬಳಿದು ತುರುಕಿ, ಬಿದ್ದ ತೆಂಗಿನಗರಿಯ ತಳ್ಳಿ. ಊದುಕೊಳವೆಯಲ್ಲಿ ಊದುವಾಗ ಅಮ್ಮನ ಮುಖ ಒಲೆಯ ಉರಿಗೆ ಬಂಗಾರದ ಬಣ್ಣದಲ್ಲಿ ಥಳಥಳಿಸಿತ್ತು. ಊದುತ್ತಿದ್ದಂತೆ ಸಮಯ ಸ್ತಬ್ಧವಾದಂತೆ, ಅಮ್ಮ ಕಂಸುಬ್ಬಿನ ಗುಳಿ ಕೆನ್ನೆಗಳು ಸುಕ್ಕುಗಟ್ಟಿ. ಬೆವೆತ ಮುಂಗುರುಳು ಬೆಳ್ಳಗಾಗಿದ್ದವು. ಈ ಬಾರಿ ಅಮ್ಮನ ಯಾವ ಸಬೂಬಿಗೂ ಜಗ್ಗದೆ, ಬಲವಂತವಾಗಿ ಕರೆತಂದಿದ್ದೆ, ಬೊಂಬಾಯಿಗೆ.

ನನ್ನ ಇಬ್ಬರು ಮಕ್ಕಳು ಶಾಂತಿ, ಕಮಲ ಅಜ್ಜಿಯನ್ನು ಕಂಡು ಕುಣಿದಾಡಿದ್ದರು. ನಾ ಕಮಲ ಹುಟ್ಟಿದ ಮೇಲೆ ಆಪರೇಷನ್ ಮಾಡಿಸಿಕೊಂಡಾಗ, ಅಪ್ಪ ಕಿಡಿ ಕಿಡಿಯಾಗಿ, 'ಬುದ್ದಿಲ್ಲ ನಿನಗೆ, ಮನೆತನದ ಹೆಸರು ಉಳಿಸಲು ಒಂದು ಗಂಡು ಬೇಡವೆ?' ಎಂದು ಕೂಗಾಡಿದ್ದು ನೆನಪಾಯ್ತು. ನಾನೂ ದನಿ ಏರಿಸಿ ಅಪ್ಪನ ಸಮಕ್ಕೂ ರೇಗಿದ್ದೆ. ರವಿ ನನ್ನ ಬೆನ್ನಿಗಿದ್ದ, ಬೆಂಬಲಕ್ಕಿದ್ದ. ಅಪ್ಪಟ ಅನಕ್ಷರಸ್ಥೆ, ಅಮ್ಮ ಅತಿ ಮೆಲ್ಲಿಗೆ 'ಬಿಡು, ಹೆಣ್ಣೇನು—ಗಂಡೇನು ಈಗಿನ ಕಾಲದಲ್ಲಿ....'ಎಂದಿದ್ದಳು. ತಾನೊಪ್ಪಿಸಿಕೊಂಡ ಬದುಕಿನ ಅನಿವಾರ್ತೆಗಳು ನನ್ನನ್ನು ಕಾಡದ ಬಗ್ಗೆ ಅವಳ ಮುಖದಲ್ಲಿ ಎಂಥದ್ದೋ ಒಂದಷ್ಟು ಸಮಾಧಾನವಿತ್ತು. ತನ್ನ ಫಲವತ್ತತೆಯ ಅಂಚಿನವರೆಗೂ ಬಸಿರಾಗಿದ್ದಳು ಅಮ್ಮ.

ಅಮ್ಮನ ಬದುಕಿನಲ್ಲಿ ಆಯ್ಕೆಗಳಿರಲಿಲ್ಲ. ಇತರರ ನಿರ್ಧಾರಗಳ ಮೇಲೆ, ಇತರರ ಬೇಡಿಕೆಗಳ ಮೇಲೆ, ಇತರರ ಬಲವಂತದ ಹೇರಿಕೆಗಳ ಮೇಲೆ ಅಮ್ಮನ ಬದುಕು ನಡೆದಿತ್ತು.

ಅಮ್ಮ ಬೊಂಬಾಯಿಗೆ ಬಂದ ವಾರವೇ ನಾನು ಮುಲುಂದಿನಲ್ಲಿ ಒಂದು ಪ್ಲಾಟ್ ನೋಡಿ ಬಂದಿದ್ದೆ. ಸಂಜೆ ಬಂದವಳೇ—

'ರವಿ, ತಿಂಗಳಿಗೆ ಸಾವಿರದ್ಮೈನೂರು ಬರೀ ಬಾಡಿಗೆ ಕಟ್ತಾ ಇದ್ದೀವಿ. ಈ ಬಾರಿ ಬ್ಯಾಂಕ್ ಸಾಲ ಎತ್ತೋಣ, ಪ್ಲಾಟ್ ಚೆನ್ನಾಗಿದೆ. ಹೊಸದಾಗೂ ಇದೆ. ತಡ ಮಾಡೋದು ಬೇಡ. ಕೊಂಡುಬಿಡೋಣ... ' ಹೇಳಿದ್ದೆ.

'ಈಗಲೇ ಎಂಥಾ ಅವಸರ ಶೀಲಾ, ಸ್ವಲ್ಪ ಕೈಯಲ್ಲಿ ಕಾಸು ಕೂಡಲಿ....' ರಾಗ ಎಳೆದ ರವಿಯ ಅರ್ಧಕ್ಕೇ ತಡೆದು–

'ಸರಿ, ಕಾಯ್ತಾ ಕೂತರೆ ಆಯ್ತು. ಒಂದು ವರ್ಷಕ್ಕೆ, ಬೆಲೆ ಎರಡರಷ್ಟಾಗಿರುತ್ತೆ. ಡೊಂಬಿವಲಿ ಆಚೆಗೂ ಸಿಗೋದು ಕಷ್ಟ....' ಎಂದಿದ್ದೆ.

'ತಿಂಗಳಿಗೆ ಎರಡು–ಮೂರು ಸಾವಿರ ಸಾಲಕ್ಕೆ ಕಟ್ಟಿದರೆ, ಒಬ್ಬರ ಸಂಬಳ ಅಲ್ಲಿಗೇ ಮುಗಿಯುತ್ತೆ....' ರವಿಯೂ ವಾದಿಸಿದ.

ಇಬ್ಬರೂ ಬಹಳ ಹೊತ್ತು ಕುಳಿತು ಲೆಕ್ಕ ಹಾಕಿವೆವು, ಗುದ್ದಾಡಿದೆವು, ಕಚ್ಚಾಡಿದೆವು, ಬ್ಯಾಂಕ್ ಪಾಸ್ ಬುಕ್‌ಗಳ ಹರಡಿಕೊಂಡು, ಆರ್.ಡಿ–ಎಫ್.ಡಿ ಸೇವಿಂಗ್ಸ್ ಎಲ್ಲವನ್ನೂ ಕೂಡಿ ಗುಣಿಸಿ ಹಾಕಿದ್ದಾಯ್ತು. ಅಮ್ಮ ನಮ್ಮೊಂದಿಗಿದ್ದ ಆ ಮೂರು ತಿಂಗಳಲ್ಲೇ ಹೇಗೋ ಎಲ್ಲವೂ ಮುಗಿದಿತ್ತು, ಪ್ಲಾಟ್ ನಮ್ಮ ಹೆಸರಲ್ಲಿ ರಿಜಿಸ್ಟರ್ ಆಗಿತ್ತು. ಅಂದು 'ಸೆಲಿಬ್ರೇಟ್' ಅಂತ ಹಬ್ಬದಡಿಗೆ ಮಾಡಿ ಉಣ್ಣುವಾಗ, ಅಮ್ಮ ಅತಿ ಮೆಲ್ಲಗೆ— 'ಮನೆ ಅಳಿಯಂದಿರ ಹೆಸರಿಗಾ ?' ಅಂತಾ ಕೇಳಿದಾಗ, 'ಇಲ್ಲಮ್ಮಾ, ಇಬ್ಬರ ಹೆಸರಲ್ಲೂ ಇದೆ, ಯಾಕೆ ?' ಅಚ್ಚರಿಯಿಂದ ಕೇಳಿದೆ. 'ಒಳ್ಳೇದಾಯ್ತು ಬಿಡು. ಯಾರಿಗೆ ಗೊತ್ತು ಈ ಗಂಡಸರ ಬುದ್ಧಿ....' ಅಂದಿದ್ದಳು. ಅಂಥಾ ವಿಚಾರವೇ ಹೊಳೆದಿರದ ನಾ ಚಕ್ಕನೆ ತಿರುಗಿದೆ. ಇಬ್ಬರ ಹೆಸರಲ್ಲೂ ಆಸ್ತಿ ಮಾಡಿದ್ದು ನನ್ನ ಪ್ರಜ್ಞಾಪೂರ್ವಕ ನಿರ್ಧಾರವಾಗಿರಲಿಲ್ಲ. ಒಟ್ಟಿಗೇ ಪೇಪರ್ಸ್‌ಗೆ ಸಹಿ ಹಾಕಿದ್ವಿ. 'ಯಾಕಮ್ಮಾ ಅವರ ಹೆಸರಲ್ಲಿದ್ದರೇನು—ನಂದಾದ್ರೇನು....' ಅಮ್ಮ ಉತ್ತರಿಸಲಿಲ್ಲ. ವಿಷಾದದ ಸಣ್ಣ ನಗು, ಸಣ್ಣ ನಿಟ್ಟುಸಿರು:

ಅದೇ ದಿನ ಸಂಜೆ, ಆಫೀಸಿನಲ್ಲಿ ಕೆಲಸ ಹೆಚ್ಚಿತ್ತು ಅಂತಾ ತಡವಾಗಿ ಬಂದವಳು, 'ಥೇ ಸಾಕಾಗಿಹೋಯ್ತು, ಅತ್ತ ಒಬ್ಬ ಮನೇಲೇ ಇರೋ ಕೆಲಸದಾಕಿನಾದ್ರೂ ಹುಡುಕಬೇಕು' ತಡಬಡಿಸಿ ಅಡಿಗೆ ಆರಂಭಿಸಿದೆ. ಹಾಲಿನಲ್ಲಿ ಮಕ್ಕಳೊಂದಿಗೆ ಆಡುತ್ತಿದ್ದ ಅಮ್ಮ 'ಮನೇಲಿರೋ ಕೆಲಸದಾಕಿ ಎಲ್ಲಾ ಬೇಡ ಬಿಡೆ. ನೀನಿರೋವಾಗ್ಲೆ ಬಂದು ಮಾಡಿಕೊಂಡು ಹೋಗಲಿ. ಸುಮ್ಮನೆ ಅದೆಂಥದ್ದೋ ಅಡಿಗೆ ಮಾಡೋ ಯಂತ್ರ, ಬಟ್ಟೆ ಒಗೆಯೋ ಯಂತ್ರ ಬಂದಿದೆಯಂತಲ್ಲ ಕೊಂಡುಕೊಂಡು ಬಿಡು 'ಅಂದವಳು ಅತಿ ಮೆಲ್ಲಗೆ ತನಗೇ ಎಂಬಂತೆ 'ಈ ಗಂಡಸರನ್ನ ನಂಬೋ ಹಾಗಿಲ್ಲ' ತಟ್ಟನೆ ತಿರುಗಿದೆ. 'ಛೆ ಬಿಡಮ್ಮ. ಎಂಥದ್ದೇಳ್ತೀಯಾ....' ಅಮ್ಮ ಹೇಳಿದಳು. ಎಷ್ಟೋ ಕತೆಗಳನ್ನು. ಈಗ ನಾ ಮಗಳಾಗಿ ಅಲ್ಲ, ಮತ್ತೊಬ್ಬ ಸಂಸಾರಸ್ಥ ಹೆಣ್ಣಾಗಿ, ಹೇಳಿಕೊಂಡಳು. ಕಣ್ಣಿಗೆ ಸೆರಗೊತ್ತಿಕೊಂಡಳು. ಎಂಥದ್ದೋ ಬಾಲ್ಯದ ಮಬ್ಬು ಮಬ್ಬು ಚಿತ್ರಗಳು. ಹೇಳಲಾರದೆ ಗಂಟಲಲ್ಲೇ ಉಳಿದ ಗುಟ್ಟುಗಳನ್ನು ಅಮ್ಮ ಗಂಟು ಕಟ್ಟಿದ್ದಳು ಆ ಸೆರಗ ತುದಿಗೆ. ಹಂಚಿಕೊಳ್ಳದೆಯೇ ಸ್ಪಷ್ಟವಾದ ಗುಟ್ಟುಗಳು, ಬಾಯಿ ಬಿಡದೆಯೇ ಬಯಲಾದ ಗುಟ್ಟುಗಳು. ಅಮ್ಮನ ಆ ಸೆರಗಿನಂಚಿಗೆ ಎಷ್ಟೊಂದು ನೆನಪುಗಳಿದ್ದವು, ಅವಳ ಕಣ್ಣೊರೆಸಿದ ಆ ಸೆರಗಿನಂಚಿನಲ್ಲಿ ಹೇಸಿಗೆಯ ಸತ್ಯಗಳಿದ್ದವು. ಅಪ್ಪ ತಮ್ಮ ತೂತುಗಳ ಮುಚ್ಚಿಕೊಳ್ಳಲೇ ಅಷ್ಟೆಲ್ಲ ಆದರ್ಶ–ಆಧ್ಯಾತ್ಮಗಳ ಮಾತನಾಡುತ್ತಿದ್ದರೇನೋ. ದಿನದ ಪೂಜೆಯ ಅರ್ಧ ತಾಸು ಹೆಚ್ಚೇ ಮಾಡಿದವರು. ಅಮ್ಮ ದೇವರ ಮುಂದೆ ಕೈ ಮುಗಿದದ್ದು ಕೇವಲ ಅಭ್ಯಾಸ ಬಲದಿಂದ. ಅಮ್ಮ ಬೇಡುವುದ ಬಿಟ್ಟಿದ್ದರು. ಬೇಡದೆ ಬಂದ ಎಲ್ಲರನ್ನೂ ಸ್ವೀಕರಿಸಿದ್ದರು. 'ಒಳ್ಳೆ ಹಳ್ಳಿ ಗಮಾರಳು ಸಿಕ್ಕಿದಳು, ಎಂಥಾ ವಿದ್ಯಾವಂತರ ಮನೆ ಹೆಣ್ಣುಗಳು ಸಿಗ್ತಾ ಇದ್ವು....' ಎಪ್ಪತ್ತರ ಅಂಚಿನಲ್ಲೂ ಗೊಣಗುತ್ತಿದ್ದ ಅಪ್ಪನ ಆಕ್ರೋಶವನ್ನು,

ಬಹಳಷ್ಟು ದಿನ ಬೌದ್ಧಿಕ ಅಂತರದ ದುರಂತವಾಗಿ ಕಂಡಿದ್ದೆ. ಅಮ್ಮನ ನೆನಪಿನಂಗಳದಲ್ಲಿ ಬಿಡಿಸಿಟ್ಟ ಅಪ್ಪನ ಚಿತ್ತಾರ ನಾ ಕಂಡ ಅಪ್ಪನದಾಗಿರಲಿಲ್ಲ, ಏಳು ಮಕ್ಕಳ ಪ್ರೀತಿಯಿಂದಲೇ ಬೆಳೆಸಿ, ಓದಿಸಿ ತಂದೆಯ ಕರ್ತವ್ಯ ನಿಭಾಯಿಸಿದ ಅಪ್ಪನ—ಗಂಡಾದ, ಗಂಡನಾದ ಆ ಮುಖದ ಪರಿಚಯವೇ ನನಗಿರಲಿಲ್ಲ.

ಮೂರು ತಿಂಗಳು ಜೊತೆಗಿದ್ದ ಅಮ್ಮ ಬೊಂಬಾಯಿ ನಗರವನ್ನಿಷ್ಟು ಕಣ್ಣು ಕಣ್ಣು ಬಿಟ್ಟು ನೋಡಿದಳು. ಡೊಂಬಿವಲ—ವಿ ಟಿ.ಗಳ ನಡುವೆ, ಬೆಳಗ್ಗೆ—ಸಂಜೆ ದುಡಿಯಲು ಹೋಗಿ—ಬರುವ ಹೆಂಗಳೆಯರ ನೋಡಿದಳು. ವೇಗದ ಬದುಕಿಗಂಟಿದ, ನೆಲಬಿಟ್ಟು ಮುಗಿಲ ಚುಂಬಿಗಳ ಜನರನ್ನು ನೋಡಿದಳು. ನನ್ನ ಸಂಸಾರವನ್ನು ನೋಡಿದಳು. ರವಿ ಎಲ್ಲಕ್ಕೂ ನನ್ನ ಅಭಿಪ್ರಾಯ ಕೇಳುತ್ತಿದ್ದ, ಯಾವುದಕ್ಕೂ ಜೊತೆಗೆ ಕುಳಿತು ಚರ್ಚಿಸುತ್ತಿದ್ದ. ಅಮ್ಮನ ಕಣ್ಣುಗಳಲ್ಲಿ ಒಂದಷ್ಟು ತೃಪ್ತಿಯಿತ್ತು.

ಅಮ್ಮ—ಅಪ್ಪ ಇಬ್ಬರೂ ಕಾಡು ಹಳ್ಳಿಗಳಿಂದ ಬಂದವರಾದರೂ, ಅಪ್ಪ ಓದಿದ್ದರು, ಬೆಂಗಳೂರು ಮಹಾನಗರಿಯಲ್ಲಿ ಉದ್ಯೋಗ ಹಿಡಿದಿದ್ದರು. ಕಾಡುಹಳ್ಳಿಯ ಕಲ್ಲು ನೆಲದಲ್ಲಿ, ಹರಿದೊಂದು ನಾಲೆಯೂ ಬತ್ತಿದ ಬಡತನದ ತಮ್ಮ ಹಿನ್ನೆಲೆಯಾಚೆಗೆ ಜಿಗಿದಿದ್ದರು. ಅನಕ್ಷರಸ್ಥ ರೈತರಿಗೆ ಗೊತ್ತಾದ ಅಕ್ಕ—ತಂಗಿಯರ ನಡುವೆ ಅಮ್ಮ ವಿದ್ಯಾವಂತರ ಕೈ ಹಿಡಿದು, ಪೇಟೆ ಸೇರಿದ ಅದೃಷ್ಟದ ಕತೆ ದೊಡ್ಡ ಸುದ್ದಿಯಾಗಿತ್ತು. ಹೊಟ್ಟೆ—ಬಟ್ಟೆಯದೇ ಚಿಂತೆಯಾದ ಅಕ್ಕ—ತಂಗಿಯರಿಗೆ ತಿಂಗಳ ಪಗಾರದ ನಿಶ್ಚಿಂತೆ ಅದ್ಭುತವಾಗಿ ಕಂಡಿರಬೇಕು. ಬಹುಶಃ ಅಮ್ಮನೂ ತನ್ನ ಅಂಥಾ ಅದೃಷ್ಟದ ಬಗ್ಗೆ ನಲಿದಿರಬಹುದು. ಬದುಕಿನ ಈ ಅಂಚಿನಲ್ಲಿ ತಟ್ಟನೆ ಅಮ್ಮನಿಗೆ ದಾಂಪತ್ಯದ ಸಾಂಗತ್ಯದ ಹೊಸ ಆಯಾಮಗಳು ಕಂಡಿದ್ದವು, ಮಗಳು—ಅಳಿಯನ ಸಂಸಾರದಲ್ಲಿ.

ಅಮ್ಮನ ಬದುಕಲ್ಲಿ ಬಹಳಷ್ಟು ಘಟಿಸಿತ್ತು, ಅವಳ ಪಟ್ಟಣದ ಬದುಕಿನ ನಡುವೆಯೇ ಹಳ್ಳಿಯ ನೆಲದ ನೆನಪುಗಳಿದ್ದವು. ಯಾವಾಗಲೋ ಒಮ್ಮೆ ಅಪ್ಪ ಹೊಲ—ಗದ್ದೆಯ ಪಾಲು ಕೇಳುವ ಮೊದಲು ಕಂಡ ನಮ್ಮ ಹೊಲದ ನೆನಪು ನನಗೂ ಒಂದಿಷ್ಟಿತ್ತು. ದಪ್ಪ ದಪ್ಪ ಕಲ್ಲುಗಳ, ನೇಸರು ಕುದಿದ ಬಯಲು ಸೀಮೆ, ಬೋಳಾಗಿ, ಬೀಳು—ಬೀಳಾಗಿ. ಒಮ್ಮೆ ಹರಿದಿತ್ತೆನ್ನಲಾದ ಬತ್ತಿದ ಸಣ್ಣ ಹೊಳೆಯಾಚಿನ ನಮ್ಮ ಹೊಲ. ಕಳ್ಳಿ ಗಿಡ—ಜಾಲಿ ಗಿಡಗಳು—ಅರೆ ಒಣಗಿದ ಹೊಂಗೆ ಸಂಬು. ಇಷ್ಟೆ ಹಸಿರು. ಆ ನೆಲದಲ್ಲಿ ಸದಾ ಬೆಳೆಯುತ್ತಿದ್ದುದು ನಾತದ ಹೊಗೆಸೊಪ್ಪು.

ಪಟ್ಟಣ ಸೇರಿ, ಓದಿ ಉದ್ಯೋಗವಿಡಿದ ಅಪ್ಪ ಹಳ್ಳಿಯ ಹೊಲದ ಪಾಲಿಗೆ ನಿಂತದ್ದು, ಅದೇ ಬಯಲು ಹಜಾರದಲ್ಲಿ ತಾತನ ಗೂರಲು ಕೆಮ್ಮಿನ ನಡುವೆ ಅಣ್ಣ—ತಮ್ಮಂದಿರು ಪಾಲಾದದ್ದು. ಯಾರೋ ತೋಟ ಮಾಡಿ ಲಕ್ಷಾಧಿಪತಿಯಾದ ಕತೆ ಕೇಳಿ ಅಪ್ಪನೂ ಇಚ್ಛಾ ನಿವೃತ್ತಿ ತೆಗೆದುಕೊಂಡು, ಮಳೆ—ನಾಲೆ—ನೀರಾವರಿ ಕಾಣದ ಕಲ್ಲು ನೆಲ ನೆಲದಲ್ಲಿ ಕಲ್ಪವೃಕ್ಷ ನೆಟ್ಟು ಭಾವಿ ತೋಡಿದ್ದ, ತೋಡಿದಷ್ಟು ನೀರು ಕಾಣದೆ ಬಂಜರು ನೆಲದಲ್ಲಿ ಕೈಗೆ ಬಂದಿದ್ದ ಹಣವ ಜೊತೆ ಅಮ್ಮನ ಒಡವೆಗಳೂ ಕರಗಿದ್ದವು. 'ಇನ್ನೊಂದಿಷ್ಟು ತೋಡಿದರೆ ಖಂಡಿತಾ ನೀರು ಬಂದೇ ಬಿಡುತ್ತೆ....' ಎಂಬ ಹುರುಪಿನಲ್ಲಿ ಅಮ್ಮನ ಕೊರಳು, ಕಿವಿ, ಕೈಗಳು ಬೋಳಾದವು. 'ನಾಳೆ ಹೆಣ್ಣುಮಕ್ಕಳ ಮೇಲೆ ಹಾಕೋಕೆ ಒಂದಿಷ್ಟು ಚಿನ್ನ ಇಲ್ಲ.... ಇದನ್ನಂತೂ ಕೊಡೋಲ್ಲ' ಅನ್ನೋ ಅಮ್ಮನ ಸಣ್ಣ ಪ್ರತಿಭಟನೆಗೆ, 'ಎದ್ದು ಎದೆಗೊದ್ದು ಕಿತ್ಕೊಂಡು ಹೋಗ್ತೀನಿ ನೋಡು' ಎಂದು ಅಬ್ಬರಿಸಿದ ಅಪ್ಪನ ಆಕ್ರೋಶದಲ್ಲಿ ಈ ಎಲ್ಲಾ ಡಿಗ್ರಿ—ಪೇಟೆ ವಾಸದಲ್ಲೂ ಕಿಂಚಿತ್ತೂ ಮರೆಯಾಗದ ಒಡ್ಡುತನ—ಅನಾಗರೀಕತೆ ಕಂಡಿತ್ತು. ಸೋತ ಅಮ್ಮ—'ಅವರು ಮಾಡಿಸಿದ್ದು ಕೊಂಡೊಯ್ಯಲಿ ಬಿಡು....' ಅಂದ ಅಮ್ಮ ಮತ್ತೆಂದೂ ಮಕ್ಕಳು ಮಾಡಿಸಿ ಕೊಟ್ಟರೂ ಚಿನ್ನ ಹಾಕಲಿಲ್ಲ. ತೋಟ ಮಣ್ಣು ಮುಕ್ಕಿದ ಮೇಲೆ ಅಪ್ಪ ಅದೆಂಥದ್ದೋ ಬಿಸಿನೆಸ್ ಶುರು ಮಾಡ್ತೀನಿ ಅಂತಾ ದಾವಣಗೆರೆಗೆ ಹೋದರು. ಕೈಯಲ್ಲಿದ್ದ ಅಷ್ಟೂ ಹಣ ಖಾಲಿಯಾದ ಮೇಲೆ, ಆಧ್ಯಾತ್ಮ ಹಿಡಿದು ಕುಳಿತರು. ಎಪ್ಪತ್ತು ದಾಟಿದರೂ ಅಪ್ಪ ಒಂದು ಮನೆ ಮಾಡಿರಲಿಲ್ಲ. ಸಂಬಳ ಬರುತ್ತಿದ್ದ ಕಾಲದಲ್ಲಿ ದೊಡ್ಡ ಮನೆಯನ್ನೇ ಬಾಡಿಗೆಗಿಡಿದ ಅಪ್ಪ, ಇದೀಗ ಪೆನ್ಷನ್ ಮೇಲೆ ಕಾಲೆಳೆಯುತ್ತಾ ಚಾಮರಾಜಪೇಟೆಯ ಗಲ್ಲಿಯೊಂದರಲ್ಲಿ ಹಳೇ ಮನೆ ಹಿಡಿದಿದ್ದರು.

ಮಕ್ಕಳು ಅಳಿಯ ಬಂದರೆ ಅಮ್ಮನಿಗೆ ಎಲ್ಲಿಲ್ಲದ ಸಂಕೋಚ. ಐನೂರು–ಸಾವಿರಕ್ಕೆ ಸೈಟು ಸಿಗುತ್ತಿದ್ದ ದಿನಗಳ ನೆನೆಯುವರು. 'ಒಂದು ನೆಲ ಹಿಡೀರಿ, ಎಂಥದ್ದೋ ನಮ್ಮದು ಅಂತಾ ಮನೆ' ಅಂದ ಅಮ್ಮನ ಪುತ್ರಿ ಮಾತಿಗೂ 'ಹೂಂ, ನಿಮ್ಮಪ್ಪನ ಗಂಟಿದೆ ನೋಡು. ಈಗೆಲ್ಲಿ ಸಾಧ್ಯ, ಕೈಯಲ್ಲಿ ನಾಲ್ಕು ಕಾಸು ಕೂಡೋ ತನಕ ಮಾತೆತ್ತ ಬೇಡ. ಹಳ್ಳಿಮುಕ್ಕಾ, ನಿಂಗೇನು ಗೊತ್ತಾಗುತ್ತೆ....' ಅಮ್ಮನ ಅನಕ್ಷರಸ್ಥ ಸ್ಥಿತಿಯತ್ತ ಅಪ್ಪನ ಮೂದಲಿಕೆ ಮಾತು ಹೊರಬರಲಿಲ್ಲ. ಅನಿವಾರ್ಯ ವೈವಾಹಿಕ ಬಂಧನದಲ್ಲಿ, ಸಂಪ್ರದಾಯದ ಹಗ್ಗದಲ್ಲಿ, ಏಳು ಮಕ್ಕಳ ಹೆತ್ತು ಬಿಗಿದುಕೊಂಡ ಅವರ ಸಂಬಂಧ ವಿಚಿತ್ರವಿತ್ತು. ತನ್ನ ಮಾತಿಗೆಂದೂ ಮೂರು ಕಾಸಿನ ಬೆಲೆ ಇಲ್ಲದ ಅಮ್ಮ 'ನಂದೇನು, ಎದೆ ಸೀಳಿದರೂ ಮೂರಕ್ಷರ ಕಾಣದೋಳು. ನನ್ನ ಮಾತು ಯಾರು ಕೇಳುತ್ತಾರೆ' ಎಂದು ಸಮಾಧಾನಗೊಂಡಿದ್ದಳು. ಅಮ್ಮನ ಬದುಕಿನ ತುಂಬಾ ಆಯ್ಕೆಯಿಲ್ಲದ ನೋವುಗಳಿದ್ದವು. ಆಕೆಯ ಬದುಕು ಇತರರಿಂದ–ಇತರರಿಗಾಗಿಯೇ ನಡೆದು ಮುಗಿದಿತ್ತು. ನನ್ನ ಬದುಕಿನ ಲಗಾಮು ಹಿಡಿದು ಕುಳಿತ ನಾನು ಅಮ್ಮನನ್ನು ಹೊಸದಾಗಿ ಎಂಬಂತೆ ನೋಡಿದ್ದೆ.

ನನ್ನ ಕೈಯಲ್ಲಿ ಆಯ್ಕೆ ಇತ್ತು. ನನ್ನ ಬದುಕಿನ ದಿಕ್ಕನ್ನು ಬಯಸಿದರೆ ಬದಲಿಸಬಲ್ಲ ಸಾಮರ್ಥ್ಯವಿತ್ತು. ಎಲ್ಲಕ್ಕೂ ನನ್ನ ಸಲಹೆ ಕೇಳುವ ರವಿ ಮತ್ತು ನನ್ನ ನಡುವೆ ಸಂಬಂಧ ಸರಳವಿತ್ತು, ನೇರವಿತ್ತು, ಸಮಾನವಿತ್ತು. ನಮ್ಮ ನಡುವೆ ಆರ್ಥಿಕ ಅವಲಂಬನೆಯ ಅನಿವಾರ್ಯವಿರಲಿಲ್ಲ, ಸ್ನೇಹವಿತ್ತು, ಸಾಂಗತ್ಯವಿತ್ತು. ನಮ್ಮ ಬದುಕಿನ ನಿರ್ಧಾರಗಳು, ನನ್ನದೂ ಆಗಿತ್ತು. ಆ ಯಾವ ಹಕ್ಕುಗಳ ಕಾಣದ ಅಮ್ಮನ ಕಣ್ಣಂಚಿನಲ್ಲಿ ಮೂರು–ಮುಕ್ಕಾಲು ದಶಕಗಳ ಮೌನ ಕಂಬನಿ. ಅಮ್ಮನ ಕಣ್ಣಲ್ಲಿ ಕಲಕಿದ ನಿನ್ನೆಗಳ ಚಿತ್ರವಿತ್ತು. ಬದುಕಲ್ಲಿ ನನ್ನ ಪಾಲಿಗೆ ಒಂದಿಷ್ಟು ಪಕ್ಷಪಾತಿಯಾಗಿತ್ತು. ಪಟ್ಟಣದಲ್ಲಿ ಹುಟ್ಟಿ ಬೆಳೆದೆ, ಓದಿದ್ದೆ, ಬದುಕು ಕೊಟ್ಟ ಅವಕಾಶಗಳ ಆತುರದಿಂದ ಕಸಿದುಕೊಂಡಿದ್ದೆ. ಅಮ್ಮನ ಬದುಕಿನಲ್ಲಿ ಅವಕಾಶಗಳಿರಲಿಲ್ಲ, ಉದ್ದುದ್ದ ನಿಂತ ಅವಲಂಬನೆಯ ಗಾಢ ನೆರಳು. ಆದರೂ ಅಮ್ಮ ಸಿನಿಕಳಾಗಿರಲಿಲ್ಲ. ಅತ್ತು ಹಗುರಾಗುವವಳು ಮತ್ತೆ ನಗುವವಳು 'ಬದುಕು ನಿನ್ನಲ್ಲೆಂಥಾ ಮುನಿಸು' ಎಂಬಂತೆ.

ಅಮ್ಮ ಹೊರಟಿದ್ದಳು, ಪ್ರವಾಸಿಯಂತೆ ಕಂಡು ಖುಷಿ ಪಟ್ಟಿದ್ದಳು ಬೊಂಬಾಯಿ ಮಹಾನಗರವನ್ನು, ಮಗಳ ಜೀವನವನ್ನು. ಹೊರಟ ಅಮ್ಮನ ಕೈ ಜಗ್ಗಿ— 'ಅಜ್ಜಿ ಯಾವಾಗ ಬರ್ತೀಯಾ ?' ಎಂದು ಕುಣಿದ ಶಾಂತಿ, ಕಮಲಾರ ಕೆನ್ನೆ ಚಿವುಟುತ್ತಾ— 'ನೀವು ದೊಡ್ಡ ಡಾಕ್ಟರೋ, ಇಂಜಿನೀರೋ ಆದಾಗ....' ಅಂದ ಅಮ್ಮ ಮತ್ತೆ 'ಚೆನ್ನಾಗಿ ಓದ್ರಮ್ಮ, ಹೆಣ್ಣು ಮಕ್ಕಳು ವಿದ್ಯಾವಂತರಾದ್ರೇ ಅವರಿಗೂ ಒಂದು ಬೆಲೆ ಕಣ್ರೆ....' ಅಮ್ಮನ ಬದುಕಿನುದ್ದದ ಅನುಭವದ ಒಟ್ಟರ್ಥ ಆ ಎರಡು ವಾಕ್ಯಗಳಲ್ಲಿತ್ತು.

(ಬೆಂಗಳೂರು ಆಕಾಶವಾಣಿಯಲ್ಲಿ ಪ್ರಸಾರಿತ)

ವೈಭವೀಕರಿಸಲ್ಪಟ್ಟ ತಾಯ್ತನವು ಅದರಲ್ಲೂ ಭಾರತದಂಥ ಊಳಿಗಮಾನ್ಯ ವ್ಯವಸ್ಥೆಗಳಲ್ಲಿ (ಇಲ್ಲಿ ಹೆಂಗಸಿಗೆ ರೂಢನಾಮವೇ 'ಅಮ್ಮ' ಎಂದಿದೆ!) ಪುರುಷನಿಂದ ಹೊರಿಸಲ್ಪಟ್ಟ ಕೇವಲ ತಾಯ್ತನದ ಪ್ರತಿಮೆಯನ್ನು ಮತ್ತಷ್ಟು ಬಲವಾಗಿ ಬೇರೂರಿಸುವ ಮತ್ತೆ ತನ್ನ ಮನೆಯ ನಾಲ್ಕು ಗೋಡೆಗಳನ್ನು ಮೀರುವಂಥ ಯಾವ ವ್ಯಕ್ತಿತ್ವವನ್ನೂ ಕೊಡದಿರುವ ಕಣ್ಣಿಗೆ ಮಣ್ಣೆರಚುವ ತಂತ್ರವಾಗಿದೆ. ಯಾವ ಸಮಾಜಗಳು ಹೀಗೆ ತಾಯ್ತನವನ್ನು ದೈವೀಕರಿಸಿ ಆರಾಧಿಸುತ್ತವೆಯೋ ಅಂಥ ಸಮಾಜಗಳೇ ತಾಯಿಂದಿರು ಹೆತ್ತಾರು ಮಕ್ಕಳನ್ನು ಕೊಲ್ಲುವುದನ್ನೂ ಸಹಿಸುತ್ತವೆ. ತಾಯ್ತನ ವಾಸ್ತವಿಕವಾಗಿ ಎಂಥ ಕ್ರೂರ ತಿರಸ್ಕಾರಕ್ಕೆ ಗುರಿಯಾಗಿದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

—ಮೈಥಿಲಿ ಶಿವರಾಮನ್

ವೇಶ್ಯೆಯರಾಗಿಲ್ಲದಿದ್ದರೆ ಪ್ರಚಾರೋದ್ಯಮಗಳಿಗೆ ಮಾಡೆಲ್‌ಗಳಾಗಿ ಹೆಂಗಸರು ತಮ್ಮ ದೇಹಗಳನ್ನು— ಮನುಷ್ಯರು ತಮ್ಮ ಶ್ರಮಿಕ ಶಕ್ತಿಯನ್ನು ಮಾರುವಂತೆ —ಅಕ್ಷರಶಃ ಮಾರುತ್ತಾರೆ. ಒಬ್ಬ ಕೆಲಸಗಾರ ತಾನು ಉತ್ಪಾದಿಸಿದ ವಸ್ತುವಿನಿಂದ ದೂರವಾಗುವಂತೆ ಒಬ್ಬ ಹೆಂಗಸು ಮಾರಾಟಕ್ಕಿಟ್ಟ ತನ್ನ ದೇಹದಿಂದ ದೂರವಾಗುತ್ತಾಳೆ.

—ಜೂಲಿಯಟ್ ಮಿಷೆಲ್



ವ್ಯಕ್ತಿವಿಶೇಷ...

ಅಫ್ರಾಬೆನ್ : ಹದಿನೇಳನೇ ಶತಮಾನದ ಅಸಾಧಾರಣ ಬುದ್ಧಿಜೀವಿ

ಸ್ತ್ರೀವಾದಿ ಚಿಂತನೆಯ ಮೊದಲಗಿತ್ತಿಯರನ್ನು ಪ್ರಸ್ತಾಪಿಸುವ ಹೊತ್ತಿನಲ್ಲಿ ಸಾಮಾನ್ಯವಾಗಿ ಮೇರಿ ವೊಲ್‌ಸ್ಟನ್ ಕ್ರಾಫ್ಟ್ ಅವರಿಂದ ಪ್ರಾರಂಭಿಸುವ ರೂಢಿಯಿದೆ. ಆದರೆ ಡೇಲ್‌ಸ್ಪೆಂಡರ್ ಅವರ ಮಹತ್ವದ ಸಂಶೋಧನಾ ಗ್ರಂಥ "Women of Ideas And What Men Have Done to Them" ಎಂಬುದರಲ್ಲಿ ಕೊನೆಯ ಪಕ್ಷ ನಲವತ್ತು ಮಹಿಳೆಯರು ಮೇರಿಯವರಿಗಿಂತ ಹಿಂದೆಯೇ ಸ್ತ್ರೀಯರ ಹಕ್ಕುಗಳಿಗಾಗಿ ಧ್ವನಿಯೆತ್ತಿದ್ದರು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅವರು ಚಿತ್ರಿಸಿರುವ 'ಅಫ್ರಾಬೆನ್'ಳ ಜೀವನ—ಸಾಧನೆಗಳ ಕಿರುಚಿತ್ರ ಇಲ್ಲಿದೆ—ಸಂ.

ಹದಿನೇಳನೆಯ ಶತಮಾನದ ಇಂಗ್ಲೆಂಡಿನಲ್ಲಿ ಸಿರಿವಂತಿಕೆಯಾಗಲಿ, ಸಾಮಾಜಿಕ ಪ್ರತಿಷ್ಠೆಯಾಗಲಿ ಇಲ್ಲದೆ ಹುಟ್ಟಿದ ಅಫ್ರಾಬೆನ್ **(Afra Behn)** ಬದುಕು ಯಾವುದೇ ಕಾಲದಲ್ಲೂ ಅಸಾಧಾರಣವೆನ್ನುವಂತಿದೆ. ಆಕೆ ಬದುಕಿನ ಅನಂತ ಯಾಮಗಳಿಗೆ ತನ್ನನ್ನು ಪೂರ್ಣವಾಗಿ ತೆರೆದುಕೊಂಡಿದ್ದ ಬಗೆಯನ್ನು ಗಮನಿಸಿದರೆ ಆ ಕಾಲದ ಮಹಿಳೆಯೊಬ್ಬಳು ಹಾಗಿರಲು ಸಾಧ್ಯ ಎಂಬುದೂ ವಿಸ್ಮಯಕರವಾಗಿ ತೋರುತ್ತದೆ.

ಅಫ್ರಾಬೆನ್ ಒಬ್ಬ ಸಾಹಸಯಾತ್ರಿ. ದೀರ್ಘವಾದ, ಅಪಾಯಕರವಾದ ಸಮುದ್ರಯಾನ ನಡೆಸಿ ವೆಸ್ಟ್ ಇಂಡೀಸ್‌ಗೆ ಹೋಗಿ ಅಲ್ಲಿ ಜೀತದಾಳುಗಳ ಆಂದೋಲನದಲ್ಲಿ ಪಾಲ್ಗೊಂಡಿದ್ದಾಕೆ. ಯುರೋಪಿನ ಜನರನ್ನೇ ಕಂಡಿರದಂಥ ಇಂಡಿಯನ್ ಬುಡಕಟ್ಟಿನವರನ್ನು ಸಂದರ್ಶಿಸಿದ್ದಾಕೆ. ಎರಡನೇ ಚಾರ್ಲ್ಸ್ ದೊರೆಯ ಪರವಾಗಿ ಡಚ್ಚರ ವಿರುದ್ಧವಾಗಿ ಬೇಹುಗಾರಿಕೆಯ ಕಾರ್ಯ ನಡೆಸಿದವಳು ಆ ರಾಜನ ಸೇವೆಯ ಅವಧಿಯಲ್ಲಿ ಒದಗಿದ ಹೆಚ್ಚಿನ ಖರ್ಚಿಗಾಗಿ ಸಾಲಗಾರಳೆಂದು ಸೆರೆವಾಸ ಅನುಭವಿಸಿದಾಕೆ. ಮಹಿಳೆಯರ ಶಿಕ್ಷಣದ ಹಕ್ಕಿಗಾಗಿ, ಬಯಸಿದವರನ್ನು ಮದುವೆಯಾಗುವ ಹಕ್ಕಿಗಾಗಿ ಅಥವಾ ಸ್ವಯಿಚ್ಛೆಯಿಂದ ಅವಿವಾಹಿತೆಯರಾಗಿ ಉಳಿಯುವ ಹಕ್ಕಿಗಾಗಿ ಪ್ರಬಲವಾಗಿ ವಾದಹೂಡಿ ಸ್ವಸಮರ್ಥನೆ ಮಾಡಿಕೊಂಡ ದಿಟ್ಟ ಸ್ತ್ರೀವಾದಿ ಪುರುಷರ ಲೈಂಗಿಕ ಸಮಾನತೆಯನ್ನು ಪ್ರತಿಪಾದಿಸಿದ್ದ ಅಫ್ರಾಬೆನ್ ವಿಲ್ಸ್ ಕಾಫೀ ಹೌಸ್‌ನಲ್ಲಿ ಮತ್ತು ಡ್ರುರಿಯರಿ ಲೇನ್ ಥಿಯೇಟರ್‌ನ ರಂಗದ ಮೇಲೆ ರಾಜತ್ವದ ಪರವಹಿಸಿ ವಾದ ಹೂಡಿದ ರಾಜಕೀಯ ಕಾರ್ಯಕರ್ತೆ. ಒರೂಂಕೋ **(Oroonko)** ಎಂಬ ಕಾದಂಬರಿಯಲ್ಲಿ ಜೀತ ಪದ್ಧತಿಯ ಭೀಕರ ಪರಿಣಾಮಗಳನ್ನು ಚಿತ್ರಿಸಿ, ಜೀತ ಪದ್ಧತಿಯ ಉಚ್ಚಾಟನೆಗಾಗಿ ವಾದ ಹೂಡಿದಾಕೆ. ಒಬ್ಬ ಲೇಖಕಿಯಾಗಿ ಸಮಾಜ ತನ್ನ ದನಿಯನ್ನು ಕೇಳಲೇಬೇಕೆಂದು ವಾದಿಸಿದಾಕೆ. ರೆಸ್ಟೋರೇಷನ್ ಯುಗದ ಇಂಗ್ಲೆಂಡಿನಲ್ಲಿ ಪುರುಷರೇ ಸಾಹಿತ್ಯ ಲೋಕದ ಒಡೆಯರಾಗಿ ವಿಜೃಂಭಿಸುತ್ತಿದ್ದಾಗ ಅವರ ಮಾತ್ಸರ್ಯದ ನಿರಂತರ ಬಿರುಟೀಕೆಗಳ ಆಕ್ರಮಣದೆದುರು ತಲೆಬಾಗದ ಈಕೆ ಹದಿನೇಳು ನಾಟಕಗಳನ್ನು, ಹದಿಮೂರು ಕಾದಂಬರಿಗಳನ್ನು, ಹಲವಾರು ಕವನ ಸಂಕಲನಗಳು ಮತ್ತು ಅನುವಾದಗಳನ್ನು ಪ್ರಕಟಿಸಿದ ಅಪ್ರತಿಮ ಬರಹಗಾರ್ತಿ. ಈಕೆಯ ಗೆಳೆಯ ಬರಹಗಾರ ಜಾನ್ ಡ್ರೈಡನ್‌ನ ಜೊತೆಯಲ್ಲಿ ವೆಸ್ಟ್ ಮಿನಿಸ್ಟರ್ ಆಬಿಯಲ್ಲಿ ಈಕೆಯದೂ ಸಮಾಧಿಯಿದೆ. ಆದರೆ ಡ್ರೈಡನ್ ಮಹಾಕವಿಗಳ ಪರಂಪರೆಯನ್ನು ಪ್ರತಿನಿಧಿಸುವ ಕವಿಗಳಿಗೇ ಮೀಸಲಾದ ಸ್ಥಳದಲ್ಲಿ ಸಮಾಧಿ ಹೊಂದಿದ್ದರೆ ಅಫ್ರಾಬೆನ್ ಆ ಸ್ಥಳದ ಹೊರಗಡೆ ಮೆಟ್ಟಿಲುಗಳ ಬಳಿ ಹುಗಿಯಲ್ಪಟ್ಟಿದ್ದು, ಅವಳ ಸಮಾಧಿ ಶಿಲೆ ಮುನ್ನೂರು ವರ್ಷಗಳಿಂದ ಅಸಂಖ್ಯಾತ ನಿರ್ಲಕ್ಷ್ಯದ ಕಾಲುಗಳ ತುಳಿತದಿಂದ ಸವೆದಿದೆ.

ಈ ಅಪರೂಪದ ಸಾಧನೆ ಮಾಡಿದ ಮಹಿಳೆಯನ್ನು ಇತಿಹಾಸವು ಎಷ್ಟು ವ್ಯವಸ್ಥಿತವಾಗಿ ಇಲ್ಲವಾಗಿಸಿತೆಂದರೆ 1953–54ರಲ್ಲಿ ಎ. ಪರ್ವೀಸ್ ಎಂಬಾತ ಅಫ್ರಾಬೆನ್ ಹುಟ್ಟಿದ ನಾಲ್ಕೇ ದಿನಕ್ಕೆ ಸತ್ತು ಹೋಗಿದ್ದಳೆಂದೂ,

ಆಕೆಯ ಸಾಧನಗಳೆಂದು ಹೇಳುತ್ತಿರುವುದೆಲ್ಲ ಕಟ್ಟುಕಥೆಗಳೆಂದೂ ಸಾಬೀತು ಮಾಡಲೆತ್ನಿಸಿದ್ದನು.

ಮಹಿಳೆಯು ತನ್ನ ಯೋಗ್ಯತೆಯನ್ನು ಪ್ರಾಯೋಗಿಕವಾಗಿ ತೋರಿಸಿಕೊಟ್ಟಾಗಲೂ ಆಕೆಯ ಕ್ರಿಯಾಶೀಲ ಅಸ್ತಿತ್ವವನ್ನು ನಿರಾಕರಿಸುವ ಮೂಲಕ ಸೃಜನಶೀಲತೆ ಮತ್ತು ಬೌದ್ಧಿಕತೆಯ ಒಡೆತನವನ್ನು ತಮ್ಮಲ್ಲೇ ಉಳಿಸಿಕೊಳ್ಳಲು ಪುರುಷರು ಹೇಗೆ ಯತ್ನಿಸುತ್ತಾರೆಂಬುದಕ್ಕೆ ಅಫ್ರಾಬೆನ್ ಒಂದು ಜ್ವಲಂತ ಉದಾಹರಣೆಯಾಗಿದ್ದಾಳೆ. ಅವಳಿಗೆ ಶಿಕ್ಷಣದ ಅವಕಾಶ ನಿರಾಕರಿಸಲಾಗಿತ್ತು. ಸಾಹಿತ್ಯಕ್ಷೇತ್ರದ ಅಧಿಕಾರಸ್ಥರ ವಲಯಗಳಿಂದ ಅವಳನ್ನು ದೂರವಿಟ್ಟರು, ಪ್ರಾಯೋಗಿಕವಾಗಿ ಅವಳ ನಾಟಕಗಳು ತುಂಬ ಯಶಸ್ವಿಯಾಗಿದ್ದರೂ ಆಕೆಗೆ ಯಾವ ಸೃಜನಶೀಲ ಶಕ್ತಿ ಸಾಮರ್ಥ್ಯಗಳು ಇಲ್ಲವೆಂದೇ ವಾದಿಸಿದರು. ಅವಳು ಬರೆದದ್ದನ್ನು ಅವಳ ರಚನೆಗಳೇ ಅಲ್ಲವೆಂದೂ ಸೂಚಿಸಿದರು. ಅವಳದ್ದೇ ಎಂದು ಒಪ್ಪಿದಾಗಲೂ ಅವು ಮೌಲಿಕವಲ್ಲ, ಆಕೆಯ ಜನಪ್ರಿಯತೆಯೇ ಕಲಾತ್ಮಕತೆಯ ಮಾನದಂಡವಲ್ಲ ಎಂಬ ವಾದ ಹೂಡಿದರು.

ಈ ಪ್ರಬಲ ವಿರೋಧಕ್ಕೆ ಅಫ್ರಾಬೆನ್‌ಳ ಯಶಸ್ಸೊಂದೇ ಮುಖ್ಯ ಕಾರಣವಲ್ಲ. ಆಕೆ ತನ್ನ ಕೃತಿಗಳಲ್ಲಿ ಪುರುಷಾಧಿಕಾರವನ್ನು ಮತ್ತೆ ಮತ್ತೆ ವಸ್ತುಗಳಾಗಿಸಿಕೊಳ್ಳುತ್ತಿದ್ದುದು ಅವರನ್ನು ವಿಚಲಿತರನ್ನಾಗಿಸುತ್ತಿತ್ತು. **'The forced Marriage or the jealous Bridegroom'** ಎಂಬ ನಾಟಕ (1670) ದಲ್ಲಿ ಪುರುಷಪ್ರಧಾನ ಜಗತ್ತಿನಲ್ಲಿ ಮಹಿಳೆಯರ 'ವಿಭಿನ್ನ' ಅನುಭವವನ್ನು ಸೂಚ್ಯವಾಗಿ, ವಾಚ್ಯವಾಗಿಯೂ ಚಿತ್ರಿಸಿದ್ದಾಳೆ. ತನ್ನ ಲಿಂಗಜಾತಿಯ ಬಗ್ಗೆ ಮಾತನಾಡುವ ಮತ್ತು ಪುರುಷರನ್ನು ಮಹಿಳೆಯ ಕಣ್ಣುಗಳಿಂದ ನೋಡುವ ಈ 'ಉದ್ಧಟತನ'ವೇ ಪುರುಷರನ್ನು ಕೆರಳಿಸುತ್ತಿತ್ತು. ಹೆಂಗಸರ ಯೋಗ್ಯತೆಯನ್ನು ಅವರ ಶಾರೀರಕ ಆಕರ್ಷಣೆಯ ಮೂಲಕ ಅಳೆಯುವ ಬಗೆಯನ್ನು ತನ್ನ ಅನೇಕ ಕೃತಿಗಳಲ್ಲಿ ಚರ್ಚೆಗೆ ಆಕೆ ಗುರಿಪಡಿಸಿದ್ದಾಳೆ. ಹೆಂಗಸರು-ಲೈಂಗಿಕ ವಸ್ತುಗಳು, ಪುರುಷರ ಮೌಲಿಕತೆಗಿಂತ ಭಿನ್ನವಾಗಿ, ಇವರ ಬೆಲೆ ವಯಸ್ಸಿನೊಂದಿಗೆ ಕುಗ್ಗುತ್ತದೆ, ಎಂಬ ಬಗ್ಗೆ ತೀವ್ರ ಅರಿವಿದ್ದ ಅಫ್ರಾ ಹೆಣ್ಣನ್ನು ಪದಾರ್ಥಗಳೊಂದಿಗೆ ಅಥವಾ ಇತರ ಹೆಣ್ಣುಗಳೊಂದಿಗೆ ವಿನಿಮಯ ಮಾಡಿಕೊಳ್ಳುವಂಥ ಆಚರಣೆಯ ವಿರುದ್ಧವಾಗಿ ಬರೆದಿದ್ದಾಳೆ. ಸ್ತ್ರೀ ಪುರುಷರಿಬ್ಬರಿಗೂ ಮಾನವೀಯ ಅಂಶಗಳು, ಲೈಂಗಿಕಾಪೇಕ್ಷೆ ಮುಂತಾದವು ಸಮಾನ ರೀತಿಯವೆಂದು ವಾದಿಸಿ ರಂಗದ ಮೇಲೆ ಪುರುಷರ ದೇಹದ ಬಯಕೆಗಳ ಅಭಿವ್ಯಕ್ತಿ ಸರಿ ಎನ್ನುವುದಾದರೆ, ಅಂಥ ಅಭಿವ್ಯಕ್ತಿ ಹೆಂಗಸಿನದಾದಾಗಲೂ ಅದು ಸರಿಯೇ ಎಂದಾಕೆ ಆಗ್ರಹಪಡಿಸಿದ್ದುಂಟು.

ಅಫ್ರಾಳ ಕೃತಿಗಳ ಸ್ತ್ರೀ ಪಾತ್ರಗಳು ಹಲವು ಸಲ ಪುರುಷ ಪ್ರಧಾನ ವ್ಯವಸ್ಥೆಯ ರೂಢಿಗತ ಪ್ರತೀಕಗಳನ್ನು ನಾಶಗೊಡುವುವಂತಿರುತ್ತವೆ. ಪ್ರಪಂಚದ ಬಗ್ಗೆ ಪುರುಷರ ದೃಷ್ಟಿಕೋನಕ್ಕೂ ಸ್ತ್ರೀಯರದಕ್ಕೂ ಅಂತರವಿರುವುದನ್ನು ಆ ಪಾತ್ರಗಳು ಬಯಲಿಗೆಳೆಯುತ್ತವೆ. ಅದಕ್ಕೊಂದು ಉದಾಹರಣೆ : ಅಫ್ರಾಳ ಕಾಲವನ್ನು ಲೈಂಗಿಕ ಸ್ವಚ್ಛಂದತೆ ಸ್ವಾತಂತ್ರ್ಯಗಳ ಕಾಲವಾಗಿತ್ತೆಂದು ತಿಳಿಯುವುದು ಸ್ತ್ರೀ-ಪುರುಷರಿಬ್ಬರಿಗೂ ಸಮಾನ ಲೈಂಗಿಕ ಸ್ವಾತಂತ್ರ್ಯ ನೀಡಲಾಗುತ್ತಿತ್ತೆಂಬುದೂ ಸಾಮಾನ್ಯ ಗ್ರಹಿಕೆಯಾಗಿತ್ತು. ಈ ನಂಬಿಕೆ ಕೇವಲ ಒಕ್ಕಣ್ಣ ನೋಟವೆಂದು ಹೇಳುವ ಅಫ್ರಾ ಪುರುಷರಿಗೆ ನಿಜವಾಗಿಯೂ ಹೆಚ್ಚಿನ ಲೈಂಗಿಕ ಸ್ವಾತಂತ್ರ್ಯ ಆಗ ದೊರೆತಿರಬಹುದು ಆದರೆ ಮಹಿಳೆಯರಿಗೆ ಅದರಿಂದ ಇನ್ನಷ್ಟು ಕಷ್ಟ, ಬವಣೆ ದಂಡನೆಗಳು ದೊರೆಯುತ್ತವೆಯೇ ವಿನಾ ಸ್ವಾತಂತ್ರ್ಯವಲ್ಲ ಎಂದು ತೋರಿಸಲೆತ್ನಿಸಿದಳು. ಹಲವು 'ಪುರುಷ-ಪುರಾಣ'ಗಳನ್ನೂ ಆಕೆ ಬಯಲು ಮಾಡಿದಳು. **'The Disappointment'** ಎಂಬ ಕವನವೊಂದರ ವಸ್ತು 'ನಿರ್ವೀರ್ಯತೆ'ಯಾಗಿದೆ. ಆದರೆ ಈ ವಸ್ತುವಿನ ಪ್ರತಿಪಾದನೆ ಖಂಡಿತವಾಗಿ ಪುರುಷರ ದೃಷ್ಟಿಕೋನದ್ದಲ್ಲ. ಪುರುಷನೊಬ್ಬ ಆ ವಸ್ತುವನ್ನು ಕುರಿತು ಬರೆಯಬಹುದಾದ ರೀತಿಯ ವ್ಯಾಖ್ಯಾನ, ಅನುಭವ ಚಿತ್ರಣಗಳು ಅಫ್ರಾಳ ಕವನದಲ್ಲಿಲ್ಲವೇ ಇಲ್ಲ.

ಅಫ್ರಾಬೆನ್ ಹೀಗೆ ಮಹಿಳೆಯ ಪರ್ಯಾಯ ದೃಷ್ಟಿಕೋನದ ಸ್ಥಾಪನೆಯಿಂದಷ್ಟೇ ತೃಪ್ತಳಾದವಳಲ್ಲ. ತನ್ನನ್ನು, ತನ್ನ ವಿಚಾರಗಳನ್ನು ಸುಮ್ಮನೆ ತಳ್ಳಿಹಾಕಬಯಸುವವರ ವಿರುದ್ಧ ಆಕೆ ಪ್ರಚಂಡ ಹೋರಾಟ ನಡೆಸಿದವಳು. ಇತರರ ಆಕ್ರಮಣಗಳನ್ನು ಆಕೆ ಎಂದೂ ವಿಧೇಯತೆ, ಅಧೀನತಾಭಾವ, ಅಥವಾ ಆತ್ಮಾವಹೇಳನದ ನೆಲೆಗಳಿಂದ ಸ್ವೀಕರಿಸಲಿಲ್ಲ. ಆಕೆಯ ಕೃತಿಗಳ ಮುನ್ನುಡಿಗಳು ಸದಾ ಹರಿತವಾದ ಪ್ರತ್ಯಾಕ್ರಮಣಗಳೇ ಆಗಿದ್ದವು. ಅವಳಿಗೆ ಗ್ರೀಕ್ ಮತ್ತು ಲ್ಯಾಟಿನ್‌ನ ಪರಿಚಯವಿಲ್ಲ, ಹಾಗಾಗಿ ಕ್ಲಾಸಿಕಲ್ ನಾಟಕ

ಪರಂಪರೆಯ ಆಯಾಮಗಳನ್ನು ಗ್ರಹಿಸಲಾರದ ಅಶಿಕ್ಷಿತಳೆಂದು ವಿಮರ್ಶಕರು ಆಪಾದಿಸಿದಾಗ 'ಪುರುಷರು ಮಹಿಳೆಯರಿಗೆ ವಿದ್ಯಾಭ್ಯಾಸವನ್ನು ನಿರಾಕರಿಸುತ್ತಾರೆ. ಹಾಗಾಗಿ ಗ್ರೀಕ್ ಮತ್ತು ಲ್ಯಾಟಿನ್‌ಗಳು ಒಂದು ಬಗೆಯ ರಹಸ್ಯಾತ್ಮಕ ಬೀಜಮಂತ್ರಗಳಾಗಿ, ಅವುಗಳ ಒಡೆತನವುಳ್ಳ ಪುರುಷರಷ್ಟೇ ಶ್ರೇಷ್ಠರೆಂದು ತಮ್ಮನ್ನು ಪ್ರತಿಪಾದಿಸಿಕೊಳ್ಳುವುದಕ್ಕೆ ಅನುಕೂಲವಲ್ಲವೆ' ಎಂದು ಅಫ್ರಾ ಬರೆದಳು. ಗ್ರೀಕ್ ಮತ್ತು ಲಾಟೀನುಗಳ ಅವಶ್ಯಕತೆಯನ್ನೇ ನಿರಾಕರಿಸುವ ಅಫ್ರಾ ಈ ಭಾಷೆಗಳ ಪರಿಚಯವೇ ಇಲ್ಲದ ಶೇಕ್ಸ್‌ಪಿಯರನ ನಾಟಕಗಳು, ಆ ಪಾಂಡಿತ್ಯ ಪಡೆದಿದ್ದ ಜಾನ್ಸನ್ನನ ನಾಟಕಗಳಿಗಿಂತ ಹೆಚ್ಚಿನ ಮಟ್ಟದಲ್ಲಿ ಜಗತ್ತಿನಲ್ಲೆಲ್ಲಾ ಯಶಸ್ಸು ಪಡೆದಿರುವುದನ್ನು ಉದಾಹರಿಸುತ್ತಾಳೆ. ಕ್ಲಾಸಿಕಲ್ ಶಿಕ್ಷಣದ ಮೂಲಕ ದೊರೆಯಬಹುದಾದ 'ಲಾಭ'ಕ್ಕೆ ತನ್ನನ್ನು ಟೀಕಿಸುತ್ತಿರುವ ವಿದ್ವಾಂಸರೇ ಮಾದರಿಗಳು ಎನ್ನುವಂತಿದ್ದರೆ ಗ್ರೀಕ್ ಮತ್ತು ಲಾಟೀನುಗಳನ್ನು ಕಲಿಯದ ಮಹಿಳೆಯರು ಏನೂ ವ್ಯಥೆಪಡಬೇಕಿಲ್ಲ ಎಂದಾಕೆ ವ್ಯಂಗ್ಯವಾಡುತ್ತಾಳೆ.

ಅವಳ ಅರ್ಹತೆಯನ್ನು ನಿರಾಕರಿಸುವ ತಂತ್ರವಾಗಿ ವಿಮರ್ಶಕರು ಆಕೆಯ ಮೇಲೆ ಕೃತಿಚೌರ್ಯದ ಆಪಾದನೆ ಹೊರೆಸುತ್ತಿದ್ದರು. ಎಷ್ಟೇ ಖಾರವಾಗಿ ಆಕೆ ಪ್ರತಿವಾದ ಹೂಡಿದರೂ ಕೆಲವು ಸಲ ಆಕೆಗೂ ನೋವಿನ ಹೊಡೆತದಿಂದ ಪಾರಾಗಲು ಸಾಧ್ಯವಾಗಿರಲಿಲ್ಲ. **'Adelazear'** ಎಂಬ ಕೃತಿಯು ಹೀಗೆ ವ್ಯಾಪಕವಾಗಿ ಕೃತಿಚೌರ್ಯದ ಆಪಾದನೆಯನ್ನು ಹೊರಬೇಕಾದಾಗ ತನ್ನ ಮತ್ತೊಂದು ಕೃತಿ **'The Rover'**ಗೆ ಬರೆದ ಹಿನ್ನುಡಿಯಲ್ಲಿ ಆಕೆ ತನ್ನ ವೃತ್ತಿಯ ಘನತೆಯನ್ನೂ ಸಮರ್ಥಿಸಿಕೊಳ್ಳಬೇಕಾಯಿತು. 'ನನ್ನ ನಾಟಕವು ಯಶಸ್ವಿಯಾಗದಿದ್ದರೆ ನಾನು ವಿಮರ್ಶಕರಿಂದ ನ್ಯಾಯವನ್ನು ಬೇಡಿಕೊಳ್ಳಬೇಕಾಗಿಲ್ಲ. ಆ ವಿಮರ್ಶಕರು ತಮ್ಮ ಸ್ಥಾನವನ್ನು ಕಸಿದುಕೊಳ್ಳಬಹುದೆಂಬ ಭೀತಿಯಿರುವವರ ಬಗ್ಗೆ ಸಹಜವಾಗಿಯೇ ಕರುಣೆ ತೋರುತ್ತಾರೆ' ಎಂದಾಕೆ ಬರೆದಳು.

ಪುರುಷ ಸಾಹಿತ್ಯ ವ್ಯವಸ್ಥೆಗೆ ಈಕೆಯ ಜನಪ್ರಿಯತೆ ಸದಾ ಕಿರಿಕಿರಿಯನ್ನು ಉಂಟು ಮಾಡುತ್ತಿತ್ತು. ಅವಳನ್ನು ಅಶಿಕ್ಷಿತಳು, ಬೌದ್ಧಿಕತೆ, ಸೃಜನಶೀಲತೆಗಳಲ್ಲಿ ತಮಗಿಂತ ಕೀಳು ಎಂದು ತೆಗಳುವುದಕ್ಕೆ ಅಥವಾ ಅವಳ ಕೃತಿಗಳ ಬೆಲೆ ಕಟ್ಟಲಿಕ್ಕೆ ಅವಳು ಹೆಂಗಸೆಂಬುದನ್ನೂ ಒಂದು ಮಾನದಂಡವಾಗಿ ಬಳಸುತ್ತಿದ್ದರು. ಅಫ್ರಾಳ ಒಬ್ಬ ಸಮಕಾಲೀನ ಲೇಖಕ ವಿಲಿಯಂ ವೈಕರ್ಲಿ, ಅಫ್ರಾಳಷ್ಟು ಯಶಸ್ವಿಯಾಗಿರಲಿಲ್ಲ. ಆದರೂ ಮುಖ್ಯ ಪರಂಪರೆಯಲ್ಲಿ ಅವನು ಉಳಿದುಕೊಂಡ. ಅಫ್ರಾ ಹೆಸರಿಗೆ ಇತಿಹಾಸದಲ್ಲಿ ಸ್ಥಳವಿರಲಿಲ್ಲ. ಈ ವೈಕರ್ಲಿ ನಿರಂತರವಾಗಿ ಅಫ್ರಾಳ ಹೆಸರನ್ನು ಕೆಡಿಸಲು ಯತ್ನಿಸಿದ್ದೂ ಅದಕ್ಕೆ ಕಾರಣವಾಯಿತು. ಅಫ್ರಾ ನಾಟಕಗಳಿಗೆ ಜನ ಮುಗಿಬಿದ್ದು ಬರುತ್ತಿದ್ದಾಗ, ಆಕೆ ಯಾವುದೇ ರಾಜಕೀಯಾಧಿಕಾರವಿಲ್ಲದಿದ್ದರೂ 'ಜನರ ಕಣ್ಣಿಗೆ ಕಾಣಬಲ್ಲ'ವಳಾಗಿದ್ದಳು. ವಿಮರ್ಶಕರ ನಿರಂತರ ದಾಳಿಗೆ ತುತ್ತಾಗಿ ಅವಳು ನಾಟಕ ರಚನೆ ನಿಲ್ಲಿಸಿಬಿಟ್ಟಿದ್ದರೆ ಬಹುಶಃ ಅವಳ ಕೃತಿಗಳ ಪರವಾಗಿ ವಾದ ಹೂಡುವವರು ಒಬ್ಬರೂ ಇರುತ್ತಿರಲಿಲ್ಲ. ಸಾವಿನೊಂದಿಗೆ ಆಕೆಯನ್ನೂ ಯಶಸ್ವಿಯಾಗಿ ದೂರ ಮಾಡಿಬಿಡಬಹುದಿತ್ತು.

ಆದರೆ ಸತ್ತರೂ ಬಿಡದ ಕಹಿಭಾವನೆಗಳು ಪುರುಷರಲ್ಲಿದ್ದವು. **'Gentlemen's magazine'** ಪತ್ರಿಕೆಯಲ್ಲಿ **'The Aothesis of Milton'** ಎಂಬ ಕವನವೊಂದು ಪ್ರಕಟವಾಗಿತ್ತು. ಅದರಲ್ಲಿ ವೆಸ್ಟ್ ಮಿನಿಸ್ಟರ್ ಅಬಿಯಲ್ಲಿ ಮಲಗಿರುವ ಕವಿಗಳ ಕ್ಲಬ್‌ವೊಂದಕ್ಕೆ ಮಿಲ್ಟನ್ ಭೇಟಿ ನೀಡಿದ ಕಾಲ್ಪನಿಕ ಕಥನವಿದೆ. ಆ ಕವಿಗಳ ಪರಿಷತ್ತಿನಲ್ಲಿ ಅಫ್ರಾ ಕೂಡ ಭಾಗವಹಿಸಲೆತ್ನಿಸುತ್ತಾಳೆ. ಆಗ ಛಾಸರ್ ಕವಿ ಅವಳಿಗೆನ್ನುತ್ತಾನೆ ; 'ಈ ಕ್ಲಬ್‌ಗೆ ಸದಸ್ಯಳಾಗುವ ಯೋಗ್ಯತೆ ಯಾವ ಹೆಂಗಸಲ್ಲೂ ಇಲ್ಲ' ಅಲ್ಲಿದ್ದ ಯಾವ ಸದಸ್ಯರೂ ಅಫ್ರಾಳ ಇರವನ್ನು ಸಹಿಸಲು ಸಿದ್ಧರಿರಲಿಲ್ಲ. ಆದ್ದರಿಂದ ಅಫ್ರಾ ಆ ಸಭೆಯಿಂದ ಹೊರಕ್ಕೆ ಜಿಗಿದಳು' ಎಂದು ಆ ಕವನ ಚಿತ್ರಿಸುತ್ತದೆ. ಪ್ರಧಾನ ಪರಂಪರೆಯ ಕವಿಗಳ ಮೂಲೆಯಾಚೆಗೆ ಅವಳು ಹುಗಿಯಲ್ಪಟ್ಟಿದ್ದರ ಸಂಕೇತ ಇದು. ಆದರೆ ಈ ಕವನದ ಕರ್ತೃ ತನಗರಿವಿಲ್ಲದೆಯೇ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರನ್ನು ನಡೆಸಿಕೊಳ್ಳುವ ಬಗೆಯನ್ನು ಕುರಿತು ಭಾಷ್ಯವನ್ನು ಬರೆದಂತಾಗಿದೆ !

ಕಳೆದ ಮೂರು ಶತಮಾನಗಳಲ್ಲಿ ಹಲವು ಬಾರಿ ಅಫ್ರಾ ಬೆನ್ ಹೆಸರು ಮತ್ತೆ ಮತ್ತೆ ಮೇಲೆದ್ದಿದೆ, ಮತ್ತೆ ಮತ್ತೆ ಚರ್ಚೆಯ ವಸ್ತುವಾಗಿದೆ. ಆದರೆ ಯಾವಾಗಲೂ ಆಕೆಯ ಲಿಂಗದ ಕಾರಣಕ್ಕಾಗಿ ಆಕೆಯನ್ನು ಕೈಬಿಡುವುದರಲ್ಲಿ ಈ ಚರ್ಚೆಗಳು ಕೊನೆಗೊಂಡಿವೆ. ಆಕೆ ಅಶ್ಲೀಲ

ಭಾಷೆ ಬಳಸುತ್ತಾಳೆಂಬುದು ಆಕೆಯ ಬಗ್ಗೆ ಇದ್ದ ದೂಷಣೆಗಳಲ್ಲಿ ಒಂದು, ಪೋಲಿ ಭಾಷೆ ಅಥವಾ ಅಶ್ಲೀಲತೆ ಆ ಯುಗದ ಎಲ್ಲರ ಶೈಲಿಯಲ್ಲೂ ಇದ್ದ ಸಾಮಾನ್ಯ ಲಕ್ಷಣವೇ ಆಗಿದ್ದು, ಅದಕ್ಕಾಗಿ ಯಾವ ಪುರುಷರೂ ಅಪರಾಧಿಭಾವನೆ ಅನುಭವಿಸಬೇಕಾಗಿರಲಿಲ್ಲ. ಆದರೆ ಹೆಂಗಸಾಗಿದ್ದಕ್ಕಾಗಿ ಅಂಥ ಭಾಷೆ ಅಫ್ರಾ ವಿಷಯದಲ್ಲಿ 'ಅಕ್ಷಮ್ಯ' ಅಪರಾಧವೆನಿಸಿತ್ತು. 19ನೇ ಶತಮಾನದ ಕೊನೆಯಲ್ಲಿ ಅವಳ ಕೆಲವು ಕೃತಿಗಳು ಮತ್ತೆ ಪ್ರಕಟವಾದವು. ಆ ಬಗ್ಗೆ **'Saturday Review'** ಪತ್ರಿಕೆಯಲ್ಲಿ ವಿಮರ್ಶಕನೊಬ್ಬ ಬರೆದಿದ್ದಾನೆ: 'ಶ್ರೀಮತಿ ಬೆನ್‌ಳನ್ನು ಈಗಲೂ ಹಳೆಯ ಹಳೆಮನೆಗಳ ಧೂಳು ತುಂಬಿದ, ನುಸಿ ಹೊಡೆದ ಪುಸ್ತಕ ಭಂಡಾರಗಳಲ್ಲಿ ಅಲ್ಲಿ ಇಲ್ಲಿ ಕಾಣಬಹುದು. ಆದರೆ ಒಂದೆರಡು ತಲೆಮಾರುಗಳಿಂದ ಆಕೆಯನ್ನು ಎಲ್ಲ ಸುಸಂಸ್ಕೃತ ಸಮಾಜ ದೂರವೇ ಇಟ್ಟಿದೆ. ಅವಳು ಬದುಕಿದ್ದಾಗ ಕೂಡ ಕೇವಲ ಅಶ್ಲೀಲತೆಯನ್ನೇ ಅಸಭ್ಯತೆಯನ್ನೇ ಮೆಚ್ಚುವವರಷ್ಟೇ ಆಕೆಯನ್ನು ಓದುತ್ತಿದ್ದಿರಬಹುದು....ವೆಸ್ಟ್ ಮಿನಿಸ್ಟರ್ ಅಬೆಯಲ್ಲಿ ಆಕೆಗೆ ಗೌರವಯುತ ಸಮಾಧಿಯ ಅವಕಾಶ ಸಿಕ್ಕಿಬಿಟ್ಟಿತು. ಆಕೆಯ ಮೂಳೆಗಳ ಜೊತೆಗೇ ಅವಳ ಕೃತಿಗಳೂ ಕರಗಿ ಹೋಗದಿರುವುದು ನಿಜಕ್ಕೂ ವಿಷಾದನೀಯ....'

ಇನ್ನು ಅಫ್ರಾಳ ಜೀವನ ಚರಿತ್ರೆಯನ್ನು ಇಲ್ಲವಾಗಿಸಿಕೊಂಡ 'ಪಾಂಡಿತ್ಯ'ದ ಚರ್ಚೆಗಳ ಯತ್ನಗಳಿಗೂ ಕಡಿಮೆಯಿಲ್ಲ. 1913ರಲ್ಲಿ **'Mrs Behn's Biography : A Fiction'** ಎಂಬ ಪ್ರಬಂಧದಲ್ಲಿ ಏರ್ನೆಸ್ಟ್ ಬರ್ನ್‌ಬೌಮ್ ಎಂಬಾತ ಅಫ್ರಾಳ ಜೀವನ ಚರಿತ್ರೆ" **'One of the Fair sex'** ಎನ್ನುವುದನ್ನು ಬರೆದದ್ದು ಯಾವ ಮಹಿಳೆಯೂ ಅಲ್ಲ, ಅದನ್ನು ಬರೆದದ್ದು ಒಬ್ಬ ಪುರುಷ. ಆಕೆ ಎಂದೂ ವೆಸ್ಟ್ ಇಂಡೀಸ್‌ಗೆ ಹೋಗಿರಲಿಲ್ಲ. ಶ್ರೀಮಾನ್ ಬೆನ್ ಎನ್ನುವಾತ ಇರಲೇ ಇಲ್ಲ. ಗೂಢಚಾರಿಣಿಯಾಗಿ ಅವಳು ಮಾಡಿದಳೆನ್ನಲಾದ ಸಾಧನೆಗಳಾವುವೂ ನಂಬಲರ್ಹವಲ್ಲ' ಎಂದು ವಾದಿಸಿದ.

ಅಫ್ರಾಳ ಜೀವನ ಚರಿತ್ರೆಯನ್ನು ಸುಳ್ಳೆಂದು ಸಾಬೀತು ಮಾಡಲು ಯಾವುದೇ ಪರ್ಯಾಯ ವಾಸ್ತವಾಂಶ, ದಾಖಲೆ, ಮಾಹಿತಿಗಳನ್ನು ಹುಡುಕಲೂ ಯತ್ನಿಸಿರದ ಈ ಮಹಾಶಯ, ಹದಿನೇಳನೇ ಶತಮಾನದಲ್ಲಿ ಮಹಿಳೆಯೊಬ್ಬಳು ಅದನ್ನೆಲ್ಲ ಮಾಡಿರಬಲ್ಲಳು ಎಂಬುದನ್ನು ನಂಬಲು ತನಗೆ ಇಷ್ಟವಿಲ್ಲದ್ದನ್ನೇ ಒಂದು ಸಾಧನವಾಗಿಸಿಕೊಂಡು ಅಂಥ ಜೀವನ ಚರಿತ್ರೆಯೇ ಸುಳ್ಳೆಂದು ಸಾಧಿಸಲೆತ್ನಿಸಿದ್ದಾನೆ, ಎಂಬುದನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಹೊರಹೊಮ್ಮುವ ತತ್ವವಿಷ್ಟೆ :

ಹೆಂಗಸು ಮಹತ್ವದ ಸೃಜನಶೀಲ/ಬೌದ್ಧಿಕ ಸಾಧನೆಗಳನ್ನು ಸಂಸ್ಕೃತಿಗೆ ನೀಡಲು ಸಾಧ್ಯವಿಲ್ಲವೆಂಬ ಭಾವನೆ ಸಮಾಜದಲ್ಲಿ ಆಳವಾಗಿ ಬೇರೂರಿಬಿಟ್ಟಿದೆ. ಈ ನಂಬಿಕೆಯನ್ನು ಉಳಿಸಿಡಬೇಕಾದರೆ ಅಂಥ ಅಸಾಧಾರಣ ಕಾಣಿಕೆ ನೀಡಿದಂಥ ಮಹಿಳೆಯರನ್ನೂ ಅವರ ಸಾಧನೆಗಳನ್ನೂ ಸದಾ ನಿರಾಕರಿಸುತ್ತಾ ಇರಲೇಬೇಕು. ಹೆಂಗಸಾದದ್ದು, ಹಾಗಿದ್ದರೂ ವಿನಯ, ವಿಧೇಯತೆ, ಸೌಜನ್ಯಗಳನ್ನು ತೊರೆದು 'ಗಂಡು ಬೀರಿ'ಗಳಾದದ್ದು, ಅಥವಾ ಅಸಭ್ಯವಾಗಿ ಬರೆದದ್ದು ಎಲ್ಲವೂ ದೋಷಗಳೇ. ಜೊತೆಗೆ ಅವರಿಗೆ ಭಾವನೆಗಳ ಅರಿವಿಲ್ಲ, ಸಂವೇದನೆಗಳ ಸೂಕ್ಷ್ಮತೆಯಿಲ್ಲ, ಪುರುಷರ ರೀತಿಯ ಮನಸ್ಸು ಅವರದು, ವಸ್ತುವಿನ ಸಾರ, ಆಳಗಳ ಗ್ರಹಿಕೆ ಅವರಿಗಿಲ್ಲ ಆದ್ದರಿಂದ ಅವರು ಬರೆದದ್ದೆಲ್ಲ ಗೌಣ/ಕ್ಷುದ್ರ; ಪುರುಷರ ಬಗ್ಗೆ ದ್ವೇಷ, ಕಹಿ ಭಾವನೆಗಳಿಂದ ಬರೆಯುವವರು ಎಂಬ ವ್ಯಾಖ್ಯಾನ ಮಾಡಬಹುದು, ಅಥವಾ ಇವರ ವಿಚಾರ, ರಚನೆಗಳು ಇವರದಲ್ಲ, ಅವೆಲ್ಲ ಪುರುಷರದೇ ಆಗಿರಬೇಕು ಎಂಬ ಕಡ್ಡಾಯವಂತೂ ಇದ್ದೇ ಇದೆ. ಒಬ್ಬ ಮಹಿಳೆಯ ಕಾಣಿಕೆಯನ್ನು ಅಳೆಯುವಾಗ ಆಕೆಯ ಕೃತಿಗೆ ಬದಲಾಗಿ ಆಕೆಯ ಲಿಂಗವನ್ನು ಆಧಾರವಾಗಿಸಿ ತೀರ್ಪು ನೀಡುವ ಈ ಕ್ರಮ ಮೂಲತಃ ಒಂದು ಬೆದರಿಕೆಯ ತಂತ್ರವಾಗಿದೆ. ಪುರುಷ ಪ್ರಾಧಾನ್ಯದಲ್ಲಿ ಹೆಂಗಸಿಗೆ ಹೇಗೆ ಬೆಲೆ ಕಟ್ಟಬೇಕು ಎಂಬ ಅಧಿಕಾರವೂ ಪುರುಷರದೇ; ಆಕೆಯ ಕೃತಿಯನ್ನು ಹೇಗೆ ಸ್ವೀಕರಿಸಬೇಕು ಎಂಬುದರ ನಿರ್ಣಯದ ಅಧಿಕಾರವೂ ಅವರದೇ. ಯಾರು ಈ ಅಧಿಕಾರಕ್ಕೆ ಬೆದರಿಕೆ ಒಡ್ಡಬಲ್ಲರೋ ಅಂಥ ಮಹಿಳೆಯರನ್ನೇ ಕಣ್ಮರೆಯಾಗಿಸಬಲ್ಲದು ಈ ಬೆದರಿಕೆ ತಂತ್ರ ಎಂಬುದಕ್ಕೆ ಅಫ್ರಾಬೆನ್‌ಳ ನಿದರ್ಶನವೇ ಇದೆ.



ಸ್ತ್ರೀವಾದಿ ವಿಮರ್ಶೆ

ಡಾ. ಕೆ. ಕೇಶವ ಶರ್ಮ,

ಅನ್ವೇಷಣ ಪ್ರಕಾಶನ, ಬೆಂಗಳೂರು 1992

ಎಂಭತ್ತರ ದಶಕದ ಶುರುವಿನಿಂದಲೂ ಸ್ತ್ರೀವಾದಿ ಚಿಂತನೆಗಳನ್ನು ಕನ್ನಡ ಸಾಹಿತ್ಯಕ್ಕೆ ಅನ್ವಯಿಸುವ ವಿಮರ್ಶಾಕ್ರಮವೊಂದು ರೂಪುಗೊಳ್ಳುತ್ತ ಬರುತ್ತಿದೆ. ಸ್ತ್ರೀವಾದಿ ಸಿದ್ಧಾಂತದಲ್ಲಿ, ಹೋರಾಟದಲ್ಲಿ ತಾತ್ವಿಕ ನಂಬಿಕೆ ಹೊಂದಿರುವ ಮಹಿಳಾ ಬರಹಗಾರರು ಪಶ್ಚಿಮದ ಸ್ತ್ರೀವಾದಿ ಚರ್ಚೆಗಳನ್ನು ಕನ್ನಡದ ಸಂದರ್ಭಕ್ಕೆ, ನುಡಿಗಟ್ಟಿಗೆ ಹೊಂದಿಸುವ ಯತ್ನ ಮಾಡುತ್ತಲೇ ಬಂದಿದ್ದಾರೆ. ಸ್ತ್ರೀಯರನ್ನೂ–ಪುರುಷರನ್ನೂ ಸ್ತ್ರೀವಾದಿ ಸಂವೇದನೆಯತ್ತ ಶಿಕ್ಷಿತರನ್ನಾಗಿ ಮಾಡಬೇಕಾದ ಪರಿಸರದಲ್ಲಿ ಅವರು ಅಂಥ ಸಿದ್ಧಾಂತಗಳ ನೇರ ತರ್ಜುಮೆಗಿಂತ ಆನ್ವಯಿಕ ಕ್ರಮವನ್ನು ಅನುಸರಿಸಿದ್ದು ಅನಿವಾರ್ಯ. ಹಲವು ವರ್ಷಗಳಿಂದ ಹೀಗೆ ಹದಗೊಂಡಿರುವ ಕ್ಷೇತ್ರದಲ್ಲಿ ಡಾ. ಕೇಶವ ಶರ್ಮರ ಕೃತಿಯು ಹೊರ ಬಂದಿದ್ದು ಒಂದು ಮುಖ್ಯ ಬೆಳವಣಿಗೆಯೆನ್ನಬಹುದು.

ಹೋರಾಟ ಸಿದ್ಧಾಂತವಾಗಿ ಮತ್ತು ವಿಮರ್ಶಾ ಸಿದ್ಧಾಂತವಾಗಿ ಇಂದು ಸ್ತ್ರೀವಾದವು ಪುರುಷರನ್ನೂ ಒಳಗೊಳ್ಳುವ ನಿಲುವಿನದೇ ಆಗಿದೆ. 'ಅನುಗ್ರಹಿಸುವ' ಧೋರಣೆ, ಆಶ್ರಯದಾತತನಗಳಿಂದ ಮುಕ್ತರಾದ ಪುರುಷರು ಸ್ತ್ರೀವಾದಿ ಚಿಂತನೆಗೆ ಪ್ರವೇಶಿಸಬಹುದು. ಆದರೆ ತಾವು ಸ್ತ್ರೀಯರ ಸಮಸ್ಯೆಗಳ ನಿವಾರಣೆಗೆ ಸ್ತ್ರೀವಾದದ ಬೆಳವಣಿಗೆಗೆ ನಿಜವಾಗಿ ಏನಾದರೂ ಸೇವೆ ಸಲ್ಲಿಸುತ್ತಿದ್ದೇವೆಯೇ ಎಂಬ ಸ್ವ-ವಿಮರ್ಶೆಯೂ ಅರಿವೂ ಅವರಿಗಿರಬೇಕು. ಕನ್ನಡದಲ್ಲಿ ಸ್ತ್ರೀ-ಪುರುಷರ ಸಮಾನತೆಯುಳ್ಳ ಸಮಾಜದ ಸ್ಥಾಪನೆಯ ಸಿದ್ಧಾಂತಗಳಿಗೆ ಬದ್ಧರಾದ ಹಲವರು ಪುರುಷರು ಸ್ತ್ರೀವಾದಿ ಚರ್ಚೆಗಳಲ್ಲಿ ಆಸಕ್ತರಾಗಿದ್ದಾರೆ. ಕೇಶವಶರ್ಮ ಕೂಡ ಆ ಸಾಲಿಗೆ ಸೇರಿದ್ದಾರೆ.

ಅಂತರಶಿಸ್ತೀಯ ಜಿಜ್ಞಾಸೆಯ ಶಾಖೆಯಾದ ಸ್ತ್ರೀವಾದ ಲಿಂಗಜಾತಿ **(Gender)** ಯನ್ನು ಅನುಭವವನ್ನು ಸಂಘಟಿಸುವ ಮೂಲಭೂತ ಅಂಶವೆಂದು ಸ್ವೀಕರಿಸುತ್ತದೆ. ಈ ಚಿಂತನೆಯು ಮೂಲದಲ್ಲಿ ಎರಡು ಪ್ರಮೇಯಗಳನ್ನು ಆಧರಿಸಿ ಬೆಳೆದಿದೆ : (1) ಲಿಂಗ-ಅಸಮಾನತೆ ಜೀವಶಾಸ್ತ್ರೀಯ ವಿಧಿಯಾಗಲಿ ದೈವನಿರ್ಣೀತ ಸ್ಥಿತಿಯಾಗಲಿ ಅಲ್ಲ ; ಅದೊಂದು ಸಾಮಾಜಿಕ ಸಂರಚನೆ **(Construct)** ಆಗಿದೆ. ಆದ್ದರಿಂದ ಮಾನವ ಶಾಸ್ತ್ರೀಯ ಅಧ್ಯಯನಕ್ಕೆ ಅದು ವಸ್ತುವಾಗಬಲ್ಲದು. (2) ಪುರುಷ ದೃಷ್ಟಿಕೋನವೇ 'ಸಾರ್ವತ್ರಿಕ'ವೆಂದು ಸ್ವೀಕೃತವಾಗಿದ್ದು, ಅರಿವಿನ ಎಲ್ಲ ಕ್ಷೇತ್ರಗಳನ್ನೂ, ಅವುಗಳ ನುಡಿರೂಪ ಪ್ರತೀಕಗಳನ್ನೂ **(Paradigms)** ವಿಧಾನಗಳನ್ನೂ **(Methods)** ಈ ಪುರುಷ ಪ್ರಧಾನ ದೃಷ್ಟಿಕೋನವೇ ರೂಪಿಸುತ್ತದೆ.

ಈ ಎರಡು ಪ್ರಮೇಯಗಳ ನೆಲೆಯಿಂದ ಹೊರಡುವ ಸ್ತ್ರೀವಾದಿ ವಿಮರ್ಶೆಯು ಎರಡು ಮುಖ್ಯ ಕಾಳಜಿಗಳನ್ನು ಹೊಂದಿದೆ ;

(1) ಈ ಹಿಂದೆ ಸಾರ್ವತ್ರಿಕವೆಂದು ಭಾವಿಸಿದ್ದ ಹಲವಾರು ಪರಿಕಲ್ಪನೆಗಳು ವಾಸ್ತವವಾಗಿ ಬೇರೆ ಬೇರೆ ಸಂಸ್ಕೃತಿಗಳಲ್ಲಿ ವಿಭಿನ್ನ ಪ್ರಯೋಜನಗಳಿಗಾಗಿ ಹುಟ್ಟಿಕೊಂಡಿರುವುದನ್ನು ಸೂಚಿಸಿ, ಈ ಪರಿಕಲ್ಪನೆಗಳ ಮರುವಿವೇಚನೆಗೆ ಯತ್ನಿಸುವುದು.

(2) ಸ್ತ್ರೀಯರ ಅನುಭವಗಳನ್ನು, ಸಂಸ್ಕೃತಿಗೆ ಅವರಿಂದ ಸಂದಿರುವ ಕಾಣಿಕೆಯ ಅರಿವನ್ನು ವಿಸ್ತರಿಸಿ, ಸ್ತ್ರೀ ದೃಷ್ಟಿಕೋನದ ಮರುಸ್ಥಾಪನೆಗೆ ಯತ್ನಿಸುವುದು. ಈ ಕಾಳಜಿಗಳ ಹಿಂದೆ ಅರವತ್ತರ ಎಪ್ಪತ್ತರ ದಶಕ

ಗಳಲ್ಲಿ ಪಶ್ಚಿಮದಲ್ಲಿ ಸಂಭವಿಸಿದ ಸ್ತ್ರೀ ವಿಮೋಚನಾವಾದಿ ಚಳವಳಿಗಳು ಮುಖ್ಯ ಪ್ರೇರಣೆ ನೀಡಿವೆ. ಆದರೆ ಇಂದಿನ ವಿಸ್ತೃತ ರೂಪದಲ್ಲಿ ಸ್ತ್ರೀವಾದಿ ವಿಮರ್ಶೆಯು ಫ್ರಾಯ್ಡ್, ಮಾರ್ಕ್ಸ್ ಮತ್ತು ಸೊಷ್ಯೂರರಂಥವರ ವ್ಯಾಖ್ಯಾನಗಳ ಅಧಿಕೃತತೆಯನ್ನು ಸ್ಥಾನಪಲ್ಲಟಗೊಳಿಸುವ ಮೂಲಕ ಮಾನವ ಸ್ವಭಾವ, ವಸ್ತುಸ್ಥಿತಿ ಮತ್ತು ಸಾಹಿತ್ಯದಲ್ಲಿನ ಶ್ರೇಣ್ಯಕೃತಿಗಳ ಪರಂಪರೆ, ಓದುವ ವಿಧಾನಗಳನ್ನು ತೀವ್ರವಾಗಿ ಪ್ರಶ್ನಿಸಿದೆ. ಅಂಥ 'ಅಧಿಕೃತತೆ'ಗೆ ದೊಡ್ಡ ಸವಾಲಾಗಿದೆ.

ಪ್ರಸ್ತುತ ಕೇಶವಶರ್ಮರ ಕೃತಿಯು ಸ್ತ್ರೀವಾದಿ ಚಿಂತನೆಯ ಸ್ವರೂಪಗಳು, ಅವುಗಳ ಚಾರಿತ್ರಿಕ ಬೆಳವಣಿಗೆ, ವಿವಿಧ ಸ್ತ್ರೀವಾದಿ ಪಂಥಗಳ ನಡುವಿನ ತಾತ್ತ್ವಿಕ ಭೇದಗಳು, ಭಾಷೆಯ ಬಗ್ಗೆ ಸ್ತ್ರೀವಾದ ತಳೆಯುವ ನಿಲುವುಗಳು ಮತ್ತು ಒಟ್ಟು ಸ್ತ್ರೀವಾದಿ ಚಿಂತನೆಗೆ ಈ ಲೇಖಕರ ಪ್ರತಿಕ್ರಿಯೆಯನ್ನೂ ತಿಳಿಸುವಂಥ ನಾಲ್ಕು ಲೇಖನಗಳನ್ನು ಮೊದಲಲ್ಲಿ ಹೊಂದಿದೆ. ಕೊನೆಯಲ್ಲಿ ಸ್ತ್ರೀವಾದಿ ಚಿಂತನೆಯ ನೆಲೆಯಿಂದ ಕನ್ನಡ ಸಾಹಿತ್ಯವನ್ನು ವಿವೇಚಿಸುವಂಥ ಎರಡು ಲೇಖನಗಳಿವೆ.

ಸಮಕಾಲೀನ ಸ್ತ್ರೀವಾದಿಗಳು (1) ತೀವ್ರಗಾಮಿ ಸ್ತ್ರೀವಾದ, (2) ಸಾಂಸ್ಕೃತಿಕ ಸ್ತ್ರೀವಾದ ಮತ್ತು (3) ಸಮಾಜವಾದಿ ಸ್ತ್ರೀವಾದದ ಪಂಥಗಳನ್ನು ಗುರುತಿಸುತ್ತಾರೆ. ಈ ಪದ್ಧತಿಯಲ್ಲಿ ವಿವಿಧ ಪಂಥಗಳ ಸೈದ್ಧಾಂತಿಕ ಭಿನ್ನತೆಗಳು ಮತ್ತು ಅವು ಪ್ರತಿಪಾದಿಸುವ ವಿಷಯಗಳು ಮುಖ್ಯ ಆಧಾರವಾಗಿರುತ್ತವೆ. ಕೇಶವ ಶರ್ಮರು ಸಾಂಪ್ರದಾಯಿಕ ರೀತಿಯಲ್ಲಿ (i) ಆಂಗ್ಲೋ—ಅಮೆರಿಕನ್ (ii) ಫ್ರೆಂಚ್ (iii) ಕಪ್ಪುಮಹಿಳೆಯರ ಸ್ತ್ರೀವಾದವೆಂದು ಪ್ರತ್ಯೇಕಿಸುತ್ತಾರೆ. ಪರಿಚಯದ ಸಂಬಂಧದಲ್ಲಿ ಈ ರೀತಿ ವಿಭಜಿಸಿದ್ದರೂ, ತಮ್ಮ ಪ್ರತಿಕ್ರಿಯೆ ನೀಡುವಂಥ ಸಂದರ್ಭಗಳಲ್ಲಿ ಸ್ತ್ರೀವಾದಿಗಳನ್ನು ಸಾಂಪ್ರದಾಯಿಕ ಮತ್ತು ಪ್ರಗತಿಪರರೆಂದು ಪರಿಗಣಿಸಿರುವುದು ಕಂಡುಬರುತ್ತದೆ.

ಪ್ರಾದೇಶಿಕ, ಜನಾಂಗೀಯ ಸಾಂಸ್ಕೃತಿಕ ವಿಭಿನ್ನತೆಗಳ ಮೂಲದಿಂದಾಗಿ ಸಿದ್ಧಾಂತ, ಸಮಸ್ಯೆಯ ಗ್ರಹಿಕೆ, ಹೋರಾಟದ ಪ್ರತಿವಿಧಾನಗಳ ರೂಪಣಗಳಲ್ಲಿ ಸ್ತ್ರೀವಾದಕ್ಕೆ ಬಹು ರೂಪವುಂಟಾಗಿದೆ. ಆದರೂ ಈ ಎಲ್ಲ ಭಿನ್ನತೆಗಳ ಆಚೆಗೂ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀಯ ಶೋಷಣೆ ಒಂದು ವಾಸ್ತವ ಸಂಗತಿಯಾಗಿದೆ. ವಸ್ತುಮಯ ಪರಿಸ್ಥಿತಿಯಿಂದ ಅದು ಉದ್ಭವಿಸುತ್ತದೆ ಮತ್ತು ಮನಶ್ಶಾಸ್ತ್ರೀಯ ಗೋಚರಾನುಭವ (Phenomenon) ಅದು ಎಂಬುದು ಇಂದಿನ ಸ್ತ್ರೀವಾದಿ ನಿಲುವಾಗಿದೆ. ಆಯಾ ದೇಶ, ಕಾಲ, ಸಾಂಸ್ಕೃತಿಕ ಅವಶ್ಯಕತೆಗಳ ಮೂಲದಿಂದಲೇ ಈ ನೆಲೆಗಳು ಹೊರಟಿರುವುದರಿಂದ ಇವುಗಳನ್ನು ಕೇವಲ ಬಂಡವಾಳ ಶಾಹಿ ಸಂಸ್ಕೃತಿಯ ಉದ್ಭವವೆಂದು ನೇತ್ಯಾತ್ಮಕವಾಗಿ ಒಂದು ಸೂತ್ರಕ್ಕೆ ಬದ್ಧವಾಗಿ ಪರಿಗಣಿಸುವುದು ಹೇಗೆ ಸಮಂಜಸ? ಕೇಶವಶರ್ಮರ ವ್ಯಾಖ್ಯಾನಗಳನ್ನು ಗಮನಿಸಿದಾಗ ಈ ಪ್ರಶ್ನೆ ಏಳುತ್ತದೆ.

ಸ್ತ್ರೀವಾದಿ ವಿಮರ್ಶೆಯ ಎರಡು ಮುಖ್ಯ ಕಾಳಜಿಗಳಲ್ಲಿ, ಮೊದಲಿನದರ ಬಗ್ಗೆ ಶರ್ಮರು ವ್ಯಾಪಕವಾಗಿ ಗಮನ ಹರಿಸಿದ್ದಾರೆ. ಲಿಂಗಾಧಾರಿತ ಅಸಮಾನತೆಯು ರೂಢಿಸಿರುವ ನುಡಿರೂಪ ಪ್ರತೀಕಗಳನ್ನು ನಿರಚಿಸುವುದು, ವಿಚ್ಛೇದಿಸುವುದು, ಅದಕ್ಕಾಗಿ ಬಹುಶಾಸ್ತ್ರೀಯ ಅರಿವನ್ನು ಬಳಸಿಕೊಳ್ಳುವುದು ಮುಂತಾದ ಸ್ತ್ರೀವಾದಿ ವಿಮರ್ಶೆಯ ನೆಲೆಗಳನ್ನು ಶರ್ಮರು ಸ್ಪಷ್ಟವಾಗಿ ಕ್ರೋಢೀಕರಿಸಿ. ತಿಳಿಸಿಕೊಟ್ಟಿದ್ದಾರೆ. ಆದರೆ ಸ್ತ್ರೀವಾದಿ ವಿಮರ್ಶೆಯ ಮತ್ತೊಂದು ಕಾಳಜಿ 'ಸ್ತ್ರೀದೃಷ್ಟಿಕೋನದ ಮರುಸ್ಥಾಪನೆ' ಎಂಬುದರತ್ತ ಅವರು ವಿಶೇಷ ಲಕ್ಷ ತೋರಿದ್ದು ಕಂಡುಬರುವುದಿಲ್ಲ. 'ಆಂಗ್ಲೋ-ಅಮೆರಿಕನ್' ವಲಯದ 'ಬಂಡವಾಳಶಾಹಿ ನೆಲೆಯ ಸ್ತ್ರೀವಾದಿಗಳು ಇಂಥ ಯತ್ನದಲ್ಲಿ ಪ್ರಧಾನ ಪಾತ್ರ ವಹಿಸಿರುವುದು ಈ ಬಗೆಯ ನಿರ್ಲಕ್ಷ್ಯಕ್ಕೆ ಕಾರಣವಾಗಿರಬಹುದೆ? ನೆಲದ ಎದೆಸೀಳಿ ಹೊಸ ಸಂಸ್ಕೃತಿಯು ಅಭಿವ್ಯಕ್ತಿ ಪಡೆಯಬೇಕಾದ ದೊಡ್ಡ ಜವಾಬ್ದಾರಿಯ ಬಗ್ಗೆ ಕಳಕಳಿಯ ಧ್ವನಿಯಿಂದ ಶರ್ಮರು ಸೂಚಿಸುತ್ತಾರೆ. ಆದರೆ ಅಂಥ ಸಂಸ್ಕೃತಿಯನ್ನು ಸಾಧ್ಯವಾಗಿಸುವಂಥ ಹೋರಾಟದ ಸ್ವರೂಪ ಯಾವುದಿರಬೇಕು/ಬಹುದು ಎಂಬುದು ಸಂದಿಗ್ಧವಾಗಿಯೇ ಉಳಿಯುತ್ತದೆ.

ಕೊನೆಯ ಎರಡು ಲೇಖನಗಳಲ್ಲಿ ಆಶೀಷ್ ನಂದಿಯವರ ವಿಚಾರವೊಂದನ್ನು ಆಧರಿಸಿ, ವಿಸ್ತರಿಸಿ

ವ್ಯಾಖ್ಯಾನ ಮಾಡುವ ಶರ್ಮ ನವೋದಯ ಪೂರ್ವದ ಅವಧಿಯಿಂದ ಇವತ್ತಿನವರೆಗಿನ ಕನ್ನಡ ಸಾಹಿತ್ಯದಲ್ಲಿ 'ಪಾತ್ರ-ಆರಾಧನಾ' ಸಂಸ್ಕೃತಿಯ ಅಂಶಗಳು ಇರುವುದನ್ನು ಗುರುತಿಸುತ್ತಾರೆ, ಮತ್ತು ಭಾರತೀಯ ಸಂಸ್ಕೃತಿಯ ಈ ವಿಶೇಷ ಅಂಶದಿಂದಾಗಿ, ಪಿತೃ ಪ್ರಧಾನ, ಬಂಡವಾಳಶಾಹಿ ಪೆಡಶಾಕ್ತಿಸಿಗಳ ಮೂಲದ ಹಲವು ವಿಚಾರಗಳು ಭಾರತೀಯ ಸಂದರ್ಭಕ್ಕೆ ಅನ್ವಯವಾಗಲಾರವೆಂಬ ಸಂದೇಹವನ್ನು ಸೂಚಿಸುತ್ತಾರೆ.

ಆಶೀಷ್ ನಂದಿಯವರದೇ ಮುಂದುವರಿದ ವಿಚಾರ ಸರಣಿಯೊಂದು ಕೇಶವಶರ್ಮರ ಗಮನಕ್ಕೆ ಬಂದಿದೆಯೋ ಇಲ್ಲವೋ ತಿಳಿಯದು. **At the edge of psychology** ಎಂಬ ಪ್ರಬಂಧ ಸಂಕಲನದಲ್ಲಿ **(Oxford press, Oxford Indian paperbacks 1990)** ನಂದಿಯವರು ಭಾರತೀಯ ಸಂಸ್ಕೃತಿಯು 'ತಾಯಿ-ಮಗ'ನ ಮೂಲ ನೆಲೆಯಲ್ಲೇ (ಶೈಶವ) ವಿಪರೀತ ಬದ್ಧವಾಗಿ ಉಳಿದಿದೆ ; ಇಲ್ಲಿನ ಸ್ತ್ರೀಯು ಈ ತಾಯಿಯ ನೆಲೆಯಿಂದ ಲೈಂಗಿಕವಾಗಿ ಪುರುಷನಿಗೆ ಅಭಿಮುಖವಾಗಿ ತನ್ನನು ಸಮರ್ಥಿಸಿಕೊಳ್ಳಬಲ್ಲ ನೆಲೆಯತ್ತ ಒಡಲಾಗಬೇಕಾಗಿದೆ ನಿಜವಾದ ಸ್ತ್ರೀವಾದಿ ಹೋರಾಟ ಸ್ತ್ರೀ-ಪುರುಷರ ಸಂಬಂಧದಲ್ಲಿ ಸಾಧ್ಯವೇ ಹೊರತು 'ತಾಯಿ-ಮಗ'ನ ಸಂಬಂಧದಲ್ಲಲ್ಲ ಎಂದು ಪ್ರತಿಪಾದಿಸುತ್ತಾರೆ (ಪು. 32-43). ಈ ನೆಲೆಯಿಂದ ಭಾರತೀಯ ಸ್ತ್ರೀವಾದದ ನೆಲೆಯು ಯಾವುದಾಗಿರಬೇಕು ಎಂಬುದು ಇನ್ನಷ್ಟು ಚರ್ಚಾಸ್ಪದವಲ್ಲವೆ? ಇಂಥ ಮುಖ್ಯ ಪ್ರಶ್ನೆಗಳಿಗೆ ಆಸ್ಪದ ನೀಡುವಂತೆ ಪಶ್ಚಿಮದ ಸ್ತ್ರೀವಾದಿ ಸಿದ್ಧಾಂತಗಳನ್ನು ಶ್ರಮವಹಿಸಿ ಸಂಗ್ರಹ ತರ್ಜುಮೆ ಮಾಡಿ, ವ್ಯಾಖ್ಯಾನಿಸಿ ಒರೆಹಚ್ಚಿನೋಡಲು ಯತ್ನಿಸಿರುವ ಕೇಶವ ಶರ್ಮರ ಈ ಯತ್ನವು ಸ್ವಾಗತಾರ್ಹವಾದದ್ದೂ, ಇಂದಿನ ಅವಶ್ಯಕತೆಯೂ ಆಗಿದೆ. ಪರಕೀಯ ಪರಿಭಾಷೆ, ನುಡಿಗಟ್ಟುಗಳನ್ನು ಕನ್ನಡದ ಧಾಟಿಗೆ ಹೊಂದಿಸುವ ಯತ್ನ ಶ್ರಮಸಾಧ್ಯವಾದದ್ದು. ಶರ್ಮರ ಬರಹದಲ್ಲೂ ಈ ಶ್ರಮವು ಕಂಡುಬರುತ್ತದೆ. ಇಂಥ ಕಷ್ಟವನ್ನು ತಪ್ಪಿಸಲಿಕ್ಕಾಗಿ ಅವರು ಬಹಳಷ್ಟು ಸಲ ಆಗ್ಲಂ ಪದಗಳನ್ನು ಹಾಗೆಯೇ ಬಳಸುತ್ತಾರೆ. ಆದರೆ ಓದುಗರಲ್ಲಿ, ಅದರಲ್ಲೂ ಸ್ತ್ರೀವಾದದ ಪರಿಚಯ ಬಯಸಿ ಓದ ಹೊರಡುವವರಿಗೆ, ಇದು ಇನ್ನೂ ಗೊಂದಲಕ್ಕೆ ಕೆಡವಬಹುದು. ಈ ಕೊರತೆಗಳತ್ತ ಗಮನವಹಿಸಿ, ಈ ಚಿಂತಕರು ಸ್ತ್ರೀವಾದಿ ಜಿಜ್ಞಾಸೆಯನ್ನು ವ್ಯಾಪಕವಾಗಿಸಲು ಇನ್ನೂ ಹೆಚ್ಚಿನ ಪ್ರಯತ್ನಗಳನ್ನು ಮಾಡುತ್ತಾರೆಂದು ಆಶಿಸಬಹುದಾಗಿದೆ.

— ಬಿ. ಎನ್. ಸುಮಿತ್ರಾಬಾಯಿ

ನಾನೊಬ್ಬಳೇ ಇರುವಾಗ ನಾನು ಏನೂ ಅಲ್ಲ! ಗಂಡ ಅಥವಾ ಮಕ್ಕಳಿಗೆ ನಾನು ಬೇಕಾದಾಗ ನನಗೂ ಅಸ್ತಿತ್ವವಿದೆಯೆಂದು ನನಗನ್ನಿಸುತ್ತದೆ. ನನ್ನ ಗಂಡ ಹೊರಗಿನ ವಾಸ್ತವ ಜಗತ್ತಿಗೆ ಹೋಗುತ್ತಾನೆ. ನಾನು ನನ್ನ ಹೊರತು ಬೇರಾರಿಗೂ ಬೇಡದ ನಾನೇ ಸೃಷ್ಟಿಸಿಕೊಂಡ ಕೆಲಸಗಳನ್ನು ಮಾಡುತ್ತಾ ಈ ಮನೆಯ ಕಲ್ಪಿತ ಪ್ರಪಂಚದೊಳಗೆ ಇರುತ್ತೇನೆ. ಯಾವುದೋ ರಹಸ್ಯಪ್ರಕ್ರಿಯೆಯಲ್ಲಿ ನಾನು ತೊಡಗಿರುವಂತೆ ಕಾಣುತ್ತದೆ.

— ಮೆರಿಡಿತ್ ಟ್ಯಾಕ್ಸ್

---

* ಸಾಮಾಜಿಕ ಪರಿಸ್ಥಿತಿಗಳಲ್ಲಾಗುವ ಪ್ರತಿಯೊಂದು ಭಾರೀ ಚಾರಿತ್ರಿಕ ಕ್ರಾಂತಿಯೊಂದಿಗೆ ಜನರ ಮನೋಧರ್ಮಗಳೂ, ವಿಚಾರಗಳೂ, ತತ್ಫಲವಾಗಿ ಅವರ ಧಾರ್ಮಿಕ ವಿಚಾರಗಳೂ ಕ್ರಾಂತಿಕಾರಗೊಳ್ಳುತ್ತವೆ....

** 'ಧರ್ಮವು ಜನರ ದೈನಂದಿನ ಜೀವನವನ್ನು ನಿಯಂತ್ರಿಸುವಂಥ ಬಾಹ್ಯಶಕ್ತಿಗಳು ಅವರ ಮನಸ್ಸುಗಳಲ್ಲಿ ಮೂಡಿಸುವ ಭ್ರಾಂತ್ಯಾತ್ಮಕ ಪ್ರತಿಬಿಂಬವಲ್ಲದೆ ಬೇರೇನೂ ಅಲ್ಲ.'

— ಮಾರ್ಕ್ಸ್ ಮತ್ತು ಎಂಗೆಲ್ಸ್

ಅಗ್ನಿಪಥ-ಅಭಿನಯವೇ ಶ್ರೀರಕ್ಷೆ

ಲಕ್ಷಾಪತಿ ರಾಜನ ಕಥೆ, ಕರಿಮಾಯಿ,ವೈಶಾಖ ಮುಂತಾದ ನಾಟಕಗಳ ಯಶಸ್ವೀ ಪ್ರದರ್ಶನಗಳ ನಂತರ 'ಸ್ಪಂದನ' ತಂಡ, ತನ್ನ ಹೊಸ ನಾಟಕ 'ಅಗ್ನಿಪಥ' ವನ್ನು ದಿನಾಂಕ 5–2–93ರಂದು ರವೀಂದ್ರ ಕಲಾ ಕ್ಷೇತ್ರದಲ್ಲಿ ಪ್ರದರ್ಶಿಸಿತು. ನಾಟಕರೂಪ ಬಿ. ಜಯಶ್ರೀ ಮತ್ತು ಎಂ. ಎನ್. ವ್ಯಾಸರಾವ್, ನಿರ್ದೇಶನ ಬಿ. ಜಯಶ್ರೀ.

ರಂಗಕ್ಷೇತ್ರದಲ್ಲಿ ಸಾಕಷ್ಟು ಖ್ಯಾತಿ ಪಡೆದಿರುವ, ಉತ್ತರ ಪ್ರದೇಶದ ನಾಟಕ ಅಕಾಡೆಮಿಯಿಂದ ಹಷ್ಮಿ ಪ್ರಶಸ್ತಿ ಪಡೆದಿರುವ ಬಿ. ಜಯಶ್ರೀರವರು ಜಾನಪದ ಸೊಗಡನ್ನು ರಂಗಕ್ಕೆ ಅಳವಡಿಸುವಲ್ಲಿ ಸಿದ್ಧ ಹಸ್ತರು. 80–90 ಪ್ರದರ್ಶನಗಳನ್ನು ಕಂಡಿರುವ 'ಲಕ್ಷಾಪತಿ ರಾಜನ ಕಥೆ', 'ಕರಿಮಾಯಿ' ನಾಟಕಗಳು ಇಂದಿಗೂ ಜನಪ್ರಿಯತೆಯನ್ನುಳಿಸಿಕೊಂಡು ಇದನ್ನು ಸಾಬೀತು ಗೊಳಿಸಿವೆ. ಅಗ್ನಿಪಥದಲ್ಲಿ ಜಯಶ್ರೀರವರು ಉತ್ತರ ಕರ್ನಾಟಕದಲ್ಲಿ ರೂಢಿ ಇರುವ ಅಂಬಾಭವಾನಿಗೊಂದಲದ ಕಥೆ ಹೇಳುವ, ಲಯವಾದ್ಯ ನುಡಿಸುವ ಕ್ರಮವನ್ನೂ ಯಕ್ಷಗಾನದ ಹೆಜ್ಜೆಗಳನ್ನೂ ಮೇಳೈಸಿ ಬಳಸಿಕೊಂಡಿದ್ದಾರೆ. ರಂಗು ರಂಗಿನ ಸುಂದರ ಗ್ರಾಮೀಣ ಉಡುಗೆ–ತೊಡುಗೆಗಳಿಂದ ಹದಿನೇಳು ಜನ ಕ್ರಮಬದ್ಧವಾಗಿ ರಂಗದ ಮೇಲೆ ಹೆಜ್ಜೆ ಹಾಕುತ್ತಾ ಸುತ್ತುವುದನ್ನು ನೋಡುವುದೇ ಒಂದು ಖುಷಿ ಕೊಡುವ ಅನುಭವ. ರಂಗದ ಮೇಲೆ ಹೊಸ ಪ್ರಯೋಗಗಳನ್ನು ಮಾಡುವುದರಲ್ಲಿ ಶ್ರೀಮತಿ ಜಯಶ್ರೀರವರು ನುರಿತವರು. ಗಾಂಧಾರಿಯ ಹತಾಶೆ, ದುಃಖ–ದುಮ್ಮಾನಗಳನ್ನು ಗಾಂಧಾರಿಯ ಪಾತ್ರದ ಜೊತೆ ಜೊತೆಗೇ ಅವಳಿಂದ ಹೊರಹೊಮ್ಮುವ, ಅವಳ ಸುತ್ತಮುತ್ತ ಮತ್ತು ರಂಗದ ತುಂಬೆಲ್ಲ ಸುತ್ತುವ 'ಮನಸ್ಸಿನ' ಮತ್ತೊಂದು ಪಾತ್ರ ರಚಿಸಿ ಅದ್ಭುತ ಅನುಭವವನ್ನು ಕೊಡುತ್ತಾರೆ. ಒಡಿಸ್ಸಿ ನೃತ್ಯ ಕಲಾವಿದೆಯಾದ ಶಿಲ್ಪ ಆನಂದರಾಜ್ ರವರು ಈ ಪಾತ್ರವನ್ನು ತುಂಬ ಕಲಾತ್ಮಕವಾಗಿ ನಿರ್ವಹಿಸಿದ್ದಾರೆ.

ಜಯಶ್ರೀ ನಿರ್ದೇಶನದ ಹಿಂದಿನ ನಾಟಕಗಳ ಹಿನ್ನೆಲೆಯಲ್ಲಿ'ಅಗ್ನಿಪಥ'ವನ್ನು ಗಮನಿಸುವುದಾದರೆ ಇದು ತೀರಾ ಪೇಲವವೆನಿಸುತ್ತದೆ. ಒಟ್ಟು ನಾಟಕದ ಓಟಕ್ಕೆ ಬೇಕಾಗಿರುವ ಏಕಸೂತ್ರದ 'ಹೆಣಿಗೆ'ಯೇ ಇಲ್ಲದಿರುವುದರಿಂದ ಪಠ್ಯದಲ್ಲೇ ಕೊರತೆ ಎದ್ದು ಕಾಣುತ್ತದೆ. ಕಾದಂಬರಿ, ಕಥೆಗಳನ್ನು ನಾಟಕಕ್ಕೆ ರೂಪಾಂತರಿಸುವಾಗ ಅಲ್ಲಿ ಸಿದ್ಧವಾದ ಹೆಣಿಗೆ ಇದ್ದು ಅದನ್ನು ಯಾವ ರೂಪಕ್ಕೆ ಬೇಕಾದರೂ ಹಿಗ್ಗಿ–ಕುಗ್ಗಿಸಬಹುದು. ಇಲ್ಲಿ ಮಹಾಭಾರತದ ಸ್ತ್ರೀ ಪಾತ್ರಗಳಿಂದ ನಾಟಕ ರಚಿಸುವ ಪ್ರಯತ್ನ ಮಾಡಿರುವುದರಿಂದ, ಪಾತ್ರಗಳನ್ನು ಏಕರೂಪದಲ್ಲಿ ಹೆಣೆಯಲು ಜಯಶ್ರೀ ಸೋತಿದ್ದಾರೆ. ನಾಟಕದ ಬ್ರೋಷರ್‌ನಲ್ಲಿ 'ಅಂಬೆ, ಗಾಂಧಾರಿ, ಕುಂತಿ, ಮಾದ್ರಿ, ದ್ರೌಪದಿಯಂಥ ಶೋಷಣೆಗೆ ಒಳಗಾದ ಹೆಣ್ಣುಗಳ ಮನಸ್ಸನ್ನು ಹೊಕ್ಕು ಅಲ್ಲಿರುವ ಸುಪ್ತ ಬಯಕೆಗಳನ್ನು,

ನಾಟಕ ವಿಮರ್ಶೆ

ಆಸೆ, ಆಕಾಂಕ್ಷೆಗಳನ್ನು ಮುದುಡಿರುವ ಕನಸುಗಳನ್ನು ಗಂಡಿನ ಬಗ್ಗೆ ತಳೆದಿದ್ದ ಸೇಡು ಜಿಗುಪ್ಸೆಗಳನ್ನು ಚಿಂತನೆಯ ಪಾತಾಳಗರಡಿಯಿಂದೆತ್ತಿ ತೋರಿಸುವ ಪ್ರಯತ್ನ ಈ 'ಅಗ್ನಿಪಥ'—' ಎಂದಿದ್ದರೂ ಈ ಹೆಣ್ಣುಗಳ ಬಗ್ಗೆ ಈವರೆಗೆ ಬಂದಿರುವ ಸಾಹಿತ್ಯ, ಹಾಗೂ ಸಮೂಹ ಮಾಧ್ಯಮಗಳ ದೃಶ್ಯ–ಶ್ರಾವ್ಯಗಳ 'ರೆಡಿ ಮೇಡ್' ಅನಿಸಿಕೆಗಳನ್ನೇ ಅನಾಮತ್ತಾಗಿ, ಅದೂ ಕೇವಲ ಘೋಷಣೆಗಳ ರೂಪದಲ್ಲಿ ಬಳಸಿರುವುದರಿಂದ ಇಲ್ಲಿ ಪಾತಾಳಗರಡಿಯ ಕೆಲಸವೇನೂ ಆಗಿಲ್ಲದಿರುವುದು ನಿರಾಸೆಯ ಸಂಗತಿ. ನಾಟಕದ ಭಾಷೆಯಂತೂ ತೀರಾ ಜಾಳಾಗಿರುವುದರಿಂದ ಒಟ್ಟು ನಾಟಕ ನೋಡುವ ಅನುಭವದಲ್ಲಿ ಯಾವ ತೀವ್ರತೆಯನ್ನೂ ಉಳಿಸುವುದಿಲ್ಲ.

ಗಾಂಧಾರಿಯ ಹಠ, ಕುಂತಿಯ ಅನಿಸಿಕೆಗಳು. ಮುಂತಾದುವನ್ನೆಲ್ಲಾ 'ಪರ್ವ' ಕಾದಂಬರಿ ಹಾಗೂ 'ಯುಗಾಂತ' ಗ್ರಂಥಗಳಿಂದ ಇಡಿ ಇಡಿಯಾಗಿ ತೆಗೆದುಕೊಂಡು (ಗ್ರಂಥಋಣವನ್ನೂ ಹೆಸರಿಸದೆ !) ಎರವಲು ರಚನೆಯಾಗಿಸುವುದರ ಬದಲು ಹೊಸ ಭಾವನೆ, ಹೊಸ

ಅಂಶಗಳತ್ತ ಗಮನ ಹರಿಸಿದ್ದರೆ ಇಷ್ಟೊಂದು ನಟ ನಟಿಯರ ಪರಿಶ್ರಮ ಸಾರ್ಥಕವಾಗುತ್ತಿತ್ತು. ಕುಂತಿ ಶೋಷಿತಳಾಗುವುದು ಕರ್ಣನಿಂದಲ್ಲ ದೂರ್ವಾಸನಿಂದ, ಪಾಂಡುವಿನಿಂದ! ದ್ರೌಪದಿಯ ವ್ಯಕ್ತಿತ್ವ ಮಿಂಚುವುದು, ಈಗಾಗಲೇ ಅಸಹ್ಯ ಬರುವಷ್ಟು ಸಮೂಹ ಮಾಧ್ಯಮಗಳಿಂದ ಪ್ರದರ್ಶಿತವಾಗಿರುವ ವಸ್ತ್ರಾಪಹರಣದ ಸಭೆ ಮತ್ತು ಅವಳು ಕೇಳುವ ಪ್ರಶ್ನೆಗಳಿಂದ ಅಲ್ಲ, ಅವಳ ವ್ಯಕ್ತಿತ್ವದ ಗಟ್ಟಿತನ ಇರುವುದು, ಕೃಷ್ಣ ಸಂಧಾನಕ್ಕೆ ಪ್ರಯತ್ನಿಸುತ್ತೇನೆ' ಎಂದಾಗ, ಕೃಷ್ಣ ಮತ್ತು ಪಾಂಡವರಿಗೆ ಅವಳು ಹೇಳುವ 'ನೀವೇನಾದರೂ ಸಂಧಾನವನ್ನೇ ಬಯಸುವಿರಾದರೆ ಅದು ನಿಮ್ಮಿಷ್ಟ. ಆದರೆ ನಾನು ಮಾತ್ರ ನನ್ನ ಮಕ್ಕಳನ್ನು ಕರೆದುಕೊಂಡಾದರೂ ಯುದ್ಧಮಾಡುತ್ತೇನೆ'— ಎನ್ನುವ ಮಾತುಗಳಲ್ಲಿ!! ಹೊಸ ನಾಟಕ ರಚನೆ ಮಾಡುವವರು ಇಂಥ ವಿಷಯಗಳ ಕಡೆಗೆ ಗಮನ ಹರಿಸುವುದು ತುಂಬಾ ಅವಶ್ಯಕ.

ಅಭಿನಯವೇ 'ಅಗ್ನಿಪಥ'ದ ಶ್ರೀರಕ್ಷೆಯಾಗಿ ಉಳಿಯುವುದು. ಗಾಂಧಾರಿಯಾಗಿ ಎಂ. ಎಸ್. ವಿದ್ಯಾ, ಅಂಬೆ ಮತ್ತು ದ್ರೌಪದಿಯಾಗಿ ಪದ್ಮಾವತಿರಾವ್, ಮಾದ್ರಿಯಾಗಿ ವಾಣಿ, ಧೃತರಾಷ್ಟ್ರನಾಗಿ ಶ್ರೀನಿವಾಸ ಮೇಸ್ತ್ರಿ, ವೆಂಕಟೇಶ್ ಮುಂತಾದವರ ಅಭಿನಯ ತುಂಬ ನೆನಪಿನಲ್ಲಿ ಉಳಿಯುವಂಥದ್ದು. ಹದಿನೇಳು ಜನರ ಹೆಜ್ಜೆ ಹಾಕುವಿಕೆಯ ಸಾಮೂಹಿಕತೆಯಲ್ಲೂ ಶರತ್‌ರವರ ಶೈಲಿ ಭಿನ್ನವಾಗಿ, ಸುಂದರ ಹಾಗೂ ಕಲಾತ್ಮಕವಾಗಿ ತೋರುತ್ತಿತ್ತು. ಕೆಲವು ಅಪವಾದಗಳೂ ಇಲ್ಲದಿಲ್ಲ, ಸಂಭಾಷಣೆಯನ್ನೂ ಹೆಜ್ಜೆಗಳನ್ನೂ ತಪ್ಪಿಸುತ್ತಿದ್ದ, ಪಾತ್ರದಲ್ಲಿ ತದಾತ್ಮ್ಯತೆ ಇಲ್ಲದ ನಟರೂ ಇದ್ದರು ಆದರೆ ಅಂಥವರ ಸಂಖ್ಯೆ ತೀರಾ ಗೌಣ. ಶ್ರೀಮತಿ ಜಯಶ್ರೀರವರೂ ಏಕತಾನತೆಯ ಅಭಿನಯಕ್ಕಿಂತ ನಿರ್ದೇಶನದ ಕಡೆಗೇ ಹೆಚ್ಚು ಗಮನ ಹರಿಸಿದರೆ ಇನ್ನೂ ಮಹತ್ವದನ್ನು ಸಾಧಿಸಬಹುದ . ಸಂಗೀತ ಮತ್ತು ಬೆಳಕು ನಿರ್ವಹಣೆ ಅಂತಹ ಯಶಸ್ಸನ್ನೇನೂ ಸಾಧಿಸಲಿಲ್ಲ.

— **ಶಾಂತಾ ನಾಗರಾಜ್**

Statement about Ownership and other particulars about Newspaper ACHALA
FORM IV (See Rule 8)

1 Place of publication	Bangalore, Karnataka state
2 Periodicity of its publication	Bi-Monthly
3 Printer's Name	Dr. G. Ramakrishna For Printswell, Bangalore
Whether citizen of India if foreigner, state the country of origin	Yes
Address	261, I Main Road, Vyalikaval, Bangalore-3
4 Publisher's name	Dr. G. Ramakrishna for Jagruthi Mahila Adhyayana Kendra, Bangalcre
Whether citizen of India if foreigner, state the countery of origin	Yes
Address	261, I Main Road, Vyalikaval, Bangalore-3

5 Editor's name	N. Gayathri
Wether citizen of India if foreigner, state the country of origin	Yes
Address	261, I Main Road Vyalikaval Bangalore-3
6 Name and Address of individuals Who own the News paper or Shareholders holding more than one percent of the total captital	G. Ramakrishna 261 Vyalikaval, Bangalore-3

I, Dr. G. Ramakrishna, here by declare that the particulars given above are true to the best of my knowledge and belief.

BANGALORE (sd.) Dr. G. Ramakrishna
Date: 1-3-1993 Signature of the publisher

ಕಾನೂನು ಸಲಹೆ

— ಶ್ರೀಮತಿ ಹೇಮಲತಾ ಮಹಿಷಿ

ದತ್ತು ಸ್ವೀಕಾರ – ಕೆಲವು ಪ್ರಶ್ನೆಗಳು

1) ಭಾರತೀಯ ಮಹಿಳೆ ವಿವಾಹಿತಳಿರಲಿ/ವಿವಾಹಿತ ಳಿಲ್ಲದಿರಲಿ ದತ್ತು ತೆಗೆದುಕೊಳ್ಳಲು ಹೊಂದಿರುವ ಹಕ್ಕುಗಳೇನು ಎಂಬುದನ್ನು ವಿವಿಧ ಮತೀಯ ಕಾನೂನುಗಳ ಹಿನ್ನೆಲೆಯಲ್ಲಿ ತಿಳಿಸಿ.

2) ಇಬ್ಬರು ಮಕ್ಕಳನ್ನು ಒಟ್ಟಿಗೆ ದತ್ತು ತೆಗೆದುಕೊಳ್ಳಲು ಸಾಧ್ಯವಿಲ್ಲವೇ ?
ಒಂದು ಮಗುವಿನ ಹೆತ್ತ ತಂದೆ ತಾಯಿಗಳು ಆ ಮಗುವಿಗೆ ಜೊತೆಗಿರಲೆಂದು ಮತ್ತೊಂದು ಮಗುವನ್ನು ದತ್ತು ತೆಗೆದುಕೊಳ್ಳಬೇಕೆಂದುಕೊಂಡರೆ ಅದಕ್ಕೆ ಕಾನೂನಿನ ಅನುಕೂಲಗಳೇನು ?

1) ಭಾರತದಲ್ಲಿ ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಪರಿಕಲ್ಪನೆ ಇರುವುದು ಹಿಂದೂ ಕಾನೂನಿನಲ್ಲಿ ಮಾತ್ರ. ಆದ್ದರಿಂದ ಬೇರೆ ಮತೀಯರು ಮಕ್ಕಳನ್ನು ದತ್ತು ತೆಗೆದುಕೊಳ್ಳಲು ಸಾಧ್ಯವಿಲ್ಲ.

1956ರಲ್ಲಿ ಹಿಂದೂ ದತ್ತಕ ಅಧಿನಿಯಮ ಜಾರಿಗೆ ಬರುವವರೆಗೆ ಗಂಡು ಮಕ್ಕಳನ್ನು ಮಾತ್ರ ದತ್ತು ತೆಗೆದುಕೊಳ್ಳಲು ಅವಕಾಶವಿತ್ತು. 1956ರ ನಂತರ ಹೆಣ್ಣು ಮಕ್ಕಳನ್ನು ದತ್ತು ತೆಗೆದುಕೊಳ್ಳಬಹುದಾಗಿದೆ.

1956ರ ಅಧಿನಿಯಮದ ಮುಖ್ಯ ಅಂಶವೆಂದರೆ, ಈಗ ಮಹಿಳೆ, ಅವಿವಾಹಿತಳಿರಲಿ. ವಿಧವೆ ಇರಲಿ, ವಿಚ್ಛೇದನ ಪಡೆದವಳಾಗಿರಲಿ, ತನ್ನ ಹೆಸರಿನಲ್ಲಿಯೇ ಮಗುವನ್ನು ದತ್ತು ತೆಗೆದುಕೊಳ್ಳಬಹುದಾಗಿದೆ. ವಿವಾಹಿತಳಾಗಿದ್ದಲ್ಲಿ ಅವಳ ಒಪ್ಪಿಗೆಯಿಂದ ಪತಿ ದತ್ತು ತೆಗೆದುಕೊಳ್ಳಬೇಕಾಗುತ್ತದೆ. ಆದರೆ, ಪತಿ ಸನ್ಯಾಸಿಯಾದಲ್ಲಿ, ಹಿಂದೂ ಧರ್ಮದಿಂದ ಬೇರೆ ಧರ್ಮಕ್ಕೆ ಮತಾಂತರ ಹೊಂದಿದಲ್ಲಿ, ನ್ಯಾಯಾಲಯವು ಅವನನ್ನು ಬುದ್ಧಿ ಸ್ಥಿಮಿತದಲ್ಲಿಲ್ಲದ ವ್ಯಕ್ತಿಯೆಂದು ಘೋಷಿಸಿದಲ್ಲಿ ಆಗ ವಿವಾಹಿತ ಮಹಿಳೆಯು ತಾನೇ ದತ್ತು ತೆಗೆದುಕೊಳ್ಳಬಹುದು. ಉಳಿದಂತೆ ಸಾಧ್ಯವಿಲ್ಲ.

2) ದತ್ತು ತೆಗೆದುಕೊಳ್ಳುವಾಗ ಕೆಲವೊಂದು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಮಕ್ಕಳಿಲ್ಲದ ದಂಪತಿಗಳು ಅಥವಾ ವ್ಯಕ್ತಿಗಳು ಒಟ್ಟಿಗೇ ಒಂದು ಗಂಡು ಹಾಗೂ ಒಂದು ಹೆಣ್ಣು ಮಗುವನ್ನು ದತ್ತು ತೆಗೆದುಕೊಳ್ಳಬಹುದು. ಆದರೆ ಒಂದು ಗಂಡು ಮಗು ಈಗಾಗಲೇ ಇದ್ದಲ್ಲಿ (ಸ್ವಾಭಾವಿಕವಾದ ಮಗುವಿರಬಹುದು ಅಥವಾ ದತ್ತು ತೆಗೆದುಕೊಂಡ ಮಗನಿರಬಹುದು) ಇನ್ನೊಂದು ಗಂಡು ಮಗುವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಅದೇ ರೀತಿ, ಒಂದು ಹೆಣ್ಣು ಮಗು ಈಗಾಗಲೇ ಇದ್ದಲ್ಲಿ, ಇನ್ನೊಂದು ಹೆಣ್ಣು ಮಗುವನ್ನು ದತ್ತು ತೆಗೆದುಕೊಳ್ಳಲು ಸಾಧ್ಯವಿಲ್ಲ.

ಖಂಡನೆ

ಕುಷ್ಟಗಿಯಲ್ಲಿ ಅಂಗನವಾಡಿ ಕಾರ್ಯಕರ್ತೆ ಶರಣಮ್ಮನ ಮೇಲೆ ನಾಲ್ವರು ಸರ್ಕಾರಿ ಅಧಿಕಾರಿಗಳು ಸೇರಿ ನಡೆಸಿದ ಗುಂಪು ಅತ್ಯಾಚಾರ ಮತ್ತು ಕೊಲೆ ಅತ್ಯಂತ ಅಮಾನವೀಯ ಕೃತ್ಯವಾಗಿದೆ. ಸರ್ಕಾರಿ ಅಧಿಕಾರಿಗಳಿಂದ ನಡೆದಿರುವ ಈ ಕೃತ್ಯದ ಅಪರಾಧಿಗಳನ್ನು ಕೂಡಲೆ ಬಂಧಿಸಿ ಉಗ್ರ ಕ್ರಮ ಕೈಗೊಳ್ಳಬೇಕಾದುದು ತುರ್ತಿನ ಕ್ರಮವಾಗಿದೆ. ಅದರ ಬದಲು ಈ ಪ್ರಕರಣವನ್ನು ಮುಚ್ಚಿಹಾಕಲು ಸೃಷ್ಟಿಸಲಾಗುತ್ತಿರುವ ಸುಳ್ಳು ದಾಖಲೆಗಳು ಸರಕಾರದ ಬೇಜವಾಬ್ದಾರಿತನವನ್ನು ಮತ್ತು ಪಾತ್ರವನ್ನು ಹೆಚ್ಚು ದೃಢೀಕರಿಸುತ್ತದೆ.

ಆದ್ದರಿಂದ ಈ ಪ್ರಸಂಗದಲ್ಲಿ ಆರೋಪಿಗಳಾದ ಸರಕಾರೀ ಅಧಿಕಾರಿಗಳನ್ನು ಕೂಡಲೇ ಬಂಧಿಸಿ ಉಗ್ರವಾಗಿ ಶಿಕ್ಷಿಸಬೇಕೆಂದು 'ಜಾಗೃತಿ' ಒತ್ತಾಯಿಸುತ್ತದೆ.

3ನೇ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ

—ಒಂದು ವರದಿ

ಇದೇ ಮಾರ್ಚ್ ತಿಂಗಳ ಆರು ಏಳನೇ ತಾರೀಖು ಗಳಂದು ಧಾರವಾಡದಲ್ಲಿ ಜರುಗಿದ ಮೂರನೇ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನವು ಹಲವಾರು ಅರ್ಥದಲ್ಲಿ ಎಚ್ಚೆತ್ತ ಮಹಿಳಾ ಪ್ರಜ್ಞೆಯ ಪ್ರತೀಕ ದಂತಿತ್ತು. ಅದರ ಕೆಲವು ಮುಖ್ಯ ಸಂದರ್ಭಗಳಿವು.

* ಪ್ರಸ್ತಾವನೆಯಲ್ಲಿ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಶ್ರೀಮತಿ ಹೇಮಲತಾ ಮಹಿಷಿ ಮಹಿಳೆಯರು ಒಗ್ಗೂಡುವುದು, ಅವರ ಕೂಟಗಳಿಗೆ ಗಂಭೀರ ಧ್ಯೇಯೋದ್ದೇಶಗಳಿರುವುದು ಅಸಾಧ್ಯವೆಂದು ಗೇಲಿ ಮಾಡುವವರಿಗೆ ದಿಟ್ಟ ಉತ್ತರ ನೀಡಿ ತಮ್ಮ ಸಂಘದ ಸಾಧನೆಗಳನ್ನು ಮಹಿಳಾ ಸಂಘಟನೆ ಬಲಗೊಳ್ಳುತ್ತಿರುವುದರ ಸಂಕೇತ ವೆಂದು ಸಮರ್ಥಿಸಿಕೊಂಡರು. ಉದ್ಘಾಟನೆಯ ಸಂದರ್ಭಕ್ಕಾಗಿ ಮುಖ್ಯಮಂತ್ರಿ ಮೊಯಿಲಿಯವರು ಬರೆದು ಕಳುಹಿಸಿದ್ದ ಭಾಷಣದಲ್ಲಿ ಸ್ತ್ರೀ–ಪುರುಷ ಸಾಹಿತ್ಯ ಗಳನ್ನು ಪ್ರತ್ಯೇಕಿಸಿ ಪರಿಗಣಿಸುವುದು ಅನಗತ್ಯವೆಂದು ಸೂಚಿಸಿದ್ದರು.

"ಲೇಖಕಿ" ವಿಶೇಷ ಸಂಚಿಕೆ ಬಿಡುಗಡೆ ಮಾಡಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಶ್ರೀ ಬರಗೂರು ರಾಮಚಂದ್ರಪ್ಪನವರು ಮೊಯಿಲಿ ಎತ್ತಿದ್ದ ಪ್ರತ್ಯೇಕತೆ ಕುರಿತ ಸಂಶಯವನ್ನೂ ಹೇಮಲತಾ ಅವರು ನೀಡಿದ್ದ ಸ್ವಸಮರ್ಥನೆಯನ್ನೂ ವಿಚಾರಕ್ಕೆ ಎತ್ತಿಕೊಂಡು ಸಾಂಸ್ಕೃತಿಕವಾಗಿ ಸ್ತ್ರೀಯರು ಪುರುಷರೆಂದು ವಿಭಜಿಸಲ್ಪಟ್ಟಿರುವ ಸಮಾಜದಲ್ಲಿ ಪ್ರತ್ಯೇಕ ನೆಲೆಗಳನ್ನು ಗುರುತಿಸಿಕೊಳ್ಳುವುದು, ಸಮರ್ಥಿಸಿಕೊಳ್ಳುವುದು ಅನಿವಾರ್ಯ ವೆಂದು ವಿಶ್ಲೇಷಿಸಿದರು. ದಲಿತ, ಬಂಡಾಯ ಚಳವಳಿ ಗಳಂತೆ ಮಹಿಳಾ ಚಳವಳಿಯೂ ಸಾಂಸ್ಕೃತಿಕವಾಗಿ ಮಹತ್ವದ್ದೆಂಬುದನ್ನು ಸ್ಪಷ್ಟಪಡಿಸಿದ ಅವರು ಮಹಿಳೆಯರ ಸಂವೇದನೆಗಳ ಮೇಲೆ ಆವರಿಸಿರುವ ಪುರುಷ ಪ್ರಾಧಾನ್ಯದ ಪೊರೆ ಕಳಚಿ ಹೊಸ ಸಾಹಿತ್ಯ ಕೃತಿಗಳ ಪರಂಪರೆ ಬರಬೇಕಾಗಿದೆ. ಸ್ತ್ರೀಯರು—ಪುರುಷರೂ ಒಟ್ಟಾಗಿಯೇ ಎದುರಿಸಬೇಕಾಗಿರುವ ಸಾಮಾಜಿಕ ಸಂಕಷ್ಟಗಳ ನಿವಾರಣೆಗೆ ಪ್ರೇರಣೆ ನೀಡಬಲ್ಲ, ಸಾಮಾಜಿಕ ವಿಪ್ಲವಗಳಿಗೆ ನಾಂದಿ ಹಾಡಬಲ್ಲ ಕೃತಿಗಳನ್ನು ಲೇಖಕಿಯರು ರಚಿಸಬೇಕೆಂದು ಕರೆಯಿತ್ತರು.

* ಸಮ್ಮೇಳನಾಧ್ಯಕ್ಷೆ ಹಿರಿಯ ಸಾಹಿತಿ ಶ್ರೀಮತಿ ಶಾಂತಾದೇವಿ ಮಾಳವಾಡರವರು ದೀರ್ಘವಾದ ವಿವರಗಳಲ್ಲಿ ನಾಡಿನ ಮಹಿಳೆಯರ ಚಾರಿತ್ರಿಕ ವಾಸ್ತವಾಂಶ ಗಳನ್ನು ಚಿತ್ರಿಸಿ, ಸ್ತ್ರೀ–ಪುರುಷರ ಸಾಮರಸ್ಯ, ಪುರುಷರ ಮನಃ ಪರಿವರ್ತನೆ, ಸ್ತ್ರೀ ಸಾಹಿತಿಗಳಲ್ಲಿ ಸಾಮಾಜಿಕ ಅರಿವು ಹೆಚ್ಚಬೇಕಾಗಿರುವುದನ್ನು ಸೂಚಿಸಿ, ಮಹಿಳಾ ಚಳುವಳಿಗಳು ಪಾಶ್ಚಾತ್ಯ ವಿಚಾರಗಳ ಅನುಕರಣೆಯಾಗದೆ ಈ ನೆಲದ ಸಮಸ್ಯೆಗಳ ನಿವಾರಣೆಯ ಅಗತ್ಯ ಮನಗಂಡು ಬೆಳೆಯಲೆಂದು ಆಶಿಸಿದರು.

* ಮೊದಲ ದಿನ ಮಧ್ಯಾಹ್ನ ನಡೆದ ವಿಚಾರಗೋಷ್ಠಿಯಲ್ಲಿ ಮಹಿಳೆಯ ಬಿಡುಗಡೆಯ ಸ್ವರೂಪ ಮತ್ತೆ ಚರ್ಚೆಗೆ ಬಂತು. ಡಾ. ಕೆ. ಎಲ್. ಗೋಪಾಲಕೃಷ್ಣಯ್ಯ ಸಾಮಾಜಿಕ, ಸಾಂಸ್ಕೃತಿಕ ಬಿಡುಗಡೆಗೆ ಒತ್ತುಕೊಟ್ಟು ಮಹಿಳೆಯರ ಕೃತಿಗಳಲ್ಲಿ ಆ ಬಿಡುಗಡೆಯ ಆಶಯ ಪ್ರಕಟವಾಗಿರುವ ಬಗೆಯನ್ನು ಉದಾಹರಿಸಿ, ವ್ಯಾಖ್ಯಾನಿಸಿದರು. "ಸಾಮಾಜಿಕ ಸಮಸ್ಯೆಗಳ ಅರಿವನ್ನೂ" ಮಹಿಳಾ ಸಾಹಿತ್ಯದಲ್ಲಿ ಗುರುತಿಸಿದ ಡಾ. ಶಾಲಿನಿ ರಘುನಾಥ್ ಅವರು ವಚನ ಸಾಹಿತ್ಯದ ನಂತರ ಬಂಡಾಯ ಚಳವಳಿಯ ನಂತರದ ಮಹಿಳಾ ಸಾಹಿತ್ಯದಲ್ಲಿ ಸಾಮಾಜಿಕ ಎಚ್ಚರ ತೀವ್ರವಾಗಿರುವುದರತ್ತ ಸೂಚನೆ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಖ್ಯಾತ ಲೇಖಕಿ ಶ್ರೀಮತಿ ಎಚ್. ಎಸ್. ಪಾರ್ವತಿಯವರು ಮಹಿಳೆಯ ಬಿಡುಗಡೆ ಕೇವಲ ಲೈಂಗಿಕ ನೆಲೆಯದಲ್ಲ, ಪುರುಷ ಪ್ರಧಾನ ಚಿಂತನಾ ವಿಧಾನದಿಂದ ಆಕೆ ತನ್ನನ್ನು ಬಿಡುಗಡೆ ಮಾಡಿಕೊಳ್ಳಬೇಕು, ಸತೀತ್ವ, ಮಾತೃತ್ವಗಳ ವೈಭವೀಕರಣದಲ್ಲಿ ತಲ್ಲೀನರಾಗಿ ಉಳಿಯದೆ ಸ್ವಂತಿಕೆಯ ಕ್ರಿಯಾಶೀಲ ಬದುಕುಗಳನ್ನು ರೂಪಿಸಿಕೊಳ್ಳಬೇಕು ಎಂದರು.

* ಮೊದಲ ದಿನ ಸಂಜೆ ಬನಶಂಕರಿ ಕಲಾ ಮಂಟಪದ ಸಭಾಂಗಣದೊಳಗೆ ಸ್ತ್ರೀ–ಪುರುಷ ಸಾಹಿತಿಗಳು ಕಲೆತು

ನಡೆಸಿದ 'ಸಾಹಿತ್ಯ ಸಂವಾದ' ಲೇಖಕಿಯರ ಸಮ್ಮೇಳನಗಳ ದೃಷ್ಟಿಯಿಂದ ಮೊದಲ ಪ್ರಯೋಗವಾಗಿತ್ತು. ಪ್ರೊ. ಚಂದ್ರಶೇಖರ ಪಾಟೀಲ, ಡಾ. ಕಮಲಾ ಹಂಪನಾ, ಡಾ. ವಿಜಯಾ ದಬ್ಬೆ, ಡಾ. ಗುರುಲಿಂಗ ಕಾಪಸೆ ಮತ್ತು ಡಾ. ಬಿ. ಎನ್. ಸುಮಿತ್ರಾಬಾಯಿ ಇವರುಗಳು ಲೇಖಕಿಯರ ಸಂಘದವರು ಸೂಚಿಸಿದ ಪ್ರಶ್ನಾವಳಿಗೆ ನೀಡಿದ ಪ್ರತಿಕ್ರಿಯೆ ಸಮಕಾಲೀನ ವಿಮರ್ಶಾಧೋರಣೆಗಳು, ಕೃತಿನಿಷ್ಠತೆ, ಪ್ರತ್ಯೇಕೀಕರಣ, ಸಮೂಹ ಮಾಧ್ಯಮಗಳ ಪಾತ್ರಗಳನ್ನು ಕುರಿತಂತೆ ಅರ್ಥಪೂರ್ಣ ಜಿಜ್ಞಾಸೆಗೆ ಪ್ರೇರಣೆ ನೀಡಿದವು.

* ಎರಡನೆಯ ದಿನದ ಮೊದಲ ವಿಚಾರಗೋಷ್ಠಿ ಮುಖ್ಯವಾಗಿ ಸ್ತ್ರೀವಾದಕ್ಕೆ ಮೀಸಲಾಗಿತ್ತು. ಶ್ರೀ ಶ್ಯಾಮಸುಂದರಬಿದರಕುಂದಿ 'ಕನ್ನಡ ಮಹಿಳಾ ಸಾಹಿತ್ಯ ಪರಂಪರೆಯಲ್ಲಿ ಸ್ತ್ರೀಧ್ವನಿ'ಯನ್ನು ಗುರುತಿಸಲೆತ್ನಿಸಿದರೆ ಶ್ರೀಮತಿ ಗಾಯಿತ್ರಿ ನಾವಡ ಅವರು 'ಸ್ತ್ರೀವಾದದ ಸಾಂಸ್ಕೃತಿಕ ನೆಲೆ'ಗಳನ್ನು ಕುರಿತು ಚೊಕ್ಕವಾದ ಪ್ರಬಂಧ ಮಂಡನೆ ಮಾಡಿದರು. ಸಮ್ಮೇಳನದ ಆರಂಭದಿಂದ ನಡೆದಿದ್ದ ಹಲವು ಬಗೆಯ ಚರ್ಚೆಗಳ ಹಿನ್ನೆಲೆಯಲ್ಲಿ ಈ ಗೋಷ್ಠಿಯ ಅಧ್ಯಕ್ಷೆ ಡಾ. ವಿಜಯಾ ದಬ್ಬೆಯವರು ಲೇಖಕ/ಕಿ ಎಂಬ ವ್ಯಾಕರಣ ವ್ಯತ್ಯಾಸ ಮಾತ್ರವೇ ಉಳಿದು ಇಂಥ ಸಮ್ಮೇಳನಗಳು ಪುರುಷ ಪರಂಪರೆಯ ಸಮ್ಮೇಳನಗಳ ಅನುಕರಣೆ ಆಗಿ ಬಿಡುವ ಅಪಾಯದ ಧ್ವನಿ ಎತ್ತಿದರು.

* ಆ ಸಂಜೆ ನಡೆದ ಕವಿಗೋಷ್ಠಿಯನ್ನು ಕವಯಿತ್ರಿ ಉಷಾ ಅವರ ಅಧ್ಯಕ್ಷತೆಯಲ್ಲಿ ಮತ್ತೊಬ್ಬ ಕವಯಿತ್ರಿ ಹೇಮಾ ಪಟ್ಟಣಶೆಟ್ಟಿಯವರು ನಿರ್ವಹಿಸಿದರು. ಸುಮಾರು ಇಪ್ಪತ್ತೈದು ಕವಯಿತ್ರಿಯರು 'ಸೌಹಾರ್ದತೆ'ಯ ವಸ್ತುವುಳ್ಳ ತಮ್ಮ ಕವನಗಳನ್ನು ವಾಚಿಸಿ, ಹಾಡಿ, ಕಿಕ್ಕಿರಿದು ನೆರೆದಿದ್ದ ಧಾರವಾಡದ ಸ್ತ್ರೀ-ಪುರುಷ ಶ್ರೋತೃಗಳನ್ನು ರಂಜಿಸಿದರು. ಶ್ರೀಮತಿ ವೈದೇಹಿಯವರ ಕವನ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

* ಎರಡನೇ ದಿನದ ಕೊನೆಗೆ ನಡೆದ ಸಮಾರೋಪ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಸಾಧನೆಗಳನ್ನು ಗುರುತಿಸುವ ಸಂಕೇತವಾಗಿ ಪ್ರಸಿದ್ಧ ಗಾಯಕಿ ಶ್ರೀಮತಿ ಗಂಗೂಬಾಯಿ ಹಾನಗಲ್, ಪತ್ರಕರ್ತೆ ಶ್ರೀಮತಿ ಸುಶೀಲಾ ಕೊಪ್ಪರ, ಶಿಕ್ಷಣ ತಜ್ಞೆ, ಚಿಂತಕಿ ಡಾ. ಸರೋಜಿನಿ ಶಿಂತ್ರಿ ಮತ್ತು ಲೇಖಕಿ ಶ್ರೀಮತಿ ನೀಳಾದೇವಿಯವರನ್ನು ಸನ್ಮಾನಿಸಲಾಯಿತು.

ಸಮಾರೋಪ ಭಾಷಣ ಮಾಡಿದ ಖ್ಯಾತ ಬಂಡಾಯ ಲೇಖಕಿ ಸಾರಾ ಅಬೂಬಕ್ಕರ್ ಹಿಂದೂ-ಮುಸ್ಲಿಂ ಭಾವೈಕ್ಯತೆ ರಾಜಕೀಯ ಘೋಷಣೆಯಾದರೆ ಸಾಲದು, ಸಾಂಸ್ಕೃತಿಕ ಕೊಡು-ಕೊಳ್ಳುವಿಕೆ ಹೆಚ್ಚಾದಾಗ ನಿಜವಾದ ಸಾಮರಸ್ಯ ಬೆಳೆಯಬಲ್ಲದೆಂದು ತಿಳಿಸಿ, ಮುಸ್ಲಿಂ ಮಹಿಳೆಯರ ಅನುಭವಗಳಿಗೆ ತಾವು ಮೊದಲಬಾರಿಗೆ ಅಭಿವ್ಯಕ್ತಿ ನೀಡಿದ್ದು ಸಮಕಾಲೀನ ಸಾಹಿತ್ಯದಲ್ಲಿ ಒಂದು ಅವಶ್ಯಕತೆಯಾಗಿ ಸ್ವೀಕೃತವಾದುದನ್ನು ಉದಾಹರಿಸಿದರು. ಅಧ್ಯಕ್ಷತೆ ನೆಲೆಯಿಂದ ಹಿರಿಯ ಲೇಖಕಿ ಟಿ. ಸುನಂದಮ್ಮ ತಮ್ಮದು ಹಿಂದು-ಮುಂದಿಲ್ಲದ ದಾರಿ, ವಿಮರ್ಶಾತೀತ ಲೇಖಕಿ ತಾವೆಂದು ವ್ಯಾಖ್ಯಾನಿಸಿ ಎಲ್ಲರನ್ನೂ ನಗಿಸಿದರು. ಮೊದಲ ಬಾರಿಗೆ ಉತ್ತರ ಕರ್ನಾಟಕದ ಮಹಿಳೆಯರು ಬಹುಸಂಖ್ಯೆಯಲ್ಲಿ ಪಾಲ್ಗೊಂಡಿದ್ದು ಈ ಸಮ್ಮೇಳನದ ಹಿರಿಯ ಸಾಧನೆಯಾಗಿತ್ತು. ಏಳನೆಯ ತಾರೀಖು ಈ ಸಮ್ಮೇಳನ ನಡೆಸಿದ ಬಹಿರಂಗ ಅಧಿವೇಶನದಲ್ಲಿ ಕರ್ನಾಟಕ ಲೇಖಕಿಯರ ಸಂಘವು ಹಲವಾರು ಪ್ರಮುಖ ನಿರ್ಣಯಗಳನ್ನು ಕೈಗೊಂಡಿತು.

1) ರಾಯಚೂರಿನ ಕುಷ್ಟಗಿಯಲ್ಲಿ ಅಂಗನವಾಡಿ ಕಾರ್ಯಕರ್ತೆ ಶರಣವ್ವನ ಮೇಲೆ ನಡೆದ ಅತ್ಯಾಚಾರವನ್ನು ಮೂರನೆಯ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ ಉಗ್ರವಾಗಿ ಖಂಡಿಸಿತು. ಈ ಪ್ರಕರಣದಲ್ಲಿ ಒಳಗಾಗಿರುವ ಅಪರಾಧಿಗಳನ್ನು ಕೂಡಲೇ ಉಗ್ರವಾಗಿ ಶಿಕ್ಷಿಸಬೇಕೆಂದು ಸಮ್ಮೇಳನ ಒತ್ತಾಯಿಸಿತು.

2) ದೇಶದಲ್ಲಿ ನಡೆದಿರುವ ಕೋಮು ಗಲಭೆಗಳ ಹಿನ್ನೆಲೆಯಲ್ಲಿ ಎಲ್ಲಾ ಧರ್ಮಗಳ ಕೋಮುವಾದವನ್ನು ಕರ್ನಾಟಕ ಲೇಖಕಿಯರ ಸಂಘವು ಖಂಡಿಸುತ್ತಲೇ ದೇಶದ ಉಳಿವಿಗೆ ಮತ್ತು ಪ್ರಗತಿಗೆ ಧರ್ಮ ಖಾಸಗೀಕರಣಕ್ಕೊಳಗಾಗಬೇಕೆಂಬುದನ್ನು ಒತ್ತಾಯಿಸಿತು. ಇದೇ ಸಂದರ್ಭದಲ್ಲಿ ಭಾರತದ ಎಲ್ಲಾ ಮಹಿಳೆಯರಿಗೂ ಅನುಕೂಲವಾಗುವಂತೆ ಏಕರೂಪದ ಸಿವಿಲ್ ಸಂಹಿತೆಯು ಜಾರಿಯಾಗಬೇಕೆಂದು ಸಮ್ಮೇಳನ ಒತ್ತಾಯಿಸಿತು.

3) ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲು ಮಹಿಳೆಯರಿಗಾಗಿ ಮೀಸಲು ಕ್ಷೇತ್ರವನ್ನು ಶಾಸನ ಸಭೆಯ ಚುನಾವಣೆಗಳಲ್ಲಿ ಮತ್ತು ಪಾರ್ಲಿಮೆಂಟಿನ ಚುನಾವಣೆಗಳಲ್ಲಿ ಸರ್ಕಾರ ಘೋಷಿಸಬೇಕು. ರಾಜಕೀಯ ಪಕ್ಷಗಳೂ ಕೂಡ ಮಹಿಳಾ ಅಭ್ಯರ್ಥಿಗಳಿಗಾಗಿ ಕನಿಷ್ಠ 30 ಶೇಕಡ ಸ್ಥಾನ ಮೀಸಲಿಡಬೇಕು.

4) ಹೆಣ್ಣಿನ ಅಸ್ತಿತ್ವಕ್ಕೆ ಧಕ್ಕೆ ತಂದಿರುವ ಮತ್ತು ಹೆಣ್ಣಿನ ಘನತೆಗೆ ಅಪಮಾನ ಮಾಡುವ ಸ್ತ್ರೀ ಭ್ರೂಣ ಹತ್ಯೆಯ ವಿರುದ್ಧ ಶಾಸನವಾಗಬೇಕಾದದ್ದು ಅತ್ಯಗತ್ಯ. ನೆರೆಯ ರಾಜ್ಯವಾದ ಮಹಾರಾಷ್ಟ್ರ ಸರ್ಕಾರ ತನ್ನ ರಾಜ್ಯದಲ್ಲಿ ಅಮ್ನಿಯೋಸಿಂಥಿಸಿಸ್ ಪರೀಕ್ಷೆಯನ್ನು ಬಹಿಷ್ಕರಿಸಿರುವಂತೆ ಕರ್ನಾಟಕ ಸರ್ಕಾರವೂ ಕೂಡಲೇ ಶಾಸನವನ್ನು ಮಾಡಿ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.

5) ಸರ್ಕಾರದಿಂದ ಹಾಗೂ ಸಾರ್ವಜನಿಕ ಸಂಘ ಸಂಸ್ಥೆಗಳಿಂದ ನಡೆಯುತ್ತಿರುವ ಮಹಿಳಾ ಸಾಕ್ಷರತಾ ಕಾರ್ಯಕ್ರಮಗಳಿಗೆ ಸರ್ಕಾರ ಪ್ರಥಮ ಆದ್ಯತೆ ಕೊಡಬೇಕೆಂದು ಸಮ್ಮೇಳನ ಒತ್ತಾಯಿಸಿತು.

ಹೊಸ ಪುಸ್ತಕಗಳು

ಅಸ್ಪೃಶ್ಯರು :–

ಲೇ. ವೈದೇಹಿ ಬೆಲೆ. 25 ವೈದೇಹಿಯವರ ಮೊದಲ ಕಾದಂಬರಿ ಇದು. 1982ರ ಯುಗಾದಿ ಕಾದಂಬರಿ ಸ್ಪರ್ಧೆಯಲ್ಲಿ ವಿಶೇಷ ಬಹುಮಾನ ನೀಡಿ ಧಾರಾವಾಹಿಯಾಗಿ 'ಸುಧಾ' ವಾರ ಪತ್ರಿಕೆಯಲ್ಲಿ ಈ ಕಾದಂಬರಿ ಮೊದಲು ಪ್ರಕಟವಾಗಿದೆ. ಈ ಕಾದಂಬರಿಯಲ್ಲಿ ಭಾಸ್ಕರನೆಂಬ ಹೊಸ ವಿಚಾರದ ಯುವಕ ಸಂಪ್ರದಾಯದ ಚಿಪ್ಪಿನಿಂದ ಹೊರಬಂದು ಕೊರಗರ ಹೆಣ್ಣೊಂದನ್ನು ಮದುವೆಯಾಗಿ ಸಮಾಜವನ್ನು ಎದುರಿಸುವ ಹಾಗೂ ಸುತ್ತಲಿನ ಸಮಾಜವನ್ನು ಪ್ರಭಾವಿಸುವ ವಸ್ತುವನ್ನೊಳಗೊಳ್ಳ ಕೃತಿ.

ಮೌನಕ್ರಾಂತಿ :–

ಲೇ. ದು. ನಿಂ. ಬೆಳಗಲಿ. ಬೆಲೆ 28. ದು. ನಿಂ. ಬೆಳಗಲಿಯವರ ಈ ಕಾದಂಬರಿಯು 'ಕೇಸರಿ ಗರ್ಜನೆ'ಯ ಧಾರಾವಾಹಿಯಾಗಿ ಹರಿದು ಬಂದಿದೆ. ಇಲ್ಲಿ ಭಾರತದ ಸಂಸ್ಕೃತಿಯ ಎಲ್ಲ ವಿವರಗಳಲ್ಲೂ ಪ್ರತಿನಿಧಿಯಾಗುವ ಹಳ್ಳಿ ಕಾಳಗಿ ಶಿವಶಂಕರನೆಂಬ ಹೊಸ ವಿಚಾರದ ಯುವಕ ಓದು ಮುಗಿಸಿ ಹಳ್ಳಿಗೆ ಬರುತ್ತಾನೆ. ಆತನಿಗೆ ಮದುವೆಯೂ ಆಗುತ್ತದೆ. ಕೆಲವು ದಿನ ನಿರುದ್ಯೋಗಿಯಾಗಿ ಹಳ್ಳಿಯಲ್ಲಿರಬೇಕಾದ ಅನಿವಾರ್ಯತೆ ಆತನಿಗೆ ಉಂಟಾಗುತ್ತದೆ. ಆತನ ವಿಚಾರಗಳಿಗೂ ಪಟ್ಟಭದ್ರ ಶಕ್ತಿಗಳಿಗೂ ಘರ್ಷಣೆ ಉಂಟಾಗುತ್ತದೆ. ಆ ಹಳ್ಳಿಯಲ್ಲಿ ಆತನಂತೆ ಆಲೋಚಿಸುವ ಮಂದಿ ಊರಿನ ಮತ್ತೆ ಕೆಲವರು ಆತನ ಬೆನ್ನಿಗೆ ನಿಲ್ಲುತ್ತಾರೆ. ಮೌನಕ್ರಾಂತಿಗೆ ನಾಂದಿಯಾಗುತ್ತದೆ.

ಅಕ್ರಮ ಸಂತಾನ :–

ಲೇ. ಶರಣ ಕುಮಾರ ಲಿಂಬಾಲೆ. ಬೆಲೆ 25. ಶರಣಕುಮಾರ್ ಲಿಂಬಾಲೆಯವರ ಮರಾಠಿ ಕೃತಿ ಅಕ್ಕರಮಾಶಿಯ ಕನ್ನಡ ಅನುವಾದ ಇದು. ಈ ಕನ್ನಡ ಅನುವಾದವನ್ನು ಶ್ರೀಯುತ ದು. ನಿಂ. ಬೆಳಗಲಿಯವರು ಮಾಡಿಕೊಟ್ಟಿದ್ದಾರೆ. ಈ ಕೃತಿ 'ಸುದ್ದಿ ಸಂಗಾತಿ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಂದಿದೆ. ಮರಾಠಿ ಲೇಖಕ ಶ್ರೀ ಶರಣಕುಮಾರ ಲಿಂಬಾಳೆಯವರ ಆತ್ಮಕಥನವಾದ ಇದನ್ನು ಶ್ರೀಯುತ ಬೆಳಗಲಿಯವರು ಸಮರ್ಪಕವಾಗಿ ಕನ್ನಡಕ್ಕೆ ತಂದಿದ್ದಾರೆ.

(೨ನೇ ಪುಟದಿಂದ)

ಇವರನ್ನು ಇವರ ನಿಷ್ಠೆಗಳನ್ನು ಸ್ತ್ರೀ ಸಂಘಟನೆಯತ್ತ ಬದಲಿಸುವುದಕ್ಕೆ ಕೇವಲ ಭಾಷಣ, ಚರ್ಚೆಗಳಿಗಿಂತ ಭಿನ್ನವಾದ ಸಂಘಟನಾ ತಂತ್ರಗಳು ಅವಶ್ಯಕವಾಗಿವೆ. ಅಂಥ ತಂತ್ರಗಳನ್ನು ರೂಪಿಸುವುದು ಸ್ತ್ರೀವಾದಿ ಸಂಘಟನೆಗಳ ಎದುರಿರುವ ಪ್ರಮುಖ ಸಮಸ್ಯೆಯಾಗಿದೆ. ಅಂಥ ವಲಯಗಳತ್ತ ತಮ್ಮ ಹೋರಾಟವನ್ನು ವಿಸ್ತರಿಸಿಕೊಳ್ಳುವ ಮೂಲಕ. ಈ ಸ್ತ್ರೀ ಸಮುದಾಯವನ್ನು ಒಳಗೊಳ್ಳುವುದು ಸಾಧ್ಯವಾದಾಗ ನಿಜವಾಗಿ ತೀವ್ರ ಪರಿಣಾಮ ಬೀರಬಲ್ಲ ಸ್ತ್ರೀವಾದಿ ಆಂದೋಲನ ಸಾಧ್ಯವಾದೀತು. ಅದನ್ನು ಸಾಧ್ಯವಾಗಿಸಬೇಕಾದದ್ದು ಎಲ್ಲ ಸ್ತ್ರೀವಾದಿಗಳ ಮೇಲಿರುವ ಜವಾಬ್ದಾರಿಯಾಗಿದೆ.

ಬಿ. ಎನ್. ಸುಮಿತ್ರಾಬಾಯಿ

ಸಾಂದರ್ಭಿಕವಾಗಿ ಆಚಲದ ಸ್ತ್ರೀವಾದಿ ವಿಶೇಷ ಸಂಚಿಕೆಯನ್ನು ಓದುಗರ ಕೈಗಿರಿಸುತ್ತಿದ್ದೇವೆ. ಸ್ತ್ರೀವಾದಿ ಚಿಂತನೆಯ ಚರಿತ್ರೆಯ ನೋಟ, ಸಮಕಾಲೀನ ಸ್ವರೂಪ ಸಾಹಿತ್ಯ, ವಿಮರ್ಶೆಗಳ ನೆಲೆಯಲ್ಲಿ ಎಚ್ಚತ್ತಿರುವ ಸ್ತ್ರೀವಾದಿ ಪ್ರಜ್ಞೆಯ ಪರಿಚಯ ನೀಡುವ ನಮ್ಮ ಈ ಯತ್ನಕ್ಕೆ ಓದುಗರಿಂದ ಬಿಚ್ಚು ಹೃದಯದ ಅಭಿಪ್ರಾಯಗಳನ್ನು, ಪ್ರತಿಕ್ರಿಯೆಗಳನ್ನು ಬಯಸುತ್ತೇವೆ.

(4ನೇ ಪುಟದಿಂದ)

ಬದಲಾಗುತ್ತಿರುವ ಪ್ರಪಂಚಕ್ಕೆ ಹೊಂದಿಕೊಳ್ಳುತ್ತಿರುವ ಬಹುಪಾಲು ಜನರಾದ ನಾವು,—ನಾವು ಒಪ್ಪಬಹುದು ಇಲ್ಲವೆ ಬಿಡಬಹುದು—ಉದಾರಿಗಳಾಗಿಯೋ ಅಥವಾ ಹೇಗೋ ಅಂತೂ ಒಟ್ಟಿನಲ್ಲಿ ಸ್ತ್ರೀವಾದವನ್ನು ಆಚರಿಸುತ್ತಿದ್ದೇವೆ. ನಾವೇನೂ ಯಾವುದೇ ಹಣೆಪಟ್ಟಿ ಅಂಟಿಸಿಕೊಳ್ಳಬೇಕಿಲ್ಲ. 'ನೀವು ಗಂಡು–ಹೆಣ್ಣಿನ ಸಮಾನತೆಯನ್ನು ಒಪ್ಪುತ್ತೀರಾ ?' ಎಂದು ಯಾವುದೇ ಹೆಣ್ಣನ್ನು ಪ್ರಶ್ನಿಸಿ, ಆಕೆ ಕೇಳಬಹುದು 'ಹಾಗೆಂದರೇನು ?' ಅದರೆ ನೀವು ಆಕೆಯನ್ನು ಕೇಳಿ "ನಿಮ್ಮ ಮಗಳು ಇತರ ಮನುಷ್ಯರಿಗಿಂತ ಕೀಳೆ ? ಆಕೆಗೆ ವಿದ್ಯಾಭ್ಯಾಸ ಇಲ್ಲವಾಗಬೇಕೆ ? ಯಾವುದೇ ಕ್ರಿಯೆಕ್ಕೆ, ಯಾರೊಂದಿಗೋ ಚಿಕ್ಕಂದಿನಲ್ಲೇ ನಿಮ್ಮ ಮಗಳಿಗೆ ವಿವಾಹವಾಗಬೇಕೆ ? ಕುಟುಂಬ ಹಾಗೂ ಮನೆ ಬಿಟ್ಟು ಆಕೆಯ ಬದುಕಿಗೆ ಇನ್ನೇನೂ ಬೇಡವಾಗಬೇಕೆ ? ಪ್ರತಿಕೂಲ ಪರಿಸ್ಥಿತಿಯಲ್ಲೂ ಆಚೆ ಹೆಜ್ಜೆ ಇಡದೆ ಗಂಡನ ಮನೆಯಲ್ಲೇ ಇದ್ದು ಕಷ್ಟ ಸಹಿಸಿ ಆಕೆಯು ಸಾಯಬೇಕೇ ? ಆಕೆಗೆ ನಿಮ್ಮ ಬೆಂಬಲ ನೀಡದಿರುವಿರಾ ? ಈ ಪ್ರಶ್ನೆಗೆ ಆಕೆಯು 'ಹೌದು' ಎನ್ನುವಳೋ, 'ಇಲ್ಲ' ಎನ್ನುವಳೋ ? ನಾನೇಕೆ 'ಆಕೆ' ಎನ್ನಬೇಕು ? ನಿಸ್ಸಂಶಯವಾಗಿಯೂ ಬಹುಸಂಖ್ಯೆ ಪುರುಷರೂ 'ಇಲ್ಲ' ಎಂಬ ಉತ್ತರವನ್ನೇ ನೀಡಿಯಾರು. ಅಂಜಿಕೊಂಡ ಆಶ್ರಿತ, ಬಂಧಿತ, ಆಶಾಭಂಗ ಹೊಂದಿದ ಮಹಿಳೆಯರೇ ಇರದಂತಹ ಪ್ರಪಂಚವು ನಾವೆಲ್ಲ ಬದುಕಲು ತಕ್ಕ ಒಳ್ಳೆಯ ಪ್ರಪಂಚ 'ಯಾವ ಗಂಡೂ ಒಂದು ದ್ವೀಪವಲ್ಲ....'

ಕೃಪೆ : ಟೈಮ್ಸ್ ಆಫ್ ಇಂಡಿಯ

ಸ್ತ್ರೀವಾದವು ಸ್ತ್ರೀಯರನ್ನು/ಪುರುಷರನ್ನು/ಇಬ್ಬರನ್ನೂ ಅವರು ಈಗಿರುವ ರೀತಿಯಿಂದ ಬದಲಾಯಿಸಲು ಯತ್ನಿಸುವುದಷ್ಟೇ ಅಲ್ಲ, ಅವರಿಬ್ಬರ ನಡುವಿನ ಸಂಬಂಧವನ್ನೂ ಬದಲಾಯಿಸಲು ಯತ್ನಿಸುತ್ತದೆ. ಈ ಬದಲಾವಣೆಯ ತಳಹದಿಯು ಸ್ವಾಯತ್ತ ಮಹಿಳಾ ವಿಮೋಚನಾ ಆಂದೋಲನದಿಂದಲೇ ಒದಗಬೇಕಾಗಿದೆ. ಆದರೆ ಆ ಚಳವಳಿಯ ತಂತ್ರವು ಸಂಪೂರ್ಣ ಸ್ವಾಯತ್ತತೆಯ ನೀತಿಗಿಂತ ಪುರುಷರೊಂದಿಗೆ ರಾಜಕೀಯ ಒಳಗೊಳ್ಳುವಿಕೆಯನ್ನು, ತೊಡಗಿಸಿಕೊಳ್ಳುವಿಕೆಯನ್ನು ಹೊಂದಿರಬೇಕು. ಸಮಾಜವಾದಿ ಪುರುಷರೂ, ಇತರ ಪುರುಷರಂತೆಯೇ ಸ್ತ್ರೀಯರ ವಿಮೋಚನೆಯ ಮೂಲಕ ತಮ್ಮ ರಾಜಕೀಯ ಅಧಿಕಾರವನ್ನೂ ಸಾಮಾಜಿಕ ಸವಲತ್ತನ್ನೂ ಕಳೆದುಕೊಳ್ಳುವುದು ಅನಿವಾರ್ಯ. ಆದರೆ ಇತರ ಪುರುಷರಿಗಿಂತ ಅವರು ಈಗಲೂ, ಹಿಂದೆಯೂ ಸ್ತ್ರೀವಾದಿ ಹೋರಾಟಗಳನ್ನು ಬೆಂಬಲಿಸುವತ್ತ ಒಲವನ್ನು ತೋರಿದ್ದಾರೆ. ಇದು ಅವರ ಔದಾರ್ಯದ ಲಕ್ಷಣವೇನಲ್ಲ. ಮಹಿಳೆಯರ ಶೋಷಣೆಯು ಬಂಡವಾಳ ಶಾಹಿಯ ಶಿಲ್ಪದೊಳಗೇ ಬೆಸೆಯಲ್ಪಟ್ಟಿದ್ದರೆ, ಮಹಿಳೆಯರ ವಿಮೋಚನೆಗಾಗಿ ಹೋರಾಟ ಸಮಾಜವಾದಕ್ಕಾಗಿ ಹೋರಾಟ ಎರಡೂ ಪೂರ್ಣವಾಗಿ ಬೇರೆಯಾಗಿರುವುದು ಸಾಧ್ಯವಿಲ್ಲ. ಬಂಡವಾಳ ಶಾಹಿಯೊಳಗೇ ಮಹಿಳೆಯ ವಿಮೋಚನೆ ಸಾಧ್ಯವೆಂದು ನಾವು ಪರಿಕಲ್ಪಿಸುವುದು ಅಸಾಧ್ಯವಾಗಿರುವಂತೆಯೇ ಸಮಾನತೆ, ಸ್ವಾತಂತ್ರ್ಯ ಮತ್ತು ಘನತೆಗಳ ತತ್ವವನ್ನು ಲಿಂಗ–ಅಸಮಾನತೆಯ ಮೂಲಕ ನಾಶಪಡಿಸಿಕೊಂಡಿರುವಂಥ ಸಮಾಜವಾದವನ್ನು ಪರಿಕಲ್ಪಿಸುವುದೂ ಅಸಾಧ್ಯ.

—ಮಿಷೆಲ್ ಬ್ಯಾರೆಟ್

(Womenis oppression today) ಯಿಂದ

Reg No MAG (5) PRC,DEGL 036/86/87
BOOK-POST/Periodicals

To,

If undelivered please return to :
Jagruthi Mahila Adhyayana Kendra
401, Vijay Tower, 2nd Main, RPC Layout
Vijayanagar, II Stage, Bangalore-40
Pin-560 040